ಶನಿವಾರ, ಜೂನ್ 7, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಿರ್ಜಲ ಏಕಾದಶಿ.. ಬಿಹಾರದ ಪಟ್ನಾದಲ್ಲಿ ಶುಕ್ರವಾರ 'ನಿರ್ಜಲ ಏಕಾದಶಿ' ನಿಮಿತ್ತ ಗಂಗಾನದಿಯಲ್ಲಿ ಭಕ್ತರು ಪುಣ್ಯಸ್ನಾನ ಮಾಡಿ, ವಿಶೇಷ ಪೂಜೆ ನೆರವೇರಿಸಿದರು




RERA No: PRM/KA/RERA/1250/303/PR/010425/007644, available at website: http://rera.karnataka.gov.in.
BARCA AT GODREJ MSR CITY
NEAR AIRPORT TOLL, DEVANAHALLI
A NEW WAY OF LIVING,
INSPIRED BY Barcelona.
2 AND 3 BHK HOMES IN A MEDITERRANEAN-THEMED TOWNSHIP
STARTING AT ₹1.23 CR*
1.25 ACRES OF KIDS' PLAY AREA
BARCELONA-THEMED ARCHITECTURE
GAUDI POOL
GRAND CLUBHOUSE
Artist's impression and not actual site image.
8506045559 / 8506046468
Godrej | PROPERTIES

ಶನಿವಾರ, ಜೂನ್ 7, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 157 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಹುಲ್ ಶತಕ

ಭಾರತ ಎ ತಂಡದ ಬ್ಯಾಟರ್ ಕೆ.ಎಲ್. ರಾಹುಲ್ ಅವರು ನಾರ್ತಾಂಪ್ಟನ್‌ನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ಲಯನ್ಸ್ ವಿರುದ್ಧದ ಎರಡನೇ 'ಟೆಸ್ಟ್' ಪಂದ್ಯದಲ್ಲಿ ಶುಕ್ರವಾರ ಆಕರ್ಷಕ ಶತಕ ಸಿಡಿಸಿದರು.



116 ರನ್ | 168 ಎಸೆತ | 15 ಬೌಂಡರಿ | 1 ಸಿಕ್ಸರ್

ಆಳ-ಅಗಲ: ರಾಜಕೀಯ ಕಿಚ್ಚು ಹಚ್ಚಿದ ಹೇಮಾವತಿ ನೀರು

ಈದ್ -ಉಲ್- ಅದಾ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,188	25,003	₹1.02 ಲಕ್ಷ (ಬೆಂಗಳೂರು)	₹1.12 ಲಕ್ಷ (ಬೆಂಗಳೂರು)	85.68

ಶಾಸಕ ವಿನಯ ಜಾಮೀನು ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಮುಖಂಡ ಯೋಗೀಶ್‌ಗೌಡ ಗೌಡರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿಗೆ ಮಂಜೂರು ಮಾಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ಶುಕ್ರವಾರ ರದ್ದುಪಡಿಸಿದೆ.

'ಸಾಕ್ಷಿಗಳನ್ನು ಸಂಪರ್ಕಿಸಲು ಹಾಗೂ ಅವರ ಮೇಲೆ ಪ್ರಭಾವ ಬೀರಲು ಶಾಸಕ, ಮತ್ತೊಬ್ಬ ಆರೋಪಿಯತ್ನಿಸಿದ್ದಾರೆ. ಇದು, ಷರತ್ತು ಉಲ್ಲಂಘನೆಯಾಗಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

5ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ




ಕಾಲ್ತುಳಿತ: ಸಂಭಾವ್ಯ ಅನಾಹುತದ ಎಚ್ಚರಿಕೆ ನೀಡಲು ಗುಪ್ತಚರ ವೈಫಲ್ಯ: ನಿಂಬಾಳ್ಕರ್ ಎತ್ತಂಗಡಿ

ಗೋವಿಂದರಾಜು ವಿಕೆಟ್ ಪತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಅಮಾನತು ಕ್ರಮದ ಬೆನ್ನಲ್ಲೇ, ವಿಧಾನಪರಿಷತ್ ಸದಸ್ಯ ಕೆ.ಗೋವಿಂದರಾಜು ಅವರನ್ನು 'ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ' ಹುದ್ದೆಯಿಂದ ತೆಗೆದು ಹಾಕಲಾಗಿದೆ.



ಗೋವಿಂದರಾಜು

ದುರಂತಕ್ಕೆ ಸರ್ಕಾರದ ವೈಫಲ್ಯ ಕಾರಣ ಎಂಬ ಗಂಭೀರ ಆರೋಪ ಎದುರಾಗಿತ್ತು. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ಅನಾಹುತಕ್ಕೆ ಹೊಣೆಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯವನ್ನು ಹಲವು ಸಚಿವರು ಮಾಡಿದ್ದರು. ಹೀಗಾಗಿ, ಸಚಿವ ಸಂಪುಟ ಸಭೆ ಮುಗಿದ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಚಿವರು, ಅಧಿಕಾರಿಗಳ ಜತೆ ಸಮಾಲೋಚನೆ ನಡೆಸಿದ್ದರು. ಸ್ವತಃ ಸುದ್ದಿಗೋಷ್ಠಿ ನಡೆಸಿದ್ದ ಅವರು, ಸರ್ಕಾರ ಕೈಗೊಂಡ ಕ್ರಮಗಳನ್ನು ವಿವರಿಸಿದ್ದರು.

ಈ ಬೆಳವಣಿಗೆಯ ಬೆನ್ನಲ್ಲೇ, ಲೋಪ ಎಸಗಿದ್ದಾರೆ ಎಂಬ ಆರೋಪ ಹೊತ್ತಿರುವ ಐಪಿಎಸ್ ಅಧಿಕಾರಿಗಳಾದ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್, ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿ ಎಚ್.ಟಿ.ಶೇಖರ್, ಕಬ್ಬನ್ ಪಾರ್ಕ್ ಎಸಿಪಿ ಸಿ.ಬಾಲಕೃಷ್ಣ ಹಾಗೂ ಪೊಲೀಸ್ ಇನ್‌ಸ್ಪೆಕ್ಟರ್ ಎ.ಕೆ.ಗಿರೀಶ್ ಅವರನ್ನು ಗುರುವಾರ ರಾತ್ರಿ ಅಮಾನತು ಮಾಡಲಾಗಿತ್ತು.

ಈ ಬೆಳವಣಿಗೆಗಳ ಭಾಗವಾಗಿಯೇ, ಸಿದ್ದರಾಮಯ್ಯ ಅವರು ತಮ್ಮ ಆಪ್ತ ಗೋವಿಂದರಾಜು ವಿರುದ್ಧವೂ ಕ್ರಮ ತೆಗೆದುಕೊಂಡಿದ್ದಾರೆ.

9ನೇ ಪುಟ ನೋಡಿ



ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಕರೆದೊಯ್ದ ಕಬ್ಬನ್‌ಪಾರ್ಕ್ ಠಾಣೆಯ ಪೊಲೀಸರು — ಪ್ರಜಾವಾಣಿ ಚಿತ್ರ

ಡಿಎನ್‌ಎ, ಆರ್‌ಸಿಬಿಯ ನಾಲ್ವರ ಬಂಧನ

ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ತಂಡದ ವಿಜಯೋತ್ಸವದ ವೇಳೆ ಕಾಲ್ತುಳಿತದಿಂದ ಉಂಟಾದ ಸಾವು–ನೋವು ಪ್ರಕರಣ ಸಂಬಂಧ ಆರ್‌ಸಿಬಿಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ, ಡಿಎನ್‌ಎ ಮ್ಯಾನೇಜ್‌ಮೆಂಟ್ (ಇವೆಂಟ್ ಮ್ಯಾನೇಜ್‌ಮೆಂಟ್) ಸಿಬ್ಬಂದಿ ಸುನಿಲ್ ಮ್ಯಾಥ್ಯು, ಕಿರಣ್ ಮತ್ತು ಸುಮಂತ್ ಎಂಬವರನ್ನು ಕೇಂದ್ರ ಅಪರಾಧ ದಳ ಹಾಗೂ ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

11ನೇ ಪುಟ ನೋಡಿ

ವಿಜಯೋತ್ಸವದ ಖರ್ಚು ₹15 ಕೋಟಿ?

ಆರ್‌ಸಿಬಿ 'ವಿಜಯೋತ್ಸವ' ಕಾರ್ಯಕ್ರಮಕ್ಕಾಗಿ (ವಿಧಾನಸೌಧ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣ) ಸುಮಾರು ₹15 ಕೋಟಿಗೂ ಹೆಚ್ಚು ಖರ್ಚಾಗಿರುವುದಾಗಿ ಗೊತ್ತಾಗಿದೆ.

ಐಪಿಎಲ್‌ನ ಇವೆಂಟ್ ಮ್ಯಾನೇಜ್‌ಮೆಂಟ್ ಜವಾಬ್ದಾರಿ ಹೊತ್ತಿರುವ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯೇ ವಿಜಯೋತ್ಸವ ಕಾರ್ಯಕ್ರಮದ ಜವಾಬ್ದಾರಿ ವಹಿಸಿಕೊಂಡಿತ್ತು. ಈ ಕಂಪನಿ ರಾಜ್ಯದ ಮಾಜಿ ಮುಖ್ಯಮಂತ್ರಿಯೊಬ್ಬರ ಮೊಮ್ಮಕ್ಕಳಿಗೆ ಸೇರಿದ್ದು, ಸರ್ಕಾರದಲ್ಲಿ ಪ್ರಭಾವ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಜಯೋತ್ಸವವನ್ನು ಶನಿವಾರ ಹಮ್ಮಿಕೊಳ್ಳಬೇಕು ಎಂಬುದು ಆರಂಭದ ಯೋಜನೆಯಾಗಿತ್ತು. ಆದರೆ, ಪ್ರಮುಖ ಸಚಿವರೊಬ್ಬರ ಒತ್ತಡದ ಕಾರಣ ತರಾತುರಿಯಲ್ಲಿ ಬುಧವಾರವೇ ನಿಗದಿ ಮಾಡಲಾಯಿತು. ಹೀಗಾಗಿ ಕ್ರೀಡಾಂಗಣ ಮತ್ತು ವಿಧಾನಸೌಧದ ಬಳಿ ಸೇರಬಹುದಾದ ಜನಸಂಖ್ಯೆ ಮತ್ತು ಅದನ್ನು ನಿಭಾಯಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಯೋಚಿಸುವಲ್ಲಿ ಡಿಎನ್‌ಎ ಸಂಸ್ಥೆಯೂ ಎಡವಿದೆ ಎಂದು ಮೂಲಗಳು ಹೇಳಿವೆ.

ವಿಜಯೋತ್ಸವಕ್ಕೆ ಅಧಿಕಾರಿಗಳ ಒತ್ತಡ: ವಿಧಾನಸೌಧದ ಮೆಟ್ಟಿಲುಗಳ ಮೇಲೆ ವಿಜಯೋತ್ಸವ ನಡೆಸಲು ಸಚಿವರು ಮಾತ್ರವಲ್ಲದೇ ಮುಖ್ಯಕಾರ್ಯದರ್ಶಿಯಾದಿಯಾಗಿ ಹಲವು ಹಿರಿಯ ಅಧಿಕಾರಿಗಳೂ ಮುತುವರ್ಜಿ ವಹಿಸಿದ್ದರು. ಆರ್‌ಸಿಬಿ 18 ವರ್ಷಗಳಲ್ಲಿ ಮೊದಲ ಬಾರಿಗೆ ಗೆದ್ದಿರುವುದರಿಂದ ವಿಧಾನಸೌಧದ ಮುಂದೆ ವಿಜಯೋತ್ಸವ ಆಚರಿಸಬೇಕು ಎಂದು ಮುಖ್ಯಮಂತ್ರಿಯವರಿಗೆ ಸಲಹೆ ನೀಡಿದರು ಎಂದು ಮೂಲಗಳು ತಿಳಿಸಿವೆ.

9ನೇ ಪುಟ ನೋಡಿ

ರೆಪೊ ಇಳಿಕೆ: ಸಾಲ ಅಗ್ಗ

ಮುಂಬೈ (ಪಿಟಿಐ): ರೆಪೊ ದರವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶೇಕಡ 0.50ರಷ್ಟು ಕಡಿಮೆ ಮಾಡಿರುವ ಕಾರಣದಿಂದಾಗಿ ಗೃಹಸಾಲ, ವಾಹನ ಸಾಲ ಮತ್ತು ಇತರ ಕೆಲವು ಸಾಲಗಳು ಅಗ್ಗವಾಗುವ ಸಾಧ್ಯತೆ ಇದೆ.



ಅರ್ಥ ವ್ಯವಸ್ಥೆಗೆ ಉತ್ತೇಜನ ನೀಡುವ ಉದ್ದೇಶದಿಂದ ಆರ್‌ಬಿಐ, ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ಶೇಕಡ 1ರಷ್ಟು ಕಡಿಮೆ ಮಾಡಿದೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ನೇತೃತ್ವದ ಆರು ಸದಸ್ಯರ ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ತಗ್ಗಿಸುವ ತೀರ್ಮಾನವನ್ನು ಶುಕ್ರವಾರ ತೆಗೆದುಕೊಂಡಿತು. ದರ ಇಳಿಕೆಯ ಪರವಾಗಿ ಐದು ಮಂದಿ ಮತ ಚಲಾಯಿಸಿದರು.

ಈ ಇಳಿಕೆಯಿಂದ ರೆಪೊ ದರವು ಶೇ 5.5ಕ್ಕೆ ಬಂದಿದೆ, ಈ ವರ್ಷದಲ್ಲಿ ಆರ್‌ಬಿಐ ರೆಪೊ ದರವನ್ನು ಒಟ್ಟು ಶೇ 1ರಷ್ಟು ಕಡಿಮೆ ಮಾಡಿದಂತಾಗಿದೆ. ಫೆಬ್ರುವರಿ ಮತ್ತು ಏಪ್ರಿಲ್‌ನಲ್ಲಿ ರೆಪೊ ದರವನ್ನು ತಲಾ ಶೇ 0.25ರಷ್ಟು ಕಡಿಮೆ ಮಾಡಲಾಗಿತ್ತು.

8ನೇ ಪುಟ ನೋಡಿ

ಒಬ್ಬಂಟಿ ಹೋರಾಟ: ಬಾಲ್ಯ ವಿವಾಹ ತಪ್ಪಿಸಿಕೊಂಡ ಬಾಲೆ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ತನ್ನ ಮದುವೆ ಮಾಡಲು ಹೊರಟ ಪಾಲಕರು ಮತ್ತು ಸಂಬಂಧಿಗಳ ವಿರುದ್ಧ ಬಾಲಕಿಯೊಬ್ಬಳು ದಿಟ್ಟತನದಿಂದ ಹೋರಾಡಿ, ಬಾಲ್ಯ ವಿವಾಹದಿಂದ ಪಾರಾಗಿರುವ ಘಟನೆ ಜಿಲ್ಲೆಯಲ್ಲಿ ಜೂನ್ 4ರಂದು ನಡೆದಿದೆ.

ಚಳ್ಳಕೆರೆ ತಾಲ್ಲೂಕಿನ ಗ್ರಾಮವೊಂದರ, 8ನೇ ತರಗತಿ ವಿದ್ಯಾರ್ಥಿನಿಯನ್ನು ಆಕೆಯ ಸೋದರಮಾವನಿಗೆ ಕೊಟ್ಟು ಮದುವೆ ಮಾಡಲು ಪಾಲಕರು ಸಿದ್ಧತೆ ಮಾಡಿಕೊಂಡಿದ್ದರು. ಮದುವೆ ವಿಚಾರ ಮೊದಲು ಬಾಲಕಿಗೆ ತಿಳಿದಿರಲಿಲ್ಲ. ತನಗರಿವಿಲ್ಲದೆಯೇ ಮದುವೆ ಮಾಡಿಸುತ್ತಿರುವುದು ಗೊತ್ತಾಗುತ್ತಿದ್ದಂತೆಯೇ ಬಾಲಕಿ ಪಾಲಕರ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿದ್ದಳು.

'ಅಪ್ಪಾ, ಅಮ್ಮಾ, ದೊಡ್ಡಪ್ಪ, ದೊಡ್ಡಮ್ಮ ನನಗೆ ಮದುವೆ ಬೇಡ. ತಾಳಿ ಕಟ್ಟಿಸಬೇಡಿ. ನನ್ನನ್ನು ಕಾಪಾಡಿ. ನಿಮ್ಮ ಕಾಲಿಗೆ ಬೀಳುತ್ತೇನೆ ರಕ್ಷಿಸಿ' ಎಂದು 14 ವರ್ಷದ ಆ ಬಾಲಕಿ ಗೋಳಿಟ್ಟರೂ ಕಿವಿಗೊಡದ ಪಾಲಕರು, ಸಂಬಂಧಿಕರು ಆಕೆಯನ್ನು ಥಳಿಸಿ, ಹಿಂಸಿಸಿ, ನೆಲಕ್ಕೆ ಬೀಳಿಸಿ ಸೋದರ ಮಾವನಿಂದ ತಾಳಿ ಕಟ್ಟಿಸಲು ಯತ್ನಿಸಿದ್ದರು.

6ನೇ ಪುಟ ನೋಡಿ



ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಗಿಡಗಳನ್ನು ನೆಡಲಾಯಿತು. ಪ್ರಭಾರ ಕುಲಪತಿ ಪ್ರೊ. ಕೆ.ಆರ್ ಜಲಜಾ, ಪರಿಸರಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಪಿ.ಆರ್.ಚೇತನ ಹಾಗೂ ಎನ್.ಎಸ್.ಎಸ್. ಸಂಯೋಜಕ ಗೋವಿಂದೇಗೌಡ ಪಾಲ್ಗೊಂಡಿದ್ದರು

‘ನಿರ್ಗತಿಕರಿಗೆ ನ್ಯಾಯ ಕೊಟ್ಟ ಅರಸು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ರಾಜ್ಯದ ಮುತ್ಸದ್ದಿ ರಾಜಕಾರಣಿಗಳಲ್ಲಿ ಒಬ್ಬರು. ಬಡವರು, ಅವಕಾಶ ವಂಚಿತರಬಗ್ಗೆ ಕಾಳಜಿ ಹೊಂದಿದ್ದರು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದೇವರಾಜ ಅರಸು ಅವರ 43ನೇ ಪುಣ್ಯಸ್ಮರಣೆ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಅರಸು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

‘ರಾಜಕೀಯದಲ್ಲಿ ಅವಕಾಶವೇ ಸಿಗದ ಜನಾಂಗದವರಿಗೆ ಪ್ರಾತಿನಿಧ್ಯ ದೊರಕಿಸಿಕೊಟ್ಟರು. ಹಾವನೂರು ಆಯೋಗವನ್ನು ರಚನೆ ಮಾಡಿ, ಅದರ ವರದಿ ಜಾರಿ ಮಾಡಿ ಉದ್ಯೋಗದಲ್ಲಿ ಮೀಸಲಾತಿ ಕೊಟ್ಟರು’ ಎಂದು ಸಿದ್ದರಾಮಯ್ಯ ಹೇಳಿದರು.

‘ನಮ್ಮ ಸರ್ಕಾರ ಅರಸು ಅವರ ಕೆಲಸಗಳಿಂದ ಸ್ಫೂರ್ತಿ ಪಡೆದು ಸಾಮಾಜಿಕ ನ್ಯಾಯದೆಡೆಗೆ ದೃಢ ಹೆಜ್ಜೆಗಳನ್ನು ಇರಿಸಿದೆ. ಅದೇ ಅವರಿಗೆ ಸಲ್ಲಿಸುವ ಗೌರವ’ ಎಂದರು.



ದೇವರಾಜ ಅರಸು ಅವರ ಭಾವಚಿತ್ರಕ್ಕೆ ಸಿದ್ದರಾಮಯ್ಯ ಅವರು ಮಾಲಾರ್ಪಣೆ ಮಾಡಿದರು. ಶಿವರಾಜ ತಂಗಡಗಿ ಪಾಲ್ಗೊಂಡಿದ್ದರು

ನಗರದಲ್ಲಿ ಇಂದು

ಆರ್.ಕೆ.ಲಕ್ಷ್ಮಣ್ ಅವರ ಸ್ಮರಣಾರ್ಥ ವ್ಯಂಗ್ಯಚಿತ್ರಗಳ ಪ್ರದರ್ಶನ: ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್, ಸ್ಥಳ: ಇಂಡಿಯನ್ ಕಾರ್ಟೂನ್ ಗ್ಯಾಲರಿ, ಮಿಡ್‌ಫೋರ್ಡ್ ಹೌಸ್, ಎಂ.ಜಿ. ರಸ್ತೆ, ಬೆಳಿಗ್ಗೆ 10

ಹಿಂದೂಸ್ತಾನಿ ಸಂಗೀತ ಕಛೇರಿ: ಗಾಯನ: ಮೇಧಾ ಭಟ್, ಮೃದಂಗ: ಹರೀಶ್ ಕರ್ಣಂ, ತಬಲಾ: ವಿಘ್ನೇಶ್ ಕಾಮತ್, ಆಯೋಜನೆ ಹಾಗೂ ಸ್ಥಳ: ಶಂಕರ ಕ್ಯಾನ್ಸರ್ ಆಸ್ಪತ್ರೆ, ಶಂಕರಪುರ, ಬಸವನಗುಡಿ, ಸಂಜೆ 4.30

‘ವಿಶ್ವಮಾನವ ಕುವೆಂಪು ಕನ್ನಡರತ್ನ ಪ್ರಶಸ್ತಿ’ ಪ್ರದಾನ: ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಅತಿಥಿಗಳು: ಸಂತೋಷ್ ಹೆಗ್ಡೆ, ಕೆ. ಗೋಪಾಲಯ್ಯ, ಪ್ರಶಸ್ತಿ ಪುರಸ್ಕೃತರು: ಎಂ.ಎಸ್. ಉಮೇಶ್, ತಲಕಾಡು ಚಿಕ್ಕರಂಗೇಗೌಡ, ಭಾಗ್ಯಲಕ್ಷ್ಮಿ ಮಗ್ಗೆ, ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ನಂದಿನಿ ಲೇಔಟ್ ಕ್ಲಬ್ ಸಭಾಂಗಣ, ಸಂಜೆ 5

ರಂಗಸಂವಾದ: ತಿಂಗಳ ಅತಿಥಿ: ರಿಚರ್ಡ್ ಲೂಯಿಸ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರಂಗಚಾವಡಿ, ಕರ್ನಾಟಕ ನಾಟಕ ಅಕಾಡೆಮಿ ಆವರಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5



ರಿಚರ್ಡ್ ಲೂಯಿಸ್

ನೃತ್ಯ ಪ್ರದರ್ಶನ: ಅದಿತಿ ಶ್ರೀಕಾಂತ್, ದೇವಾಂಗಶ್ರೀ, ನಂದಿನಿ ಖೇಮ್ಕಾ, ಸಾನ್ವಿ ಶ್ರೀನಿವಾಸ್, ಶ್ರುತಿ ನಟರಾಜನ್, ಅತಿಥಿಗಳು: ತೇಜಸ್ವಿ ಸೂರ್ಯ, ಶಿವಶ್ರೀ ಸ್ಕಂದಪ್ರಸಾದ್, ಸಿ.ಕೆ. ರಾಮಮೂರ್ತಿ, ನಾಗರತ್ನ ರಾಮಮೂರ್ತಿ, ಚಿನ್ಮಯಾನಂದ, ನಂದಿನಿ ಕೆ. ಮೆಹ್ತಾ, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸಂಜೆ 5

ಮಹಾಕುಂಭಾಭಿಷೇಕ ಮಹೋತ್ಸವ: ಧಾರ್ಮಿಕ ಉಪನ್ಯಾಸ: ಹಾರಿಕಾ ಮಂಜುನಾಥ, ಭಕ್ತಿಗೀತೆಗಳ ರಸಮಂಜರಿ: ಪುತ್ತೂರು ನರಸಿಂಹನಾಯಕ್, ಆಯೋಜನೆ: ಶ್ರೀ ವಿಘ್ನೇಶ್ವರ ಸಾರ್ವಜನಿಕ ವಿಶ್ವಸ್ಥ ಮಂಡಳಿ, ಸ್ಥಳ: ವಿಘ್ನೇಶ್ವರ ದೇವಸ್ಥಾನ, 26ನೇ ಮುಖ್ಯರಸ್ತೆ, ಬಿಟಿಎಂ ಬಡಾವಣೆ 2ನೇ ಹಂತ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಸಾನಿಕ, ಜನರಕ್ಷಿತ , ಅಧ್ಯಕ್ಷತೆ: ಶಮಂತ ಲಿಂಗರಾಜು, ನಾಗಲಕ್ಷ್ಮಿ ಕೆ. ರಾವ್, ಮುಖ್ಯ ಅತಿಥಿ: ವೈ.ಕೆ. ಸಂಧ್ಯಾಶರ್ಮ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ವೈಯಾಲಿಕಾವಲ್, ಸಂಜೆ 5.30

ಕೆ.ಎನ್.ಶೈಲೇಶ್ ಹೊಳ್ಳ ಅವರ ‘ಗೋಜ್ಞಾನ’, ‘ಗೋವಿಜ್ಞಾನ’, ‘ಗೋಸಂಪನ್ನ’ ‘ಗೋ ಅಂಕಣ’ ಹಾಗೂ ‘ಗೋಸಂಪದ’ ಕೃತಿಗಳ ಬಿಡುಗಡೆ: ಬಿ.ಎಲ್. ಸಂತೋಷ್, ಕೆ.ಎನ್. ಚನ್ನೇಗೌಡ, ಎಸ್.ಆರ್.ಲೀಲಾ, ಹನುಮಂತ ಮಳಲಿ, ಎಸ್.ಎನ್. ರಾಮಸ್ವಾಮಿ, ಆಯೋಜನೆ: ಮೇರು ಪ್ರಕಾಶನ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 5.30

ಮಾಸದ ಮೆಲುಕು 150, ಕಾಳಿಂಗ ನಾವಡ @69 ನೆನಪಿನ ಯಾನ: ಉಪಸ್ಥಿತಿ: ಆನಂದರಾಮ ಉಪಾಧ್ಯ, ಕೋಟ ಶಿವಾನಂದ, ಶಶಿಕಾಂತ್ ಆಚಾರ್ಯ ಹಾಲಾಡಿ, ಅಂಬರೀಷ್ ಭಟ್, ರಾಧಾಕೃಷ್ಣ ಉರಾಳ, ಮುರಳೀಧರ ನಾವಡ, ಸಚ್ಚಿದಾನಂದಮೂರ್ತಿ, ಪರಿಕಲ್ಪನೆ ಮತ್ತು ನಿರ್ದೇಶನ: ರಾಧಾಕೃಷ್ಣ ಉರಾಳ, ಆಯೋಜನೆ: ಕಲಾ ಕದಂಬ ಆರ್ಟ್ ಸೆಂಟರ್, ಸ್ಥಳ: ಮನೋರಂಜಿನಿ ಸಭಾಂಗಣ, ಸಿದ್ಧಿಗಣಪತಿ ದೇವಾಲಯ, ಕೆಎಸ್ಆರ್‌ಟಿಸಿ ಲೇಔಟ್, ಚಿಕ್ಕಲ್ಲಸಂದ್ರ, ಸಂಜೆ 6



ಕಾಳಿಂಗ ನಾವಡ


‘ಇಷ್ಟು ಕಾಲ ಒಟ್ಟಿಗಿದ್ದು...’ ಎಚ್ಚೆಸ್ವಿ ಗೀತನಮನ: ಕಿಕ್ಕೇರಿ ಕೃಷ್ಣಮೂರ್ತಿ, ನಾಗಚಂದ್ರಿಕಾ ಭಟ್, ಪ್ರವೀಣ ಬಿ.ವಿ., ಪಂಚಮ ಹಳಬಂಡಿ, ಪ್ರದೀಪ್ ಬಿ.ವಿ., ಸುಪ್ರಿಯಾ ರಘುನಂದನ್, ದಿವಾಕರ ಕಶ್ಯಪ್, ಚಾಂದಿನಿ ಗರ್ತಿಗೆರೆ, ನುಡಿನಮನ: ಟಿ.ಎಸ್. ನಾಗಾಭರಣ, ಬಿ.ಆರ್. ಲಕ್ಷ್ಮಣರಾವ್, ಜೋಗಿ, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6



ಎಚ್.ಎಸ್.ವಿ

‘ಸರಸ ವಿರಸ ಸಮರಸ’ ಹಾಸ್ಯ ನಾಟಕ ಪ್ರದರ್ಶನ: ಆಯೋಜನೆ: ಸುಸ್ಥಿರ ಫೌಂಡೇಷನ್, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



ಸಮರ್ಪಕ ಭದ್ರತಾ ವ್ಯವಸ್ಥೆಗೆ ಸಮಯಾವಕಾಶ ಬೇಕು: ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್

ಕಾಲ್ತುಳಿತ ದುರಂತ: ಇಲಾಖೆಗೂ ಪಾಠ

• ಆದಿತ್ಯ ಕೆ.ಎ.

ನಗರದ 39ನೇ ಪೊಲೀಸ್ ಕಮಿಷನರ್ ಆಗಿ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಅವರು ನೇಮಕಗೊಂಡಿದ್ದಾರೆ. ಭದ್ರತೆ ಹಾಗೂ ಕಾನೂನು ಸುವ್ಯವಸ್ಥೆ ಪಾಲನೆ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣ, ಇದರ ತನಿಖೆ ಕುರಿತು ಅವರು 'ಪ್ರಜಾವಾಣಿ' ಜೊತೆ ಮಾತನಾಡಿದ್ದು ಅದರ ವಿವರ ಇಲ್ಲಿದೆ.

ಪ್ರಜಾವಾಣಿ ಸಂದರ್ಶನ

• ಹೊಸ ಜವಾಬ್ದಾರಿಯ ಬಗ್ಗೆ ಅನಿಸಿಕೆ?

ಪರಿಸ್ಥಿತಿ ಬಗ್ಗೆ ನಿಮ್ಮೆಲ್ಲರಿಗೂ ಗೊತ್ತಿದೆ. ಸರ್ಕಾರದ ಆದೇಶದಂತೆ ಗುರುವಾರ ತಡರಾತ್ರಿಯೇ ಅಧಿಕಾರ ಸ್ವೀಕರಿಸಿ, ಪೊಲೀಸ್ ಅಧಿಕಾರಿಗಳ ಜತೆಗೆ ಸಭೆಯನ್ನೂ ನಡೆಸಿದ್ದೇನೆ. ಆದ್ಯತಾ ವಲಯವನ್ನು ಗುರುತಿಸಿ ಇಲಾಖೆಯ ಎಲ್ಲ ಸಿಬ್ಬಂದಿ ಸೇರಿ ಕೆಲಸ ಮಾಡುತ್ತೇವೆ. ಬೆಂಗಳೂರು ನಗರದಲ್ಲಿ ಕೆಲಸ ಮಾಡಿದ್ದ ಕಾರಣಕ್ಕೆ ಇಲ್ಲಿನ ಪರಿಸ್ಥಿತಿಯ ಅರಿವಿದೆ. ನಗರ ವಿಸ್ತಾರವಾಗಿದೆ. ಅದಕ್ಕೆ ತಕ್ಕಂತೆ ಭದ್ರತಾ ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಮತ್ತೆ ಮೂರು ಠಾಣೆಗಳು ಕಮಿಷನರೇಟ್ ವ್ಯಾಪ್ತಿಗೆ ಸೇರಿವೆ.

• ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣದ ತನಿಖೆ ಯಾವ ಹಂತದಲ್ಲಿದೆ?

ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸದ್ಯ ನಾಲ್ವರನ್ನು ಬಂಧಿಸಲಾಗಿದೆ. ಪ್ರಕರಣದ ತನಿಖೆಯನ್ನು ಸಿಐಡಿಗೆ ಹಸ್ತಾಂತರ ಮಾಡಲಾಗುವುದು. ವಿಶೇಷ ತನಿಖಾ ದಳ ರಚಿಸಿ ಕೂಲಂಕಷವಾಗಿ ತನಿಖೆ ನಡೆಸಲಾಗುವುದು. ಯಾರದ್ದು ತಪ್ಪು? ಹೇಗೆ ದುರಂತ ನಡೆಯಿತು? ಎಲ್ಲಿ ಲೋಪವಾಗಿದೆ ಎಂಬುದನ್ನೂ ಪತ್ತೆ ಮಾಡುತ್ತೇವೆ.



• ಕಾಲ್ತುಳಿತ ಪ್ರಕರಣದಿಂದ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಈ ಕ್ರಮದಿಂದ ಸಿಬ್ಬಂದಿ ಹಾಗೂ ಅಧಿಕಾರಿಗಳ ಆತ್ಮಸ್ಥೈರ್ಯ ಕುಗ್ಗಿದೆಯೇ?

ಸಿಬ್ಬಂದಿ ಹಾಗೂ ಅಧಿಕಾರಿಗಳು ಆತ್ಮಸ್ಥೈರ್ಯ ಕಳೆದುಕೊಂಡಿಲ್ಲ. ನಮ್ಮವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅದನ್ನು ಮುಂದುವರೆಸುತ್ತೇವೆ. ಸಿಬ್ಬಂದಿ ಕೆಲಸಕ್ಕೆ ಪ್ರೋತ್ಸಾಹ ನೀಡಲಾಗುವುದು. ಜನರು ಪೊಲೀಸರಿಗೆ, ಪೊಲೀಸರು ಜನರಿಗೆ ಗೌರವ ನೀಡುವ ವಾತಾವರಣ ಕಲ್ಪಿಸುತ್ತೇವೆ.

• ಮುಂದೆ ಕ್ರಿಕೆಟ್ ಪಂದ್ಯ, ಸಭೆ-ಸಮಾರಂಭಗಳಿಗೆ ಭದ್ರತಾ ವ್ಯವಸ್ಥೆ ಹೇಗಿರಲಿದೆ?

ಭದ್ರತಾ ವ್ಯವಸ್ಥೆ ಹೇಗಿರುತ್ತದೆ ಎಂದು ಈಗಲೇ ಹೇಳಲಾಗದು. ಆದರೆ, ಮೂಲ ಪೊಲೀಸ್ ವ್ಯವಸ್ಥೆಗೆ ಒತ್ತು ನೀಡಲಾಗುವುದು. ಕಾರ್ಯಕ್ರಮಕ್ಕೆ ಸೇರುವ ಜನಸಂಖ್ಯೆ ಆಧರಿಸಿ ಸಿಬ್ಬಂದಿ ನಿಯೋಜಿಸುತ್ತೇವೆ.

ಸೀಮಂತ್ ಕುಮಾರ್ ಸಿಂಗ್

• ವಿಜಯೋತ್ಸವ, ಸಭೆ–ಸಮಾರಂಭಕ್ಕೆ ಅನುಮತಿ ಪಡೆಯಲು ಎಷ್ಟು ದಿನ ಮೊದಲು ಮನವಿ ಸಲ್ಲಿಸಬೇಕು?

ಚಳವಳಿ, ಪ್ರತಿಭಟನೆ, ರ‍್ಯಾಲಿ, ಸಭೆ–ಸಮಾರಂಭ ಹಾಗೂ ವಿಜಯೋತ್ಸವಕ್ಕೆ ಸೇರುವ ಜನಸಂಖ್ಯೆ ಒಂದೊಂದು ರೀತಿಯಲ್ಲಿ ಇರುತ್ತದೆ. ಯಾವ ರೀತಿಯ ಗುಂಪು ಜಮಾವಣೆ ಆಗಲಿದೆ ಎಂಬುದು ಬಹಳ ಮುಖ್ಯ. ವಿಜಯೋತ್ಸವಕ್ಕೆ ಬರುವವರ ವರ್ತನೆಯೂ ಭಿನ್ನ. ಆದ್ದರಿಂದ, ಭದ್ರತಾ ವ್ಯವಸ್ಥೆ ಕಲ್ಪಿಸಲು ಇಲಾಖೆಗೆ ಸಮಯಾವಕಾಶ ಬೇಕು. ತರಾತುರಿಯಲ್ಲಿ ಮನವಿ ಮಾಡಿದರೆ ಭದ್ರತಾ ವ್ಯವಸ್ಥೆಗೆ ತೊಂದರೆ ಆಗಲಿದೆ. ಹೆಚ್ಚಿನ ಜನರು ಬರುವ ಕಾರ್ಯಕ್ರಮಕ್ಕೆ ಮೊದಲೇ ಅನುಮತಿ ಪಡೆದುಕೊಳ್ಳಬೇಕು. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ದುರಂತದ ಬಗ್ಗೆ ನೋವಿದೆ. ಒಬ್ಬರ ಮೇಲೆ ಆಪಾದನೆ ಮಾಡುವುದು ತಪ್ಪು. ಈ ದುರಂತವು ಇಲಾಖೆಗೂ ಒಂದು ಪಾಠ. ಕಪ್ಪುಚುಕ್ಕೆಯಾಗಿ ಪರಿಣಮಿಸಿದ್ದು ಈ ರೀತಿಯ ಘಟನೆ ಮರುಕಳಿಸುವುದಿಲ್ಲ.

• ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿ ಹಾಕಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ, ವೈಷಮ್ಯ ಬಿತ್ತುವ ಕೆಲಸ ನಡೆಯುತ್ತಿದೆ. ನಿಯಂತ್ರಣಕ್ಕೆ ಕೈಗೊಳ್ಳುವ ಕ್ರಮವೇನು?

ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಲಾಗುತ್ತಿದೆ. ಇನ್ನೂ ಹೆಚ್ಚಿನ ನಿಗಾ ವಹಿಸಲು ಸಿಬ್ಬಂದಿಗೆ ಸೂಚಿಸುತ್ತೇನೆ. ನಗರದ ಕೇಂದ್ರ ವಲಯದಲ್ಲಿ ದಟ್ಟಣೆ ಸಮಸ್ಯೆ ಇದೆ. ರಸ್ತೆಗಳೂ ಕಿರಿದಾಗಿವೆ. ತಪ್ಪು ಮಾಹಿತಿಯಿಂದ ಕೇಂದ್ರ ವಲಯಕ್ಕೆ ಹೆಚ್ಚಿನ ಜನರು ಬಂದಾಗ ಸಮಸ್ಯೆ ಆಗಲಿದೆ. ತಪ್ಪು ಮಾಹಿತಿ ನೀಡುವವರ ವಿರುದ್ಧ ಕ್ರಮ ಆಗಲಿದೆ. ಹೆಚ್ಚಿನ ದಟ್ಟಣೆ ಇರುವ ಕಡೆ ಎಚ್ಚರಿಕೆ ವಹಿಸುವಂತೆ ಜನರಲ್ಲೂ ತಿಳಿವಳಿಕೆ ಮೂಡಿಸಲಾಗುವುದು. ತಂತ್ರಜ್ಞಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಂಡು ಶಾಂತಿ ಕಾಪಾಡಲಾಗುವುದು. ಸಂದರ್ಭಕ್ಕೆ ಅನುಗುಣವಾಗಿ ಭದ್ರತಾ ವ್ಯವಸ್ಥೆ ಮಾಡಿಕೊಳ್ಳುತ್ತೇವೆ.

ಕಾರ್ಯ ನಿರ್ವಹಣೆ ಅನುಭವ

ಸೀಮಂತ್ ಕುಮಾರ್ ಸಿಂಗ್ ಅವರು ಜಾರ್ಖಂಡ್‌ನ ರಾಂಚಿಯವರು. 1996ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ. ರಾಜ್ಯದ ಭಟ್ಕಳ ಉಪ ವಿಭಾಗದಲ್ಲಿ ಎಎಸ್‌ಪಿ ಹಾಗೂ ಕೋಲಾರ, ಬಳ್ಳಾರಿ, ಕೊಡಗು, ದಕ್ಷಿಣ ಕನ್ನಡ, ವಿಜಯಪುರ, ಮಂಡ್ಯ ಎಸ್‌ಪಿಯಾಗಿ ಕೆಲಸ ಮಾಡಿದ್ದರು.

ಬೆಂಗಳೂರು ಸಂಚಾರ ವಿಭಾಗದ ಡಿಸಿಪಿ ಆಗಿ ಕಾರ್ಯ ನಿರ್ವಹಿಸಿದ್ದರು. ಮಂಗಳೂರು ನಗರ ಪೊಲೀಸ್ ಕಮಿಷನರ್, ನಕ್ಸಲ್ ನಿಗ್ರಹ ಪಡೆ, ಆಂತರಿಕ ಭದ್ರತಾ ವಿಭಾಗದಲ್ಲಿ ಕಾರ್ಯ ನಿರ್ವಹಿಸಿದ್ದರು. ಅಲ್ಲದೇ ಕೇಂದ್ರ ವಲಯದ ಐಜಿಪಿ, ಎಸಿಬಿಯ ಎಡಿಜಿಪಿ, ರಾಜ್ಯ ಮೀಸಲು ಪಡೆ ಹಾಗೂ ಬಿಎಂಟಿಎಫ್‌ನ ಎಡಿಜಿಪಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.

ಸಿ.ಎಂ ಅಧಿಕೃತ ನಿವಾಸಕ್ಕೆ ಹುಸಿ ಬಾಂಬ್ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಅಧಿಕೃತ ನಿವಾಸ ಹಾಗೂ ಕೋರಮಂಗಲದ ಪಾಸ್ ಪೋರ್ಟ್ ಕಚೇರಿಗೆ ಶುಕ್ರವಾರ ಬೆಳಿಗ್ಗೆ ಇ-ಮೇಲ್‌ನಲ್ಲಿ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು.

ನಂತರ, ಹೈಗ್ರೌಂಡ್ಸ್ ಠಾಣೆ ಪೊಲೀಸರು, ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಇದೊಂದು ಹುಸಿ ಬಾಂಬ್ ಇ-ಮೇಲ್ ಸಂದೇಶ ಎಂಬುದು ಮೇಲ್ನೋಟಕ್ಕೆ ಕಂಡುಬಂತು ಎಂದು ಪೊಲೀಸರು ಹೇಳಿದರು.

ಶುಕ್ರವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಇ-ಮೇಲ್ ಅನ್ನು ಸಿಬ್ಬಂದಿ ಪರಿಶೀಲಿಸುತ್ತಿದ್ದಾಗ ಬಾಂಬ್ ಬೆದರಿಕೆ ಸಂದೇಶ ಬಂದಿರುವುದು ಗೊತ್ತಾಗಿತ್ತು. ಕೂಡಲೇ ಅವರು ಪೊಲೀಸರಿಗೆ ಹಾಗೂ ಬಾಂಬ್ ಪತ್ತೆ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಗಮನಕ್ಕೆ ತಂದಿದ್ದರು.

ಮುಖ್ಯಮಂತ್ರಿಯವರ ಅಧಿಕೃತ ನಿವಾಸ 'ಕಾವೇರಿ', ಗೃಹಕಚೇರಿ 'ಕೃಷ್ಣಾ'ದಲ್ಲಿಯೂ ಪರಿಶೀಲನೆ ನಡೆಸಲಾಗಿದೆ. ಯಾವುದೇ ವಸ್ತುಗಳು ಪತ್ತೆಯಾಗಿಲ್ಲ. ನಂತರ ಸ್ಥಳದಲ್ಲಿದ್ದವರು ನಿಟ್ಟುಸಿರು ಬಿಟ್ಟರು.

'ಎಫ್‌ಐಆರ್ ಮಾಡಲು ಕೋರ್ಟ್‌ನಲ್ಲಿ ಅನುಮತಿ ಕೇಳಿದ್ದೇವೆ. ಕೋರ್ಟ್ ಅನುಮತಿ ಕೊಟ್ಟ ನಂತರ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇನ್ನು ಕೋರಮಂಗಲದಲ್ಲಿರುವ ಪಾಸ್‌ಪೋರ್ಟ್ ಕಚೇರಿಗೂ ಇದೇ ರೀತಿಯ ಬಾಂಬ್ ಬೆದರಿಕೆಯ ಇ-ಮೇಲ್ ಸಂದೇಶ ಬಂದಿತ್ತು. ಅದನ್ನು ನೋಡಿ ಆತಂಕಗೊಂಡ ಅಲ್ಲಿನ ಸಿಬ್ಬಂದಿ, ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದರು. ಅಲ್ಲಿಯೂ ಪೊಲೀಸರು ಪರಿಶೀಲನೆ ನಡೆಸಿದ್ದರು.

ರಾಜಭವನದ ಮುಂದೆ ಹೆಡ್ ಕಾನ್‌ಸ್ಟೆಬಲ್ ಏಕಾಂಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರ ಅಮಾನತು ಆದೇಶ ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಶುಕ್ರವಾರ ರಾಜಭವನ ಮುಂದೆ ಹೆಡ್ ಕಾನ್‌ಸ್ಟೆಬಲ್ ಏಕಾಂಗಿ ಪ್ರತಿಭಟನೆ ನಡೆಸಿದರು

ತೋಳಿಗೆ ಕಪ್ಪುಪಟ್ಟಿ ಧರಿಸಿ ಅಂಬೇಡ್ಕರ್ ಭಾವಚಿತ್ರ ಇಟ್ಟುಕೊಂಡು ರಾಜಭವನ ಮುಂದೆ ಪ್ರತಿಭಟನೆ ನಡೆಸಿದ ಹೆಡ್‌ಕಾನ್‌ಸ್ಟೆಬಲ್ ನರಸಿಂಹ ರಾಜ್, ಅಮಾನತು ಆದೇಶ ಕೂಡಲೇ ಹಿಂಪಡೆಯಬೇಕು ಹಾಗೂ ಪೊಲೀಸರಿಗೆ ರಕ್ಷಣೆ ನೀಡಬೇಕು ಎಂದು ಮನವಿ ಮಾಡಿದ್ದಾರೆ.

'ಪೊಲೀಸರು ಒಂದು ರೀತಿ ಬ್ರೋಕರ್‌ಗಳಾಗಿದ್ದಾರೆ. ರಾಜಕಾರಣಿಗಳ ಮಾತು ಕೇಳಬೇಕು. ದಯಾನಂದ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರನ್ನು ಅಮಾನತು ಮಾಡಿದ್ದು ಸರಿಯಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ವೇಳೆ ವಿಧಾನಸೌಧ ಠಾಣೆ ಪೊಲೀಸರು, ನರಸಿಂಹರಾಜ್ ಅವರನ್ನು ವಶಕ್ಕೆ ಪಡೆದರು.



ರಾಜಭವನ ಮುಂದೆ ಹೆಡ್ ಕಾನ್‌ಸ್ಟೆಬಲ್ ನರಸಿಂಹರಾಜ್ ಪ್ರತಿಭಟನೆ ನಡೆಸಿದರು

ತಡರಾತ್ರಿ ಪೊಲೀಸ್ ಕಮಿಷನರ್ ಪದಗ್ರಹಣ

ಬೆಂಗಳೂರು: ನಗರದ 39ನೇ ಪೊಲೀಸ್ ಕಮಿಷನರ್ ಆಗಿ ಸೀಮಂತ್ ಕುಮಾರ್ ಸಿಂಗ್ ಅವರು ಗುರುವಾರ ಮಧ್ಯರಾತ್ರಿ ಪದಗ್ರಹಣ ಮಾಡಿದ್ದಾರೆ.

ಬಿ.ದಯಾನಂದ ಅವರು ಅಮಾನತುಗೊಂಡಿರುವ ಕಾರಣ ಬ್ಯಾಟನ್ ಹಸ್ತಾಂತರ ಮಾಡಿಲ್ಲ. ಬದಲಾಗಿ ಸೀಮಂತ್ ಕುಮಾರ್ ಅವರು ಕಡತಗಳಿಗೆ ಸಹಿ ಹಾಕಿ ಪ್ರಕ್ರಿಯೆ ಪೂರೈಸಿದರು.

ಪೂರ್ವ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ಸೇರಿದಂತೆ ಹಿರಿಯ ಅಧಿಕಾರಿಗಳು ನೂತನ ಆಯುಕ್ತರನ್ನು ಸ್ವಾಗತಿಸಿದರು.

ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದ ಸೀಮಂತ್ ಕುಮಾರ್ ಸಿಂಗ್, 'ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ಆದೇಶದ ಮೇಲೆ ಕಠಿಣ ಪರಿಸ್ಥಿತಿಯಲ್ಲೂ ಅಧಿಕಾರ ಸ್ವೀಕರಿಸಿದ್ದೇನೆ. ಹಿಂದಿನ ಆಯುಕ್ತರೂ ಉತ್ತಮ ಕೆಲಸ ಮಾಡಿದ್ದು, ಅದನ್ನು ಮುಂದುವರೆಸಿಕೊಂಡು ಹೋಗುತ್ತೇನೆ' ಎಂದು ಹೇಳಿದರು.

ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಅಧಿಕಾರಿಗಳು, ಸಿಬ್ಬಂದಿ ಸಭೆ ನಡೆಸಿದರು. 'ಸರಿಯಾಗಿ ಕೆಲಸ ಮಾಡಿದರೆ ತೊಂದರೆ ಆಗದು' ಎಂದು ಸೀಮಂತ್ ಕುಮಾರ್ ಸಿಂಗ್ ಅಭಯ ನೀಡಿದ್ದಾರೆ.

'ಕಾನೂನು ದುರ್ಬಳಕೆ ಸಲ್ಲ: ಗುರಾಣಿ ಕತ್ತಿಯಾದೀತು'

ಎಸ್‌ಸಿ–ಎಸ್‌ಟಿ ಮೇಲಿನ ದೌರ್ಜನ್ಯ ತಡೆ ಕಾಯ್ದೆ; ದೋಷಾರೋಪ ಪಟ್ಟಿ ರದ್ದುಗೊಳಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನೂನು ದುರುಪಯೋಗವು ಗುರಾಣಿಯಾಗಿ ಉಳಿಯುವುದಿಲ್ಲ. ಬದಲಿಗೆ, ಕತ್ತಿಯಾಗಿ ಝಳಪಿಸಬಲ್ಲದು' ಎಂದು ಎಚ್ಚರಿಸಿರುವ ಹೈಕೋರ್ಟ್, 'ಸಿವಿಲ್ ವ್ಯಾಜ್ಯಗಳಲ್ಲಿ ಕ್ರಿಮಿನಲ್ ಕಾನೂನನ್ನು ಅಸ್ತ್ರವಾಗಿ ಬಳಸುವುದರ ವಿರುದ್ಧ ವಿಚಾರಣಾ ನ್ಯಾಯಾಲಯಗಳು ಜಾಗ್ರತೆಯಾಗಿ ಮುಂದಡಿ ಇರಿಸಬೇಕು' ಎಂದು ಕಿವಿಮಾತು ಹೇಳಿದೆ.

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ನನ್ನ ವಿರುದ್ಧ ದಾಖಲಾಗಿರುವ ದೋಷಾರೋಪ ಪಟ್ಟಿ ರದ್ದುಗೊಳಿಸಬೇಕು' ಎಂದು ಸೋಲಾಪುರದ ಬಿಲ್ಡರ್ ವಿಲಾಸ್ ಭೋರ್‌ಮಲ್‌ಜಿ ಓಸ್ವಾಲ್ (61) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಕುರಿತಂತೆ ಆದೇಶಿಸಿದೆ.

'ಪ್ರಕರಣದಲ್ಲಿ ಇಬ್ಬರು ಪಾಲುದಾರರ ನಡುವೆ ಉಂಟಾದ ಆರ್ಥಿಕ ವಿವಾದಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊಳ್ಳಲು ಪ್ರತಿವಾದಿ ಸೋಮಶೇಖರ್ ಕ್ರಿಮಿನಲ್ ನ್ಯಾಯವ್ಯವಸ್ಥೆ ದುರ್ಬಳಕೆ ಮಾಡಿಕೊಂಡಿರುವುದು ಕಂಡುಬಂದಿದೆ. ಇದು ಕಾನೂನಿನ ಮುಖವಾಡದಲ್ಲಿರುವ ಪ್ರತೀಕಾರದ ಅಸ್ತ್ರವಾಗಿದೆ' ಎಂದು ಪೀಠ ಉಲ್ಲೇಖಿಸಿತು. ಅರ್ಜಿದಾರರ ವಿರುದ್ಧ ಎಸ್‌ಸಿ-ಎಸ್‌ಟಿ



ಕಾಯ್ದೆಯಡಿ ದಾಖಲಾಗಿದ್ದ ದೂರು ಮತ್ತು ಸಂಬಂಧಿಸಿದ ದೋಷಾರೋಪ ಪಟ್ಟಿ ರದ್ದುಪಡಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಶ್ರೀನಾಥ ಕುಲಕರ್ಣಿ ವಾದ ಮಂಡಿಸಿದ್ದರು.

ಅಪಘಾತ: ವ್ಯಕ್ತಿ ಖುಲಾಸೆ

ಏಳು ವರ್ಷಗಳ ಹಿಂದೆ ನಗರದ ನೈಸ್ ರಸ್ತೆ ಬಳಿ ನಡೆದಿದ್ದ ರಸ್ತೆ ಅಪಘಾತ ಪ್ರಕರಣದಲ್ಲಿ; 'ಅತಿವೇಗ, ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ಬೈಕ್ ಸವಾರನ ಸಾವಿಗೆ ಕಾರಣವಾಗಿದ್ದಾರೆ' ಎಂಬ ಪ್ರಕರಣದಲ್ಲಿ ಅಪರಾಧಿಯನ್ನು ಹೈಕೋರ್ಟ್ ಖುಲಾಸೆಗೊಳಿಸಿದೆ.

ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಎರಡು ತಿಂಗಳ ಸರಳ ಜೈಲು ಶಿಕ್ಷೆಯನ್ನು ಪ್ರಶ್ನಿಸಿ ಅಪರಾಧಿ ತುಮಕೂರಿನ ಜಯನಗರದ ಹರೀಶ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ರಾಜೇಶ್ ರೈ ಅವರಿದ್ದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ದುಡುಕಿನ ವರ್ತನೆ ಮತ್ತು ನಿರ್ಲಕ್ಷ್ಯವನ್ನು ಪ್ರತಿಯೊಂದು ಪ್ರಕರಣಕ್ಕೂ ಅನ್ವಯಿಸಿ ಆಯಾ ಪ್ರಕರಣದ ವಾಸ್ತವಾಂಶದ ಮೇಲೆ ನಿರ್ಣಯಿಸಬೇಕು' ಎಂಬ ಪೀಠ ಅಭಿಪ್ರಾಯಪಟ್ಟಿತು.

ಕಮಲ್ ವಿವಾದ: ಕಸಾಪ ಅಧ್ಯಕ್ಷ ಜೋಶಿ ಅರ್ಜಿ

'ಕಮಲ್ ಹಾಸನ್ ನಟಿಸಿರುವ ಥಗ್ ಲೈಫ್ ಚಲನಚಿತ್ರದ ಬಿಡುಗಡೆಗೆ ರಾಜ್ಯದಲ್ಲಿ ಭದ್ರತೆ ನೀಡಲು ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ನಿರ್ದೇಶಿಸಬೇಕು ಎಂದು ಕೋರಿ, ರಾಜ್‌ಕಮಲ್ ಫಿಲ್ಮ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ ನನ್ನನ್ನೂ ಮಧ್ಯಂತರ ಅರ್ಜಿದಾರರಾಗಿ ಸೇರ್ಪಡೆ ಮಾಡಿಕೊಳ್ಳಬೇಕು' ಎಂದು ಕೋರಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ರಾಜ್‌ಕಮಲ್ ಫಿಲ್ಮ್ಸ್ ಇಂಟರ್ ನ್ಯಾಷನಲ್ ಸಂಸ್ಥೆ ಸಲ್ಲಿಸಿರುವ ರಿಟ್ ಅರ್ಜಿ ಇದೇ 10ಕ್ಕೆ ವಿಚಾರಣೆಗೆ ನಿಗದಿಯಾಗಿದ್ದು ಈ ಅರ್ಜಿಯ ಜೊತೆಯಲ್ಲಿ ಮಧ್ಯಂತರ ಅರ್ಜಿಯ ಮನವಿ ಸ್ವೀಕೃತಿ ಬಗ್ಗೆ ತೀರ್ಮಾನವಾಗಲಿದೆ.

'ಕಮಲ್ ಹಾಸನ್ ಕನ್ನಡ ಭಾಷೆಯ ಬಗ್ಗೆ ಅಹಿತಕರ ಹೇಳಿಕೆ ನೀಡಿದ್ದಾರೆ. ಕ್ಷಮೆ ಕೋರಲು ನಿರಾಕರಿಸಿ ಅಹಂಕಾರ ಮೆರೆದಿದ್ದಾರೆ. ಕನ್ನಡ ಭಾಷೆ-ಸಂಸ್ಕೃತಿಯ ಇತಿಹಾಸ, ಘನತೆ ಮತ್ತು ಗುರುತನ್ನು ಸಂರಕ್ಷಿಸುವ ವಿಚಾರದಲ್ಲಿ ಪರಿಷತ್ತು ತನ್ನ ವಾದ ಮಂಡಿಸಲು ಅವಕಾಶ ಕಲ್ಪಿಸಬೇಕು' ಎಂದು ಜೋಶಿ ತಮ್ಮ ಮಧ್ಯಂತರ ಅರ್ಜಿಯಲ್ಲಿ ಕೋರಿದ್ದಾರೆ.

ಕೆ.ಜಿ.ಹಳ್ಳಿ ಠಾಣೆ ಸುಟ್ಟ ಪ್ರಕರಣ: ಜಾಮೀನಿಗೆ ಆಕ್ಷೇಪ

'ಯಾವುದೇ ಆರೋಪಿಯನ್ನು ಮಾನವೀಯ ನೆಲೆಗಟ್ಟಿನಲ್ಲಿ ಪರಿಗಣಿಸಲು ಎಷ್ಟು ಆದ್ಯತೆ ನೀಡಲಾಗುತ್ತದೆಯೋ ಅಷ್ಟೇ ಸರಿಸಮಾನವಾಗಿ ರಾಷ್ಟ್ರೀಯ ಪ್ರಜ್ಞೆಯ ವಿಷಯ ಬಂದಾಗ ಎನ್‌ಐಎ ಕರ್ತವ್ಯಪ್ರಜ್ಞೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ' ಎಂದು ಎನ್‌ಐಎ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಕೆ.ಜಿ.ಹಳ್ಳಿ ಪೊಲೀಸ್ ಠಾಣೆ ಸುಟ್ಟ ಪ್ರಕರಣದಲ್ಲಿ 6ನೇ ಆರೋಪಿಯಾಗಿರುವ ನಗರದ ಬೈರಪ್ಪನ ಲೇಔಟ್ ನಿವಾಸಿ ಜಿಯಾ ಉರ್ ರಹಮಾನ್ ಆಲಿಯಾಸ್ ಜಿಯಾ ಅವರು ವೈದ್ಯಕೀಯ ಚಿಕಿತ್ಸೆ ಆಧಾರದಲ್ಲಿ ಕೋರಿರುವ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಎನ್‌ಐಎ ಪರ ವಕೀಲ ಪಿ.ಪ್ರಸನ್ನ ಕುಮಾರ್, 'ಮೇಲ್ಮನವಿದಾರರು ಸಾಮಾನ್ಯ ಕಾಯಿಲೆಯ ನೆಪದಲ್ಲಿ ನಾಲ್ಕನೇ ಬಾರಿಗೆ ವೈದ್ಯಕೀಯ ನೆರವಿನಲ್ಲಿ ಜಾಮೀನು ಕೋರುತ್ತಿದ್ದಾರೆ. ಹಿಂದಿನ ಮೂರು ಬಾರಿ ಎನ್‌ಐಎ ಆಕ್ಷೇಪ ವ್ಯಕ್ತಪಡಿಸಿಲ್ಲ. ಇಂತಹ ಚಾಳಿ ಮುಂದುವರಿಸಲು ಅವಕಾಶ ನೀಡದೆ ಮೆರಿಟ್ ಮೇಲೆ ವಿಚಾರಣೆ ನಡೆಸಬೇಕು' ಎಂದು ಕೋರಿದರು.

ಒಂದು ಹಂತದಲ್ಲಿ ಜಾಮೀನು ನೀಡಲು ಮುಂದಾಗಿದ್ದ ನ್ಯಾಯಪೀಠ, ಎನ್‌ಐಎ ಆಕ್ಷೇಪವನ್ನು ಗಂಭೀರವಾಗಿ ಪರಿಗಣಿಸಿ ಮೆರಿಟ್ ಮೇಲೆ ವಾದ ಮಂಡಿಸಲು ಮೇಲ್ಮನವಿದಾರ ಪರ ವಕೀಲರಿಗೆ ಸೂಚಿಸಿ ಜಾಮೀನು ಅವಧಿಯನ್ನು ಇದೇ 24ರವರೆಗೆ ಮುಂದುವರಿಸಿತು. ಅಂತೆಯೇ, ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿತು.

ಅಪಘಾತ: ಮೂವರು ಯುವಕರು ಸಾವು

ತುಮಕೂರು: ತಾಲ್ಲೂಕಿನ ನಂದಿಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಶುಕ್ರವಾರ ಬೆಳಗಿನ ಜಾವ ಕಂಟೇನರ್‌ಗೆ ಹಿಂದಿನಿಂದ ಬೈಕ್ ಡಿಕ್ಕಿಯಾಗಿ ಮೂವರು ಯುವಕರು ಮೃತಪಟ್ಟಿದ್ದಾರೆ.

ನಗರದ ಉಪ್ಪಾರಹಳ್ಳಿ ಧನುಷ್‌ಗೌಡ (23), ಗುಬ್ಬಿ ತಾಲ್ಲೂಕಿನ ಬಸವಪಟ್ಟಣದ ರಾಕೇಶ್ (25), ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಚಿಕ್ಕಚೆಲ್ಲೂರಿನ ಧನರಾಜು (23) ಮೃತರು.

ದಾಬಸ್‌ಪೇಟೆಯ ಎಂ.ಇ. ಸೋಲಾರ್ ಪ್ಲಾಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ರಾಕೇಶ್, ಧನರಾಜು ನಗರದ ಎಸ್‌ಐಟಿ ಬಳಿ ವಾಸವಿದ್ದರು. ರಾತ್ರಿ ಪಾಳಿಯಲ್ಲಿ ಕೆಲಸ ಮುಗಿಸಿಕೊಂಡು ವಾಪಸ್ ಬರುವಾಗ ಮುಂದೆ ಚಲಿಸುತ್ತಿದ್ದ ಕಂಟೇನರ್‌ಗೆ ಬೈಕ್ ಡಿಕ್ಕಿ ಹೊಡೆದಿದೆ. ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಕ್ಯಾತ್ಸಂದ್ರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಕ್ಷಿಪ್ತ ಸುದ್ದಿ

ಐಪಿಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತದ ಘಟನೆ ಬೆನ್ನಲ್ಲೇ ಸರ್ಕಾರ ಹಲವು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ ಅವರನ್ನು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ. ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ ವಿಭಾಗದ ಎಡಿಜಿಪಿ ಎಸ್.ಮುರುಗನ್ ಅವರನ್ನು ನೇಮಕಾತಿ ವಿಭಾಗಕ್ಕೆ ನಿಯೋಜಿಸಲಾಗಿದೆ.

ನೇಮಕಾತಿ ವಿಭಾಗದ ಎಡಿಜಿಪಿ ಕೆ.ವಿ.ಶರತ್ ಚಂದ್ರ ಅವರನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿ ನಿಯೋಜಿಸಲಾಗಿದೆ. ಇವರಿಗೆ ರಾಜ್ಯ ಪೊಲೀಸ್ ವಸತಿ, ಮೂಲಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅಕ್ರಂ ಪಾಷಾ, ಶೆಟ್ಟಣ್ಣವರ್ ವರ್ಗಾವಣೆ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಅಕ್ರಂ ಪಾಷಾ ಮತ್ತು ಇಲಾಖೆಯ ಕಾರ್ಯದರ್ಶಿ ಸಂಜಯ್ ಶೆಟ್ಟಣ್ಣವರ್ ಅವರನ್ನು ವರ್ಗಾಯಿಸಲಾಗಿದ್ದು, ಇಬ್ಬರಿಗೂ ಯಾವುದೇ ಹುದ್ದೆ ತೋರಿಸಿಲ್ಲ.

ಆಯುಕ್ತರ ಹುದ್ದೆಯನ್ನು ಗೃಹ ಮಂಡಳಿ ಆಯುಕ್ತ ದಯಾನಂದ ಕೆ.ಎ ಅವರಿಗೆ ಹೆಚ್ಚುವರಿಯಾಗಿ ಮತ್ತು ಕಾರ್ಯದರ್ಶಿ ಹುದ್ದೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ನಗರದ ಇನ್ನಷ್ಟು ಸುದ್ದಿಗಳು 6

ಮೆಟ್ರೊ ಪಿಲ್ಲರ್‌ಗೆ ಬಿಎಂಟಿಸಿ ಬಸ್ ಡಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿಯ ಬಳಿ ಮೆಟ್ರೊ ಪಿಲ್ಲರ್‌ಗೆ ಬಿಎಂಟಿಸಿ ಬಸ್ ಡಿಕ್ಕಿಯಾಗಿ 10 ಮಂದಿ ಗಾಯಗೊಂಡಿದ್ದಾರೆ. ಚಾಲಕ, ನಿರ್ವಾಹಕರು ಗಾಯಾಳುಗಳಲ್ಲಿ ಸೇರಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿದ ಬಸ್, ವೇಗವಾಗಿ ಬಂದ ಪಿಲ್ಲರ್‌ಗೆ ಡಿಕ್ಕಿಯಾಗಿದೆ ಎಂದು ಪೊಲೀಸರು ಹೇಳಿದರು. ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಚಿತ್ರಾವಳಿ



ಯಲಹಂಕದ ರೇವಾ ವಿಶ್ವವಿದ್ಯಾಲಯದ ಆವರಣದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ವಿಶ್ವವಿದ್ಯಾಲಯದ ಕುಲಪತಿ ಶಾಂತರಾಜು ಅವರು ಗಿಡನೆಟ್ಟರು.



ಯೂನಿವರ್ಸಲ್ ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ, ಮುಖ್ಯ ಅತಿಥಿಯಾಗಿದ್ದ ವಾಣಿಜ್ಯ ತೆರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ನಾರಾಯಣ ಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಉಪೇಂದ್ರಶೆಟ್ಟಿ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು

ಜೂನ್ 9: ನಾಗರಿಕ ಹಕ್ಕುಗಳ ರಕ್ಷಣಾ ದಿನ ಆಚರಣೆ

ಕೆ.ಆರ್.ಪುರ: 'ದಲಿತ ನಾಯಕ ದಿ.ಪ್ರೊ. ಬಿ.ಕೃಷ್ಣಪ್ಪ ಅವರ 88ನೇ ಜನ್ಮದಿನದ ನೆನಪಿನಲ್ಲಿ ಜೂನ್ 9ರಂದು 'ನಾಗರಿಕ ಹಕ್ಕುಗಳ ರಕ್ಷಣಾ ದಿನ'ವಾಗಿ ಆಚರಿಸಲಾಗುತ್ತದೆ' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ಬೆಂಗಳೂರು ವಿಭಾಗೀಯ ಸಂಚಾಲಕ ಮಣಿಪಾಲ್ ರಾಜಪ್ಪ ಹೇಳಿದರು.

'ಅಂದು ಬೆಳಿಗ್ಗೆ ಮೈಸೂರು ಬ್ಯಾಂಕ್ ಸಮೀಪದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಮಾವಳ್ಳಿ ಶಂಕರ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದರು.

₹1.50 ಲಕ್ಷ ಲಂಚ: ಸರ್ವೆ ಸೂಪರ್‌ವೈಸರ್ ಬಂಧನ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕೈಗಾರಿಕಾ ನಿವೇಶನದ ಸರ್ವೆ ಸ್ಕೆಚ್ ನೀಡಲು ₹1.50 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಸರ್ವೆ ಸೂಪರ್‌ವೈಸರ್ ಅನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಬೆಂಗಳೂರು ನಿವಾಸಿ ರವಿ ಅವರಿಗೆ ಕೆಐಎಡಿಬಿಯಿಂದ ಕೈಗಾರಿಕಾ ನಿವೇಶನ ಮಂಜೂರಾಗಿದ್ದು, ಅದರ ಸರ್ವೆ ಸ್ಕೆಚ್ ಕೆಲಸ ನಡೆಯಬೇಕಿತ್ತು. ಇದಕ್ಕಾಗಿ ಕೆಐಎಡಿಬಿಯ ಬೆಂಗಳೂರು ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಸಂಬಂಧಿತ ಸರ್ವೆ ಸೂಪರ್‌ವೈಸರ್ ನರೇಂದ್ರ ಕುಮಾರ್ ಅವರು ₹1.50 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ಈ ಸಂಬಂಧ ರವಿ ಅವರು ದೂರು ನೀಡಿದ್ದರು. ಅದರಂತೆ ರವಿ ಅವರು ಕೆಐಎಡಿಬಿ ಕಚೇರಿ ಬಳಿ ನರೇಂದ್ರ ಅವರಿಗೆ ಹಣ ನೀಡಿದ್ದರು. ಆಗ ದಾಳಿ ನಡೆಸಿ ಲಂಚದ ಹಣದ ಸಮೇತ ಅವರನ್ನು ಬಂಧಿಸಲಾಯಿತು' ಎಂದು ಮಾಹಿತಿ ನೀಡಿದ್ದಾರೆ.



FARNAZ





ಹರ್ನಾಜ್ ಕೌರ್ ಸಂಧು

ಬೆಡಗು ಬಿನ್ನಾಣ ಬಿಗುಮಾನ

ಸೌಂದರ್ಯವನ್ನು ಆಸ್ವಾದಿಸದವರು ಬಹುಶಃ ಯಾರೂ ಇರಲಾರರು. ಅದಕ್ಕೆಂದೇ ಸೌಂದರ್ಯ ಸ್ಪರ್ಧೆಗಳಿಗೆ ವಿಶೇಷ ಮನ್ನಣೆ. ಇತ್ತೀಚಿನ ವರ್ಷಗಳಲ್ಲಿ, ಬಾಹ್ಯ ಸೌಂದರ್ಯದ ಜೊತೆಗೆ ಆಂತರಿಕ ಸೌಂದರ್ಯಕ್ಕೂ ಮಹತ್ವ ನೀಡುತ್ತಿರುವ 'ವಿಶ್ವ ಸುಂದರಿ', 'ಭುವನ ಸುಂದರಿ'ಯಂತಹ ಅಂತರರಾಷ್ಟ್ರೀಯ ಸ್ಪರ್ಧೆಗಳು ಗಮನ ಸೆಳೆಯುತ್ತಿವೆ





ಅಮಿಶಿ ಕೌಶಿಕ್ , ರಿಯಾ ಸಿಂಗ್, ಸ್ಮಿತಿ ಛಾಬ್ರ

ಧಾರಿಣಿ ಮಾಯಾ

'ಹೂವೂ ಚೆಲುವೆಲ್ಲಾ ನಂದೆಂದಿತು, ಹೆಣ್ಣು ಹೂವ ಮುಡಿದು ಚೆಲುವೇ ತಾನೆಂದಿತು...' ಆರ್.ಎನ್.ಜಯಗೋಪಾಲ್ ಅವರ ಈ ಗೀತೆ, ಸೊಬಗಿನ ಅರಸಿಯರಂತೆ ಬೀಗುವ ಕನ್ನಿಕೆಯರಿಗೆಂದೇ ಹೇಳಿ ಬರೆಸಿದಂತಿದೆ. 'ಸೌಂದರ್ಯ ಇರುವುದು ನೋಡುಗರ ಕಣ್ಣಲ್ಲಿ' ಎಂಬುದು ನಿಜವೇ ಆದರೂ ಕಣ್ಣು ಕೋರೈಸುವಂತಿರುವ ಚೆಲುವೆಯರು ತಮ್ಮೆಲ್ಲಾ ಸೊಬಗನ್ನು ಒರೆಗಿಟ್ಟು ಪರಸ್ಪರ ಪೈಪೋಟಿಗೆ ಇಳಿದರೆ? ನೋಡುವ ಆ ಕಂಗಳ ಎದೆಯಂಗಳದಲ್ಲಿ ಒಂದು ಝಲಕ್ ಮೂಡದೇ ಇರದೇ?

ಅನ್ಯ ಸಂಗತಿಗಳಂತೆ ಅಂದಗಾತಿಯರ ಚೆಲುವೂ ಸ್ಪರ್ಧೆಯಿಂದ ಹೊರತಲ್ಲ. ವಿವಿಧ ಸೌಂದರ್ಯ ಸ್ಪರ್ಧೆಗಳು ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿವೆ. ಇದೀಗಷ್ಟೇ ಹೈದರಾಬಾದ್‌ನಲ್ಲಿ ನಡೆದ 72ನೇ ವಿಶ್ವಸುಂದರಿ ಸ್ಪರ್ಧೆಯಲ್ಲಿ ಥಾಯ್ಲೆಂಡಿನ ಬೆಡಗಿ ಒಪಾಲ್ ಸುಚಾತಾ ಚೌಂಗ್‌ಶ್ರೀ 'ಮಿಸ್ ವರ್ಲ್ಡ್' ಕಿರೀಟ ತೊಟ್ಟು ಬೀಗಿದ್ದಾರೆ. ಇದುವರೆಗೆ ಭಾರತದ ಆರು ಲಲನೆಯರಿಗೆ ಈ ಕಿರೀಟ ತೊಡುವ ಅದೃಷ್ಟ ಒಲಿದಿದೆ.

ಅಂದಹಾಗೆ, ಇಂತಹ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಹತ್ತಾರು ದೇಶಗಳ ಸುರಸುಂದರಿಯರ ನಡುವೆ ಸೆಣಸಿ, 'ಅತಿಲೋಕ ಸುಂದರಿ' ಎನಿಸಿಕೊಳ್ಳುವುದು ಸುಲಭದ ಮಾತೇನಲ್ಲ. ಅತಿಯಾದ ಶಿಸ್ತು ಮತ್ತು ಅತೀವ ಪರಿಶ್ರಮ ಬೇಕೇಬೇಕು. ಬಹಳಷ್ಟು ದೈಹಿಕ, ಮಾನಸಿಕ ಸಿದ್ಧತೆಯಂತೂ ಇರಲೇಬೇಕು. ಝಗಮಗಿಸುವ ರ‍್ಯಾಂಪ್‌ನಲ್ಲಿ ಬಾಗುತ್ತಾ ಬಳುಕುತ್ತಾ ಬರುವ ಈ ಲಲನೆಯರನ್ನು ನೋಡಿ ಕಣ್ತುಂಬಿಕೊಳ್ಳುವ ಮಂದಿ ಒಂದೆಡೆಯಾದರೆ, ಸೌಂದರ್ಯಕ್ಕೊಂದು ಸ್ಪರ್ಧೆಯೇ ಎಂದು ಮೂಗು ಮುರಿದರೂ ವಾರೆಗಣ್ಣಿನಿಂದಲೇ ಈ ಬೆಡಗಿಯರ ಮೈಮಾಟ ಕಂಡು ಬೆರಗಾಗುವವರ ಸಂಖ್ಯೆಯೇನೂ ಕಡಿಮೆಯಿಲ್ಲ.

ಬಾಹ್ಯ ಸೌಂದರ್ಯದ ಜೊತೆಗೆ ಬುದ್ಧಿಮತ್ತೆ ಮತ್ತು ಆಂತರಿಕ ಸೌಂದರ್ಯಕ್ಕೂ ಸಾಣೆ ಹಿಡಿಯುವ ಕೆಲಸ ಇತ್ತೀಚಿನ ವರ್ಷಗಳಲ್ಲಿ ಆದ್ಯತೆ ಪಡೆದಿರುವುದು ಸೌಂದರ್ಯ ಸ್ಪರ್ಧೆಗಳ ಕಿಮ್ಮತ್ತು ಹೆಚ್ಚಿಸಿದೆ. ಮೊದಲೆಲ್ಲಾ ಸ್ಪರ್ಧೆಯ ಒಂದು ಸುತ್ತಿನಲ್ಲಿ ಚೆಲುವೆಯರು ಬಿಕಿನಿ ಧರಿಸುವುದು ಕಡ್ಡಾಯವಾಗಿತ್ತು. ಸಂಪ್ರದಾಯವಾದಿಗಳ ಕೆಂಗಣ್ಣಿನ ಬಿಸಿ ಹೆಚ್ಚಾದಾಗ ಅದನ್ನು ಈಜುಡುಗೆಗೆ ಬದಲಾಯಿಸಲಾಯಿತು. 2014ರ ನಂತರ ಈ ಪರಿಪಾಟವನ್ನೂ ನಿಲ್ಲಿಸಲಾಗಿದೆ. ಇದರ ಬದಲಾಗಿ ಸ್ಪರ್ಧಿಯ ವ್ಯಕ್ತಿತ್ವ, ಪ್ರತಿಭೆ ಮತ್ತು ಕೌಶಲ ಜೊತೆಗೂಡಿ, ಸೌಂದರ್ಯ ಮಾನದಂಡದ ತಕ್ಕಡಿ ಮೇಲೇರಿದೆ. ಅಂತಿಮ ಸುತ್ತಿನಲ್ಲಿ ತೀರ್ಪುಗಾರರು ಕೇಳುವ ಪ್ರಶ್ನೆಗಳಿಗೆ, ತಮ್ಮತ್ತಲೇ ನೆಟ್ಟ ಲಕ್ಷಾಂತರ ಕಣ್ನೋಟಗಳನ್ನು ಎದುರಿಸುತ್ತಾ ತಡವರಿಸದೆ ಆತ್ಮಸ್ಥೈರ್ಯದಿಂದ ನೀಡುವ ಉತ್ತರವು ಸ್ಪರ್ಧಿಗಳ ಗೆಲುವಿಗೆ ರತ್ನಗಂಬಳಿ ಹಾಸುತ್ತದೆ. ಕೆಲವೊಮ್ಮೆ ತೀರ್ಪುಗಾರರು ಕೇಳುವ ವಿಚಿತ್ರ ಹಾಗೂ ಗೊಂದಲಮಯ ಪ್ರಶ್ನೆಗಳಿಗೆ ಚೆಲುವೆಯರು ಕಕ್ಕಾಬಿಕ್ಕಿಯಾಗುವುದೂ ಉಂಟು. ಹಾಗೆಯೇ ಈ 'ಬ್ಯೂಟಿ ವಿತ್ ಬ್ರೇನ್'ಗಳು ತೀರ್ಪುಗಾರರ ಪ್ರಶ್ನೆಗೆ ಬ್ರೇನ್‌ಲೆಸ್ ಉತ್ತರ ಕೊಟ್ಟು ನಗೆಪಾಟಲಿಗೆ ಈಡಾಗಿರುವುದೂ ಇದೆ!

ಅಂತಿಮವಾಗಿ ಕಿರೀಟಕ್ಕೆ ಮುತ್ತಿಕ್ಕಿದವಳಿಗೆ ಅಂತರರಾಷ್ಟ್ರೀಯ ಮನ್ನಣೆ, ರತ್ನಖಚಿತ ಕಿರೀಟ, ನಗದು ಬಹುಮಾನ, ನಾನಾ ದೇಶಗಳಿಗೆ ಉಚಿತ ಪ್ರವಾಸದ ಜೊತೆಗೆ ಉಡುಗೆ- ತೊಡುಗೆ, ಸೌಂದರ್ಯಸಾಧನ, ಚಿನ್ನಾಭರಣಗಳ ಕೊಡುಗೆಯ ಸುರಿಮಳೆಯೇ ಆಗುತ್ತದೆ. ವೃತ್ತಿಪರ ಸ್ಟೈಲಿಸ್ಟ್ ಮತ್ತು ನ್ಯೂಟ್ರಿಷನಿಸ್ಟ್ ಜೊತೆ ಒಡನಾಟ ಕಲ್ಪಿಸಲಾಗುತ್ತದೆ. ವರ್ಷಪೂರ್ತಿ ಆಕೆ ಇರಿಸುವ ಪ್ರತಿ ಹೆಜ್ಜೆಯಲ್ಲೂ ಅತ್ಯುತ್ತಮ ಛಾಯಾಗ್ರಾಹಕರು ಮತ್ತು ವಸ್ತ್ರವಿನ್ಯಾಸಕರ ಛಾಪಿರುತ್ತದೆ. ಮಾನವೀಯ ಕಾರ್ಯ, ಆರೋಗ್ಯದ ಜನಜಾಗೃತಿಗಾಗಿ ಇಡೀ ಜಗತ್ತನ್ನು ಸುತ್ತುತ್ತಾಳೆ ಈ ಚೆಲುವಿನ ಖನಿ. 'ಮಿಸ್ ಅರ್ಥ್' ಪಟ್ಟ ತೊಟ್ಟ ಸುಂದರಿಯಂತೂ ಪರಿಸರ ಜಾಗೃತಿಗಾಗಿ ಶ್ರಮಿಸುತ್ತಾಳೆ. ಹೀಗೆ ಹೊಣೆಗಾರಿಕೆಯೂ ಕಿರೀಟದ ಜೊತೆಗೂಡುವುದರಿಂದ ತಾನಿಡುವ ಪ್ರತಿ ಹೆಜ್ಜೆಯನ್ನೂ ಈ ಚಿತ್ತಚಂಚಲೆ ಎಚ್ಚರದಿಂದಲೇ ಇರಿಸಬೇಕಾಗುತ್ತದೆ. ಪ್ರತಿ ನಡೆಗೂ ಉತ್ತರದಾಯಿ ಆಗಬೇಕಾಗುತ್ತದೆ.



ಮಾನುಷಿ ಚಿಲ್ಲರ್, ವನೆಸ್ಸಾ ಪಾನ್ಸ್

ಇಷ್ಟೆಲ್ಲಾ ಸ್ಪರ್ಧೆಗಳಿವೆ!

ಮಿಸ್ ಅಲ್ಲದೆ, ಮಿಸೆಸ್ ಹಾಗೂ ಟೀನ್ಸ್‌ಗಳಿಗೂ ಸೌಂದರ್ಯ ಸ್ಪರ್ಧೆಗಳಿವೆ. ಮಿಸ್ ಫೋಟೊಜೆನಿಕ್, ಮಿಸ್ ಟ್ಯಾಲೆಂಟ್, ಮಿಸ್ ಪರ್ಸನಾಲಿಟಿ, ಮಿಸ್ ಬ್ಯೂಟಿಫುಲ್ ಸ್ಮೈಲ್, ಮಿಸ್ ಬ್ಯೂಟಿಫುಲ್ ಹೇರ್ ಎಂಬಂತಹ ಕೆಲವು ವಿಶೇಷ ಪ್ರಶಸ್ತಿಗಳನ್ನೂ ಅದಕ್ಕೆ ಹೊಂದುವ ಸ್ಪರ್ಧಿಗಳಿಗೆ ನೀಡಲಾಗುತ್ತದೆ

ಕೆಲವು ಸವಾಲು-ಜವಾಬು

- **ಸುಶ್ಮಿತಾ ಸೇನ್- (ಮಿಸ್ ಯೂನಿವರ್ಸ್ 1994)- ನಿನ್ನ ಪ್ರಕಾರ, ಮಹಿಳೆಯ ಮೂಲತತ್ವ ಎಂದರೆ ಏನು?**

ಒಂದು ಮಗುವಿನ ಮೂಲ ಎಂದರೆ ತಾಯಿ, ಆಕೆಯೂ ಹೆಣ್ಣು. ಕಾಳಜಿ ಮಾಡುವುದು, ಹಂಚುವುದು, ಪ್ರೀತಿಸುವುದನ್ನು ಆಕೆ ಗಂಡಿಗೆ ತೋರಿಸಿಕೊಡುತ್ತಾಳೆ. ಇದುವೇ ಹೆಣ್ಣೊಬ್ಬಳ ಅಸ್ತಿತ್ವ. ಹೆಣ್ಣಾಗಿ ಹುಟ್ಟುವುದೇ ದೇವರು ನಮಗೆ ಕೊಡುವ ಬಹುದೊಡ್ಡ ಉಡುಗೊರೆ.

- **ಡಯಾನಾ ಹೇಡನ್ (ಮಿಸ್ ವರ್ಲ್ಡ್ 1997)- ಮಿಸ್ ವರ್ಲ್ಡ್ ಆಗಲು ಏಕೆ ಬಯಸುವೆ?**

ಕವಿ ವಿಲಿಯಮ್ ಬಟ್ಲರ್ ಯೀಟ್ಸ್ ಅವರ 'ಕನಸಿನ ಜೊತೆ ಜವಾಬ್ದಾರಿಯೂ ಶುರುವಾಗುತ್ತದೆ' ಎಂಬ ಸಾಲು ನನಗೆ ಸ್ಫೂರ್ತಿ. ಈ ಸಾಲನ್ನು ನನಸಾಗಿಸಿಕೊಳ್ಳುವುದೇ ನನ್ನ ಕನಸು. ಆ ಮೂಲಕ, ಜವಾಬ್ದಾರಿಯುತ ವ್ಯಕ್ತಿಯಾಗಿ, ಬೇರೆಯವರು ಬೆಂಬತ್ತಿದ ಕನಸನ್ನೂ ಬೆಂಬಲಿಸುತ್ತೇನೆ.

- **ಮಾನುಷಿ ಚಿಲ್ಲರ್ (ಮಿಸ್ ವರ್ಲ್ಡ್ 2017)- ಯಾವ ವೃತ್ತಿ ಅತಿ ಹೆಚ್ಚು ಸಂಬಳವನ್ನು ಬೇಡುತ್ತದೆ?**

ಈ ಪ್ರಪಂಚದಲ್ಲಿ ಒಬ್ಬ ತಾಯಿಗೆ ಅತ್ಯಂತ ಹೆಚ್ಚಿನ ಸಂಬಳ ಮತ್ತು ಗೌರವ ಸಿಗಬೇಕು.

- **ಹರ್ನಾಜ್ ಸಂಧು (ಮಿಸ್ ಯೂನಿವರ್ಸ್ 2021)- ಇಂದಿನ ಹೆಣ್ಣುಮಕ್ಕಳು ಒತ್ತಡವನ್ನು ಹೇಗೆ ನಿರ್ವಹಿಸಬೇಕು?**

ತಾನು ಒಬ್ಬ ಅನನ್ಯ ವ್ಯಕ್ತಿ ಹಾಗೂ ಆ ಕಾರಣಕ್ಕಾಗಿಯೇ ತಾನು ಸುಂದರ ಎಂಬುದನ್ನು ಹೆಣ್ಣುಮಕ್ಕಳಿಗೆ ಮನದಟ್ಟು ಮಾಡಿಸಬೇಕು. ಒತ್ತಡ ನಿರ್ವಹಣೆಯ ಕೌಶಲಗಳನ್ನು ಕಲಿಸಬೇಕು.

ಕೈಗವಸಾಯ್ತು ಕಾಲುಚೀಲ!

ಸೌಂದರ್ಯ ಸ್ಪರ್ಧೆ ಬೇಡುವ ಸೃಜನಶೀಲತೆ ಮತ್ತು ಆತ್ಮಸ್ಥೈರ್ಯಕ್ಕೆ ಅತ್ಯುತ್ತಮ ಉದಾಹರಣೆ, 90ರ ದಶಕದಲ್ಲಿ 'ಮಿಸ್ ಯೂನಿವರ್ಸ್' ಪಟ್ಟ ಮುಡಿಗೇರಿಸಿಕೊಂಡ ಸುಶ್ಮಿತಾ ಸೇನ್. ಆರ್ಥಿಕ ಕೊರತೆಯಿಂದ ಡಿಸೈನರ್ ಗೌನಿಗೆ ಹೆಚ್ಚು ವ್ಯಯಿಸಲಾರದೆ, ನವದೆಹಲಿಯ ಬಜಾರೊಂದರಲ್ಲಿ ಖರೀದಿಸಿದ ಬಟ್ಟೆಯಿಂದ ಸ್ಥಳೀಯ ಟೇಲರ್ ಕೈಯಲ್ಲಿ ಗೌನ್ ಹೊಲಿಸಿಕೊಂಡು, ಒಂದು ಜೊತೆ ಕಪ್ಪು ಕಾಲುಚೀಲವನ್ನೇ ಕೈಗವಸನ್ನಾಗಿ ಧರಿಸಿಕೊಂಡು ರ‍್ಯಾಂಪ್ ಏರಿದವರು ಈ ದಿಟ್ಟೆ.

ಹೀಗಿರಬೇಕು ಸ್ಪರ್ಧಿಗಳು

- 5.5 ಇಂಚಿಗಿಂತ ಎತ್ತರ
- 'ಪಾಸಿಟಿವ್ ಬಾಡಿ' ಇಮೇಜಿನ ಮನಃಸ್ಥಿತಿ
- ಆಹಾರ ಸೇವನೆ, ನಡಿಗೆ, ಕೂರುವ, ನಿಲ್ಲುವ ಭಂಗಿ, ಮಾತಿನ ಶೈಲಿ, ಆತ್ಮವಿಶ್ವಾಸದ ನಗು ಎಲ್ಲವೂ ಶಿಸ್ತುಬದ್ಧ
- ಚರ್ಮ, ಕೂದಲ ಸೌಂದರ್ಯಕ್ಕೆ ಮನ್ನಣೆ
- ಉಡುಗೆ-ತೊಡುಗೆಗೆ ವಿಶೇಷ ಗಮನ
- ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯುವ ಆಕರ್ಷಕ ವ್ಯಕ್ತಿತ್ವ

ತೀರ್ಪುಗಾರರ ಸವಾಲಿನ ಪ್ರಶ್ನೆಗಳು

- ಈ ಜೀವನ ಯಾರಿಗೆ ಅತಿ ಸುಲಭ, ಸ್ತ್ರೀಗೋ ಪುರುಷನಿಗೋ?
- ನೀನು ಒಂದು ದಿನದ ಮಟ್ಟಿಗೆ ದೇವರಾದರೆ ಏನೆಲ್ಲ ಬದಲಾವಣೆ ಮಾಡುವೆ?
- ಹೆಣ್ಣುಮಕ್ಕಳು ಮಾತ್ರ ಈ ಪ್ರಪಂಚವನ್ನು ಆಳುವಂತಾದರೆ ಹೇಗಿರುತ್ತದೆ?

ಗರ್ಭಿಣಿಗೆ ಏಕೆ ಕಾಲುಸೆಳೆತ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ಮೊದಲ ಬಾರಿ ಗರ್ಭ ಧರಿಸಿದ್ದೇನೆ. ಆರು ತಿಂಗಳು ನಡೆಯುತ್ತಿದೆ. ವಿಪರೀತ ಎನ್ನುವಷ್ಟು ಕಾಲುನೋವು, ಸೆಳೆತ ಇದೆ. ಇದರಿಂದ ರಾತ್ರಿ ನಿದ್ರೆ ಬರುತ್ತಿಲ್ಲ. ವೈದ್ಯರು ಕಬ್ಬಿಣಾಂಶ ಇರುವ ಮಾತ್ರೆಗಳನ್ನು ನೀಡಿದ್ದಾರೆ. ನಡಿಗೆ ಆರಂಭಿಸಿದ್ದೇನೆ. ಆದರೂ ಕಡಿಮೆಯಾಗುತ್ತಿಲ್ಲ, ಏನು ಮಾಡಲಿ?**

ಕಾಲುನೋವು, ಕಾಲುಸೆಳೆತ ಗರ್ಭಿಣಿಯರಲ್ಲಿ ಸಹಜ. ಹಾರ್ಮೋನುಗಳ ಪ್ರಭಾವದಿಂದ ಶರೀರದ ತೂಕ ಹೆಚ್ಚುತ್ತದೆ. ರಕ್ತದ ಪ್ರಮಾಣವೂ ಹೆಚ್ಚಾಗುತ್ತದೆ. ಇದು ಅಭಿಧಮನಿಗಳ (ಮಲಿನ ರಕ್ತನಾಳ) ಅದರಲ್ಲೂ ಕಾಲಿನ ಅಭಿಧಮನಿಗಳ ಮೇಲೆ ಒತ್ತಡವನ್ನು ಉಂಟುಮಾಡಿ ಊತ, ನೋವಿಗೆ ಕಾರಣವಾಗಬಹುದು. ಗರ್ಭಿಣಿಯರಲ್ಲಿ ರಕ್ತದ ಪರಿಚಲನೆ ನಿಧಾನವಾಗಿರುತ್ತದೆ. ಆಗ ಸ್ನಾಯುಗಳಿಗೆ ರಕ್ತಪೂರೈಕೆ ವಿಳಂಬವಾಗಿ ಸೆಳೆತ ಉಂಟಾಗುತ್ತದೆ.

ಸ್ನಾಯುಗಳಲ್ಲಿ ಲ್ಯಾಕ್ಟಿಕ್ ಆ್ಯಸಿಡ್, ಪೈರೂವಿಕ್ ಆ್ಯಸಿಡ್ ಅಂಶಗಳು ಹೆಚ್ಚಾಗುವುದರಿಂದ ನೋವುಂಟಾಗುತ್ತದೆ. ಬೆಳೆಯುತ್ತಿರುವ ಗರ್ಭಕೋಶವು ನರಗಳ ಮೇಲೆ ಒತ್ತಡ ಉಂಟುಮಾಡುವುದರಿಂದಲೂ ಸ್ನಾಯುಗಳಲ್ಲಿ ನೋವು ಕಾಣಿಸಿಕೊಳ್ಳಬಹುದು. ವೆರಿಕೋಸ್ ವೇನ್ಸ್ ಇದ್ದರೂ ಹೀಗಾಗುತ್ತದೆ. ಕಡಿಮೆ ನೀರಿನ ಸೇವನೆಯಿಂದಾಗಿ ನಿರ್ಜಲೀಕರಣ ಉಂಟಾದರೆ ಸ್ನಾಯುಗಳ ಸೆಳೆತ ಬರಬಹುದು. ಕ್ಯಾಲ್ಸಿಯಂ, ಮೆಗ್ನೀಷಿಯಂ, ಬಿ1 ಮತ್ತು ಬಿ12 ವಿಟಮಿನ್ ಪೂರೈಕೆ ಸರಿಯಾಗಿ ಆಗದಿದ್ದರೆ ಕಾಲು ಜೋಮು ಹಿಡಿದ ಅನುಭವ ಆಗುತ್ತದೆ. ಹಾಗಾಗಿ, ಆದಷ್ಟೂ ನಿತ್ಯ ಮೂರರಿಂದ ನಾಲ್ಕು ಲೀಟರ್ ನೀರು ಕುಡಿಯಿರಿ. ಆಗಾಗ್ಗೆ ಎಳನೀರು ಕುಡಿಯಬಹುದು. ವಿಟಮಿನ್‌ಯುಕ್ತ ಕ್ಯಾಲ್ಸಿಯಂ ಹಾಗೂ ಕಬ್ಬಿಣಾಂಶ ಇರುವ ಆಹಾರವನ್ನು ಸೇವಿಸಿ. ಹಸಿರುಸೊಪ್ಪು, ತರಕಾರಿಗಳು, ಮೊಳಕೆಕಾಳುಗಳು ಒಳ್ಳೆಯದು. ಬಾಳೆಹಣ್ಣಿನಲ್ಲಿ ಪೊಟ್ಯಾಸಿಯಂ ಹಾಗೂ ಮೆಗ್ನೀಷಿಯಂ ಇರುವುದರಿಂದ ನಿತ್ಯ ಸೇವಿಸಿ.

ದೇಹವು ಕ್ಯಾಲ್ಸಿಯಂ ಹೀರಿಕೊಳ್ಳಲು ವಿಟಮಿನ್ 'ಡಿ' ಬಹಳ ಮುಖ್ಯ. ಬೆಳಗಿನ ಬಿಸಿಲಿಗೆ 10ರಿಂದ 15 ನಿಮಿಷ ಮೈಯೊಡ್ಡಿ. ವೈದ್ಯರ ಸಲಹೆಯ ಮೇರೆಗೆ ವಿಟಮಿನ್ ಮತ್ತು ಖನಿಜಾಂಶದ ಮಾತ್ರೆಗಳನ್ನು ಸೇವಿಸಿ. ನಿಲ್ಲಬೇಕಾದಾಗ ಎರಡೂ ಕಾಲುಗಳ ಮೇಲೆ ಸಮಭಾರ ಹಾಕಿ. ಕುಳಿತುಕೊಳ್ಳಬೇಕಾದರೆ ಪಾದಗಳನ್ನು ಸ್ವಲ್ಪ ಎತ್ತರದ ಸ್ಟೂಲಿನ ಮೇಲಿಡಿ. ಮಲಗುವಾಗ ಕಾಲನ್ನು ದಿಂಬಿನ ಮೇಲೆ ಇಟ್ಟುಕೊಳ್ಳಿ. ಕಾಲ್ಬೆರಳುಗಳು ಮೇಲ್ಮುಖವಾಗಿ ಇರಲಿ. ಆಗಾಗ್ಗೆ ತುದಿಗಾಲಿನಲ್ಲಿ ನಡೆಯಿರಿ. ಅಷ್ಟಾದರೂ ಹೆಚ್ಚು ನೋವಿದ್ದರೆ, ವೆರಿಕೋಸ್ ವೇನ್ಸ್ ಇದ್ದರೆ, ಕಾಲಿನ ಭಾಗ ಕೆಂಪಾಗಿದ್ದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ.

ಆರೋಗ್ಯಕರ ಆಹಾರ

ಯಾವ ಪಾತ್ರೆ ಬಳಕೆ ಸೂಕ್ತ?



ಅಡುಗೆ ಮಾಡಲು ನಾವು ಬಳಸುವ ಪಾತ್ರೆಗಳು, ಆಹಾರ ಪದಾರ್ಥಗಳನ್ನು ತುಂಬಿಸಿಡುವ ಡಬ್ಬಿಗಳು ನಮ್ಮ ಆರೋಗ್ಯ ಕಾಯ್ದುಕೊಳ್ಳುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ವಿಶ್ವ ಆಹಾರ ಸುರಕ್ಷಾ ದಿನದ (ಜೂನ್ 7) ಈ ಸಂದರ್ಭದಲ್ಲಿ, ಯಾವ ರೀತಿಯ ಪಾತ್ರೆ ಮತ್ತು ಡಬ್ಬಿಗಳ ಬಳಕೆ ಸೂಕ್ತ ಎಂಬ ಕುರಿತು ಆಹಾರ ತಜ್ಞೆ **ಹೆಚ್.ಎಸ್. ಪ್ರೇಮಾ** ಮಾಹಿತಿ ನೀಡಿದ್ದಾರೆ

- **ಅಡುಗೆ ಮಾಡಲು ಯಾವ ಬಗೆಯ ಪಾತ್ರೆ ಬಳಸುವುದು ಒಳ್ಳೆಯದು?**



ಪ್ರಕೃತಿಸಹಜ ಲೋಹಗಳಿಂದ ತಯಾರಿಸಿದ ಪಾತ್ರೆಗಳನ್ನು ಬಳಸುವುದು ಸೂಕ್ತ. ಅಂದರೆ, ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ, ಗಾಜಿನ ಪಾತ್ರೆಗಳಾದರೆ ಉತ್ತಮ. ಚಿನ್ನ, ಬೆಳ್ಳಿಯ ಪಾತ್ರೆಗಳನ್ನು ಆಹಾರ ತಯಾರಿಸಲು ಬಳಸುತ್ತೇವೋ ಇಲ್ಲವೋ ಎನ್ನುವುದು ಬೇರೆ ಮಾತು, ಆದರೆ ಅವು ಬಳಕೆಗೆ ಯೋಗ್ಯವಂತೂ ಹೌದು. ಮಿಶ್ರಲೋಹಗಳಾದ ಕಂಚು, ಹಿತ್ತಾಳೆ ಪಾತ್ರೆಗಳು ಕಿಲುಬು ಕಟ್ಟುವುದರಿಂದ ಅವುಗಳನ್ನು ಬಳಸುವಾಗ ಎಚ್ಚರ ವಹಿಸಬೇಕು. ಈ ಪಾತ್ರೆಗಳಿಗೆ ಕಲಾಯಿ ಮಾಡಲು ಬಳಸುವ ಪದಾರ್ಥಗಳಂತೂ ಅತ್ಯಂತ ವಿಷಯುಕ್ತವಾಗಿರುತ್ತವೆ.



ಅಲ್ಯೂಮಿನಿಯಂ ಮತ್ತು ಸೀಸದ ಪಾತ್ರೆಗಳ ಬಳಕೆ ಆರೋಗ್ಯಕ್ಕೆ ಹಾನಿಕಾರಕ. ಅಲ್ಯೂಮಿನಿಯಂ ಶಾಖಕ್ಕೆ ಬೇಗ ಪ್ರತಿಕ್ರಿಯಿಸುತ್ತದೆ. ಬಳಸುತ್ತಾ ಬಳಸುತ್ತಾ ಕರಗತೊಡಗುತ್ತದೆ. ಹಾಗೆ ಕರಗುವ ಆ ಅಂಶ ನಮ್ಮ ದೇಹವನ್ನು ಸೇರುತ್ತದೆ. ಹೀಗಾಗಿ, ಅಲ್ಯೂಮಿನಿಯಂ ಪಾತ್ರೆಗಳನ್ನು ಅಡುಗೆ ತಯಾರಿಸಲು ನಿರಂತರವಾಗಿ ಬಳಸುವುದು ತರವಲ್ಲ.

ಸ್ಟೀಲ್ ಕೂಡ ಮಿಶ್ರಲೋಹ. ಆದರೆ ಮನುಷ್ಯ ಅದನ್ನು ಬಳಕೆಗೆ ಸೂಕ್ತವಾಗಿ ಮಾರ್ಪಡಿಸಿದ್ದಾನೆ. ಸ್ಟೇನ್‌ಲೆಸ್ ಸ್ಟೀಲ್‌ನಿಂದ ತೊಂದರೆಯಾಗಿರುವ ಬಗ್ಗೆ ಇದುವರೆಗೆ ಯಾವುದೇ ದಾಖಲೆಯಿಲ್ಲ. ಅದು ಕರಗಿ ದೇಹವನ್ನು ಸೇರುವುದಿಲ್ಲ. ಹಾಗಾಗಿ, ಸ್ಟೀಲ್ ಬಳಸಬಹುದು. ಇನ್ನು ಮಣ್ಣು, ಕಲ್ಲು, ಮರದ ತೊಗಟೆಯಂತಹ ಪಂಚಭೂತಗಳ ಮೂಲದಿಂದ ತಯಾರಿಸಿದ ವಸ್ತುಗಳಲ್ಲಿ ಮಾಡುವ ಅಡುಗೆಯಂತೂ ನಮ್ಮ ದೇಹದಲ್ಲಿ ಯಾವುದೇ ರೀತಿಯ ವಿಷವನ್ನೂ ಉತ್ಪತ್ತಿ ಮಾಡುವುದಿಲ್ಲ.

ಈ ವಾರ

- **ಸಿಲಿಕಾನ್, ಪ್ಲಾಸ್ಟಿಕ್, ನಾನ್‌ಸ್ಟಿಕ್ ಪಾತ್ರೆಗಳ ಬಳಕೆ ಬಗ್ಗೆ ಹೇಳುವುದಾದರೆ...**

ಈಚೆಗೆ ಸಿಲಿಕಾನ್ ಕುಕ್‌ವೇರ್‌ಗಳ ಬಳಕೆ ಹೆಚ್ಚಾಗಿದೆ. ಇದು ಕೂಡ ಆಹಾರದೊಂದಿಗೆ ಕರಗಿ ದೇಹವನ್ನು ಸೇರುತ್ತದೆ. ಉದಾಹರಣೆಗೆ, ಹೆಂಚಿಗೆ ಎಣ್ಣೆ ಹಾಕಲು ಸಿಲಿಕಾನ್ ಬ್ರಷ್ ಬಳಸುತ್ತೇವೆ. ಆದರೆ ಚಮಚದಲ್ಲಿಯೇ ಎಣ್ಣೆ ಹಾಕಬಹುದಲ್ಲ? ಹೀಗೆ ಅಗತ್ಯವೇ ಇಲ್ಲದೆ ಕೆಲವನ್ನು ಬಳಸಿ ಆರೋಗ್ಯವನ್ನು ನಾವೇ ಕೆಡಿಸಿಕೊಳ್ಳುತ್ತಿದ್ದೇವೆ.

ನಾನ್‌ಸ್ಟಿಕ್ ಸಾಮಗ್ರಿಗಳಲ್ಲಿ ಮಿಶ್ರಲೋಹದ ಮೇಲೆ ಪ್ಲಾಸ್ಟಿಕ್ ಕೋಟಿಂಗ್ ಹಾಕಲಾಗಿರುತ್ತದೆ. ಇದರ ಬಳಕೆ ಆರೋಗ್ಯಕ್ಕೆ ಮಾರಕ. ಪ್ಲಾಸ್ಟಿಕ್ ಸಾಮಗ್ರಿಗಳನ್ನು ಮತ್ತೂ ದೂರ ಇಡಬೇಕು. ಇವ್ಯಾವೂ ಪ್ರಕೃತಿ ಮೂಲದಿಂದ ಬಂದವಲ್ಲ, ಮಾನವನ ಸೃಷ್ಟಿ ಎಂಬುದನ್ನು ನೆನಪಿಡಬೇಕು.

ಭಾರತೀಯ ಸಂಸ್ಕೃತಿಯಲ್ಲಿ ಆಹಾರ ಹಾಗೂ ಆಹಾರ ಸಾಮಗ್ರಿಗಳ ವಿಷಯ ಈ ಮೊದಲು ಮಾರುಕಟ್ಟೆಕೇಂದ್ರಿತ ಆಗಿರಲಿಲ್ಲ, ಆರೋಗ್ಯಕೇಂದ್ರಿತವಾಗಿತ್ತು. ಆದರೆ ಈಗ ಮಾರುಕಟ್ಟೆಕೇಂದ್ರಿತ ಸಾಮಗ್ರಿಗಳೇ ಹೆಚ್ಚು ಬಳಕೆಯಲ್ಲಿವೆ.

- **ಅನಾರೋಗ್ಯಕರ ಎಂದು ಪರಿಗಣಿಸಲಾಗುವ ಪಾತ್ರೆಗಳ ಬಳಕೆಯಿಂದ ಆಗುವ ಗಂಭೀರ ಅಪಾಯಗಳೇನು?**

ಈ ಪಾತ್ರೆಗಳಲ್ಲಿ ಕಾರ್ಬನ್ ಚೈನ್ ಬಹುಬೇಗ ತುಂಡಾಗುತ್ತದೆ. ಈ ರಾಸಾಯನಿಕ ಪ್ರಕ್ರಿಯೆಯಲ್ಲಿ ಒಂದೊಂದು ಕೊಂಡಿ ಕಳಚಿದಾಗಲೂ ಇಂಚಿಂಚು ವಿಷ ಬಿಡುಗಡೆಯಾಗುತ್ತಾ ಹೋಗುತ್ತದೆ. ಆ ವಿಷ ನಮ್ಮ ದೇಹ ಸೇರಿ ಜೀವಕೋಶಗಳಿಗೆ ಕಂಟಕವಾಗುತ್ತದೆ. ಕ್ಯಾನ್ಸರ್, ಸಂತಾನಹೀನತೆಯಂತಹ ಸಮಸ್ಯೆಗಳಿಗೆ ಕಾರಣವಾಗುತ್ತದೆ.

- **ಆಹಾರ ತಯಾರಿ ಹೊರತಾಗಿ, ಆಹಾರ ಸಾಮಗ್ರಿಗಳ ಶೇಖರಣೆಗೆ ಯಾವುದು ಉತ್ತಮ?**



ಆಹಾರ ಸಾಮಗ್ರಿಗಳ ಶೇಖರಣೆಗೆ ಸ್ಟೀಲ್, ಅಲ್ಯೂಮಿನಿಯಂ, ಗಾಜು, ಮಣ್ಣಿನ ಜಾಡಿಗಳು, ಸೆರಾಮಿಕ್ ಜಾಡಿಗಳನ್ನು ಬಳಸಬಹುದು. ಆಹಾರ ತಯಾರಿಕೆಗೆ ಅಲ್ಲದಿದ್ದರೂ ಶೇಖರಣೆಗೆ ಅಲ್ಯೂಮಿನಿಯಂ ಬಳಸುವುದರಿಂದ ತೊಂದರೆ ಇಲ್ಲ. ಆದರೆ ಪ್ಲಾಸ್ಟಿಕ್ ಮಾತ್ರ ಆಹಾರ ಸಾಮಗ್ರಿಗಳನ್ನು ಇಡಲು ಸಹ ಅಪಾಯಕಾರಿ.

ಅಡುಗೆ ಬದುಕಿಗಾಯ್ತು ದೀವಿಗೆ



ರಸಾಸ್ವಾದ

'ಹಾಯ್... ಹಲೋ ಫ್ರೆಂಡ್ಸ್... ಎಲ್ಲರಿಗೂ ನಮಸ್ಕಾರ, ರೇಖಾ ಅಡುಗೆ ಚಾನೆಲ್‌ಗೆ ಸ್ವಾಗತ...'

ಹೊಸ ರೆಸಿಪಿ ತಯಾರಿಸಲು, ಸಿಂಪಲ್ ಆಗಿ ದಿಢೀರ್ ತಿಂಡಿ ಅಣಿಗೊಳಿಸಲು ಅಥವಾ ಸಾಂಪ್ರದಾಯಿಕ ಹಬ್ಬದಡುಗೆ ಮಾಡಲು ಯೂಟ್ಯೂಬ್‌ನಲ್ಲಿ ಹೆಸರು ಟೈಪಿಸಿದರೆ ಸಾಕು, ಮೇಲಿನ ಮಾತುಗಳೊಂದಿಗೆ ತಮ್ಮ ಅಡುಗೆ ಮನೆಗೆ ಆಹ್ವಾನವೀಯುತ್ತಾರೆ ರೇಖಾ. 27.9 ಲಕ್ಷ ಚಂದಾದಾರರನ್ನು ಹೊಂದಿರುವ, ಕಡಿಮೆ ಅವಧಿಯಲ್ಲೇ ಎಲ್ಲರ ಅಡುಗೆ ಮನೆ- ಮನಕ್ಕೆ ಇಳಿದಿರುವ ರೇಖಾ 2016ರಲ್ಲಿ ಯೂಟ್ಯೂಬ್‌ಗೆ ಪದಾರ್ಪಣೆ ಮಾಡಿದವರು. ಈವರೆಗೆ 1,700ಕ್ಕೂ ಹೆಚ್ಚು ರೆಸಿಪಿಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವರು ಹೇಳಿಕೊಡುವ ಅಡುಗೆಯನ್ನು ಕಲಿತೇ ಕೆಲವರು ಹೋಟೆಲ್, ಬೀದಿಬದಿ ಅಂಗಡಿ ತೆರೆದು ಬದುಕು ಕಟ್ಟಿಕೊಂಡಿದ್ದಾರೆ. ಹವ್ಯಾಸಕಷ್ಟೇ ಸೀಮಿತವಾಗಿದ್ದ ಅಡುಗೆ ತಯಾರಿ ಈಗ ರೇಖಾ ಅವರ ಬದುಕನ್ನೇ ಬೆಳಗಿಸಿದೆ. ಎಸ್ಸೆಸ್ಸೆಲ್ಸಿ ಫೇಲ್ ಆಗಿದ್ದ ರೇಖಾ ಅವರಿಗೆ ಓದಿಗಿಂತ ಅಡುಗೆ ಮಾಡುವುದು, ಹೂ ಕಟ್ಟುವುದು, ರಂಗೋಲಿ ಹಾಕುವುದೆಂದರೆ ಎಲ್ಲಿಲ್ಲದ ಉತ್ಸಾಹ. ಬಡತನದಲ್ಲಿದ್ದ ಕುಟುಂಬಕ್ಕೆ ಆಸರೆಯಾಗಲು ಗಾರ್ಮೆಂಟ್ಸ್ ಕೆಲಸದತ್ತ ಮುಖ ಮಾಡಿದವರು ಅವರು. ಆ ಬಳಿಕ ತಮ್ಮ ಬದುಕಿಗೆ ದೀವಿಗೆಯೇ ಆದ ಯೂಟ್ಯೂಬ್ ಚಾನೆಲ್ ಪಯಣದ ಅನುಭವವನ್ನು ಅವರಿಲ್ಲಿ ವಿವರಿಸಿದ್ದಾರೆ...

- **ಅಡುಗೆ ಚಾನೆಲ್‌ಗೆ ತೆರೆದುಕೊಂಡದ್ದು ಹೇಗೆ?**

ಅಡುಗೆ ನನ್ನ ನೆಚ್ಚಿನ ಹವ್ಯಾಸ. ಚಿಕ್ಕಂದಿನಲ್ಲೇ ಅಮ್ಮ, ಸೋದರತ್ತೆಯಿಂದ ಅಡುಗೆಗಳನ್ನು ಕಲಿತು ಮಾಡುತ್ತಿದ್ದೆ. ಗಾರ್ಮೆಂಟ್ಸ್‌ನಲ್ಲಿ ಒಮ್ಮೆ 'ಬೆಂಕಿಯಿಲ್ಲದೆ ಅಡುಗೆ' ಸ್ಪರ್ಧೆ ಇಟ್ಟಾಗ ಒಂದೇ ಗಂಟೆಯಲ್ಲಿ 26 ಬಗೆಯ ತಿನಿಸು ತಯಾರಿಸಿ ಎಲ್ಲರನ್ನೂ ನಿಬ್ಬೆರಗಾಗಿಸಿದ್ದೆ. ಇದನ್ನು ಮನೆಗೆ ಬಂದು ತಮ್ಮನ ಬಳಿ ಹೇಳಿಕೊಂಡೆ. ಯೂಟ್ಯೂಬ್ ಚಾನೆಲ್ ಶುರು ಮಾಡಲು ವಿಷಯಕ್ಕಾಗಿ ತಡಕಾಡುತ್ತಿದ್ದ ಅವನಿಗೆ ಅಕ್ಕನ ಅಡುಗೆ ಹವ್ಯಾಸವೇ ವೇದಿಕೆಯಾಯಿತು.

- **ಚಾನೆಲ್ ಪಯಣದ ಆರಂಭದ ಹಾದಿ ಹೇಗಿತ್ತು?**

ತುಂಬಾ ಕಷ್ಟಕರವಾಗಿತ್ತು. ನಾನು ಗಾರ್ಮೆಂಟ್ಸ್‌ನಲ್ಲಿ, ತಮ್ಮ ಉದಯ್ ಕುಮಾರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಲೇ ಚಾನೆಲ್ ಆರಂಭಿಸಿದೆವು. ಪುಟ್ಟ ಮನೆ. ಅಡುಗೆ ಕೋಣೆಯಲ್ಲಿ ಒಬ್ಬರಷ್ಟೇ ನಿಂತು ಅಡುಗೆ ಮಾಡಬಹುದಿತ್ತು. ಸರಿಯಾದ ಪಾತ್ರೆಗಳು ಸಹ ಇರಲಿಲ್ಲ. ವಿಡಿಯೊ ಶೂಟ್ ಮಾಡಲು ಬೆಳಕಿರಲಿಲ್ಲ.ಇನ್ನು ಕ್ಯಾಮೆರಾ ದೂರದ ಮಾತು. ಮೊಬೈಲ್‌ನಲ್ಲೇ ವಿಡಿಯೊ ಮಾಡಿ, ಎಡಿಟ್ ಮಾಡಿ ತಮ್ಮ ಅಪ್‌ಲೋಡ್ ಮಾಡುತ್ತಿದ್ದ. ವೀಕ್ಷಕರಿಂದ 'ಅಂಥ ಪಾತ್ರೆ ಬಳಸಿ', 'ಕ್ಯಾಮೆರಾ ಬಳಸಿ', 'ಬೆಳಕು ಚೆನ್ನಾಗಿರಲಿ' ಎಂದೆಲ್ಲ ಸಲಹೆಗಳು ಬರಲು ಶುರುವಾದವು. ಸ್ನೇಹಿತರ ಸಹಾಯದಿಂದ ಕ್ಯಾಮೆರಾ ಕೊಂಡೆವು. ಒಂದೂವರೆ ವರ್ಷ ಕ್ಯಾಮೆರಾ ಕೈಯಲ್ಲಿ ಹಿಡಿದೇ ವಿಡಿಯೊ ಶೂಟ್ ಮಾಡಿದೆವು. ಆ ಬಳಿಕ ಟ್ರೈಪಾಡ್ ಕೊಂಡುಕೊಂಡೆವು. ಬಳಿಕ ಉದ್ಯೋಗ ಬಿಟ್ಟು ಅಡುಗೆ ಚಾನೆಲ್‌ನಲ್ಲೇ ಸಕ್ರಿಯಳಾದೆ.

- **ನಿಮ್ಮ ಚಾನೆಲ್‌ನ ವಿಶೇಷ ಏನು?**

ಒಂದು ಪದಾರ್ಥ ಇಲ್ಲದಿದ್ದರೆ ಅದರ ಬದಲು ಬೇರೆಯದನ್ನು ಬಳಸುವ ಟಿಪ್ಸ್ ಕೊಡುತ್ತೇನೆ. 3ರಿಂದ 6 ನಿಮಿಷಗಳವರೆಗಿನ ವಿಡಿಯೊಗಳನ್ನು ಮಾತ್ರ ಮಾಡುತ್ತೇವೆ. ಶಾರ್ಟ್ ವಿಡಿಯೊಗಳನ್ನು ಜನ ಹೆಚ್ಚು ನೋಡುತ್ತಾರೆ.

ಸಂದರ್ಶನ: ಸುಮಾ ಬಿ.

ಬಿಸಿಬೇಳೆಬಾತ್ ಗಮ್ಮತ್ತು

ರೇಖಾ ಅವರು 2017ರಲ್ಲಿ ತಯಾರಿಸಿದ ಬಿಸಿಬೇಳೆಬಾತ್ ಅತಿ ಹೆಚ್ಚು, ಅಂದರೆ 1.66 ಕೋಟಿ ವ್ಯೂಸ್ ಪಡೆದಿದೆ. ಅದನ್ನು ತಯಾರಿಸುವ ವಿಧಾನ: **ಬೇಕಾಗುವ ಸಾಮಗ್ರಿ:** ಅಕ್ಕಿ- ಒಂದು ಕಪ್ (ಕಾಲು ಕೆ.ಜಿ. ಗಿಂತ ಕಡಿಮೆ), ತೊಗರಿಬೇಳೆ- 100 ಗ್ರಾಂ, ತರಕಾರಿ-ಆಲೂಗೆಡ್ಡೆ, ಕ್ಯಾಪ್ಸಿಕಂ, ಬೀನ್ಸ್, ಕ್ಯಾರೆಟ್, ಬಟಾಣಿ, ಗೆಡ್ಡೆಕೋಸು... ಅರ್ಧ ನಿಂಬೆಹಣ್ಣು ಗಾತ್ರದಷ್ಟು ನೆನೆಸಿದ ಹುಣಸೆಹಣ್ಣು, ರುಚಿಗೆ ತಕ್ಕಷ್ಟು ಉಪ್ಪು.

ಒಗ್ಗರಣೆಗೆ: ಎಣ್ಣೆ, ಈರುಳ್ಳಿ, ಕರಿಬೇವು, ಎರಡು ಒಣಮೆಣಸಿನಕಾಯಿ, 2 ಟೊಮೆಟೊ, ಶೇಂಗಾ, ಸಾಸಿವೆ, ಅರಸಿನ, ಬಿಸಿಬೇಳೆಬಾತ್ ಪುಡಿ.



ಮಾಡುವ ವಿಧಾನ: ತರಕಾರಿ ಹಾಗೂ ಅಕ್ಕಿ, ಬೇಳೆ ಹಾಕಿ ಸ್ವಲ್ಪ ಎಣ್ಣೆ, ಉಪ್ಪು ಬೆರೆಸಿ ಬೇಯಿಸಿಕೊಳ್ಳಬೇಕು. ಬಾಣಲೆಯಲ್ಲಿ ಸಾಸಿವೆ ಸಿಡಿಸಿ, ಶೇಂಗಾ, ಈರುಳ್ಳಿ, ಒಣಮೆಣಸಿನಕಾಯಿ, ಕರಿಬೇವು ಹಾಕಿ ಫ್ರೈ ಮಾಡಿಕೊಳ್ಳಿ. ಬಳಿಕ ಕ್ಯಾಪ್ಸಿಕಂ, ಟೊಮೆಟೊ, ಅರಿಶಿನ, ಬಿಸಿಬೇಳೆಬಾತ್ ಪುಡಿ, ಉಪ್ಪು, ಹುಣಸೆರಸ ಹಾಕಿ ಫ್ರೈ ಮಾಡಿ. ಅದಕ್ಕೆ ಬೆಂದಿರುವ ತರಕಾರಿ, ಅಕ್ಕಿ- ಬೇಳೆ ಹಾಕಿ ಮಿಕ್ಸ್ ಮಾಡಿ. ರುಚಿಗೆ ಒಂದು ಚಮಚ ತುಪ್ಪ ಹಾಕಿ ಎರಡು ನಿಮಿಷ ಕುದಿಸಿ. ಬಳಿಕ ಬಿಸಿ ಇರುವಾಗಲೇ ಸವಿಯಿರಿ.

ಬಿಸಿಬೇಳೆಬಾತ್ ಪುಡಿ ಮಾಡುವ ವಿಧಾನ

ಬೇಕಾಗುವ ಸಾಮಗ್ರಿ: ಒಣಗಿದ ಬ್ಯಾಡಗಿ ಮೆಣಸಿನಕಾಯಿ 25, ಗುಂಟೂರು ಮೆಣಸಿನಕಾಯಿ 10ರಿಂದ 12, ದನಿಯ ಕಾಳು 4 ಟೀ ಚಮಚ, ಗಸಗಸೆ 1/2 ಟೀ ಚಮಚ, ಜೀರಿಗೆ 1 ಟೀ ಚಮಚ, ಮೆಂತ್ಯ 1/4 ಟೀ ಚಮಚ, ಇಂಗು 1/4 ಟೀ ಚಮಚ, ಕಡಲೆಬೇಳೆ 2 ಟೀ ಚಮಚ, ಉದ್ದಿನಬೇಳೆ 2 ಟೀ ಚಮಚ, ಚೆಕ್ಕೆ 2 ಇಂಚು, ಲವಂಗ 5ರಿಂದ 6, ಏಲಕ್ಕಿ 2 , ಮೆಣಸಿನ ಕಾಳು 1/2 ಟೀ ಚಮಚ, ಬಿಳಿ ಎಳ್ಳು 1/2 ಚಮಚ, ಎಣ್ಣೆ 2 ಟೀ ಚಮಚ, ಸ್ವಲ್ಪ ಕರಿಬೇವು, ಕಲ್ಲುಪ್ಪು.



ಮಾಡುವ ವಿಧಾನ: ಕಡಲೆಬೇಳೆ, ಉದ್ದಿನಬೇಳೆ ಹುರಿದುಕೊಂಡು ಪ್ಲೇಟ್‌ಗೆ ಹಾಕಿ, ದನಿಯ ಹುರಿದು ಪ್ಲೇಟ್‌ಗೆ ಹಾಕಿ, ಜೀರಿಗೆ, ಮೆಂತ್ಯ, ಗಸಗಸೆ, ಎಳ್ಳು, ಚೆಕ್ಕೆ, ಲವಂಗ, ಏಲಕ್ಕಿ ಹಾಕಿ ಸಣ್ಣ ಉರಿಯಲ್ಲಿ ಹುರಿದು ತೆಗೆದುಕೊಳ್ಳಬೇಕು. ಬ್ಯಾಡಗಿ, ಗುಂಟೂರು ಮೆಣಸಿನ ಕಾಯಿಯನ್ನು ಬಾಣಲೆಗೆ ಸ್ವಲ್ಪ ಎಣ್ಣೆ ಬಿಟ್ಟು ಗರಿ ಆಗುವವರೆಗೆ ಹುರಿದು, ಕರಿಬೇವು ಹಾಕಿ ಹುರಿದುಕೊಳ್ಳಿ. ತಣ್ಣಗಾದ ನಂತರ ಮಿಕ್ಸಿಗೆ ಹಾಕಿ ಕಲ್ಲುಪ್ಪು, ಇಂಗು ಹಾಕಿ ಪುಡಿ ಮಾಡಿ. ಈ ಪುಡಿಯನ್ನು ಗಾಜಿನ ಬಾಟಲಿಯಲ್ಲಿ ಎರಡು ತಿಂಗಳವರೆಗೆ ಕೆಡದಂತೆ ಇಡಬಹುದು. ಈ ಪ್ರಮಾಣದ ಅಳತೆಯಲ್ಲಿ 4ರಿಂದ 5 ಬಾರಿ ಬಿಸಿಬೇಳೆಬಾತ್ ತಯಾರಿಸಬಹುದು.

ಬಾಣಗೆರೆ: ಶಿಥಿಲಾವಸ್ಥೆಯಲ್ಲಿರುವ ಶತಮಾನದ ಶಾಲೆ

ಶಾಲೆಗೆ ಬೇಕಿದೆ ಕಾಯಕಲ್ಪ

● ವಿಶ್ವನಾಥ ಡಿ.

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಸಾಹಿತಿ 'ಬೀಚಿ' (ರಾಯಸಂ ಭೀಮಸೇನ ರಾವ್) ಅವರು ಓದಿದ್ದ ಶಾಲೆ ಶಿಥಿಲಗೊಂಡಿದ್ದು ಕಾಯಕಲ್ಪದ ನಿರೀಕ್ಷೆಯಲ್ಲಿದೆ. ಬಾಣಗೆರೆಯಲ್ಲಿ 1903ರಲ್ಲಿ ಸ್ಥಾಪಿತ ಬಾಲಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ 122 ವರ್ಷ ಗತಿಸಿದೆ.

1 ರಿಂದ 8ನೇ ತರಗತಿಯವರೆಗಿನ ಈ ಶಾಲೆಯಲ್ಲಿ 152 ವಿದ್ಯಾರ್ಥಿಗಳಿದ್ದಾರೆ. ಏಳು ಶಿಕ್ಷಕರು ಇದ್ದಾರೆ. ಒಟ್ಟು 17 ಕೊಠಡಿಗಳಿದ್ದು, ಅದರಲ್ಲಿ 4 ಕೊಠಡಿ ಉತ್ತಮ ಸ್ಥಿತಿಯಲ್ಲಿವೆ. ಉಳಿದ ಕೊಠಡಿ ದುರಸ್ತಿ ಆಗಬೇಕಿದೆ. ತರಗತಿ ಕೋಣೆಯಲ್ಲಿಯೇ ಬಿಸಿಊಟದ ಅಡುಗೆ ಸಿದ್ಧತೆಯೂ ನಡೆಯುತ್ತದೆ.

'ಶಿಥಿಲ ಸ್ಥಿತಿಯಲ್ಲಿರುವ ಕಟ್ಟಡದ ಕೊಠಡಿಗಳು ಪಾಳು ಬಿದ್ದಿವೆ. ಕೊಂಚ ಸುಸ್ಥಿತಿಯಲ್ಲಿರುವ ಕಟ್ಟಡದ ಕೊಠಡಿಗಳಲ್ಲಿ ತರಗತಿಗಳು ನಡೆಯುತ್ತಿವೆ. ಪಾಳು ಬಿದ್ದಿರುವ ಕೊಠಡಿಗಳನ್ನು ದುರಸ್ತಿಗೊಳಿಸಿದರೆ, ಹೆಚ್ಚು ಸ್ಥಳಾವಕಾಶ ಸಿಗುತ್ತದೆ. ವಿದ್ಯಾರ್ಥಿಗಳಿಗೆ ಪಾಠ ಬೋಧಿಸಲು ಅನುಕೂಲವಾಗುತ್ತದೆ' ಎಂದು ಗ್ರಾಮಸ್ಥರು ತಿಳಿಸಿದರು.

ಶಾಲಾವರಣದಲ್ಲಿ ಸಾರ್ವಜನಿಕರಿಗಾಗಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಸುತ್ತಲೂ ಕಾಂಪೌಂಡ್ ವ್ಯವಸ್ಥೆ ಇದ್ದರೂ ಜನರು ಮಾತ್ರ ಘನತ್ಯಾಜ್ಯವನ್ನು ಶಾಲಾವರಣದಲ್ಲಿ ಬಿಸಾಡುತ್ತಾರೆ. ಇದರಿಂದ ಶಾಲಾ ಪರಿಸರವೇ ಹದಗೆಟ್ಟಿದೆ.

'ಶಾಲೆಯ ಕಟ್ಟಡದ ಕೊರತೆ, ಸ್ವಚ್ಛತೆಯಿಂದ ವಂಚಿತವಾಗಿದೆ. ಇದರಿಂದ ಶಾಲೆಯಲ್ಲಿ ದಾಖಲಾತಿ ಪ್ರಮಾಣ ಇಳಿಮುಖವಾಗಿದೆ. 1ನೇ ತರಗತಿ ಪ್ರವೇಶಕ್ಕೆ ಈವರೆಗೆ 6 ಅರ್ಜಿಗಳು ಮಾತ್ರ ಬಂದಿವೆ. ಶಾಲೆಗೆ ಅಗತ್ಯವಿರುವ 4 ಹೊಸ ಕೊಠಡಿ ನಿರ್ಮಾಣಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಬ್ರಿಟಿಷ್ ಕಾಲದ ಕಟ್ಟಡ ಸುರಕ್ಷತೆ ಬಗ್ಗೆಯೂ ಮನವಿ ಸಲ್ಲಿಸಲಾಗಿದೆ' ಎಂದು ಶಾಲೆಯ ಮುಖ್ಯ ಶಿಕ್ಷಕ ಎಚ್.ಶಫಿವುಲ್ಲಾ ತಿಳಿಸಿದರು.

'ಕಟ್ಟಡ ಸಂಪೂರ್ಣ ಶಿಥಿಲಗೊಂಡಿದೆ. ಮಕ್ಕಳನ್ನು ಈ ಶಾಲೆಗೆ ಕಳಿಸಿದಾಗ ಕಟ್ಟಡ ಬಿದ್ದು ಅನಾಹುತ ಸಂಭವಿಸಿದರೆ ಹೊಣೆ ಯಾರು? ಕಟ್ಟಡ ಸರಿಪಡಿಸಿದರೆ ನಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಯೋಚಿಸಬಹುದು' ಎಂದು ಸುತ್ತಮುತ್ತ ವಾಸವಾಗಿರುವ ಬಾಣಗೆರೆ ಗ್ರಾಮಸ್ಥರು ತಿಳಿಸಿದರು.


ಹರಪನಹಳ್ಳಿ ಪಟ್ಟಣದ ಬಾಣಗೆರೆಯಲ್ಲಿರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಪಾಳು ಬಿದ್ದಿದೆ.

ಶತಮಾನ ಪೂರೈಸಿದ ಶಾಲೆಯಲ್ಲಿ ಓದಿದವರು ಸಾವಿರಾರು ಮಂದಿ ಉನ್ನತ ಸಾಧನೆ ಮಾಡಿದ್ದಾರೆ. ಈ ಶಾಲೆಯ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.
ಜಾಕೀರ್ ಹುಸೇನ್, ಸದಸ್ಯ, ಪುರಸಭೆ

ತಾಲ್ಲೂಕಿನಲ್ಲಿ ವಿವಿಧ ಶಾಲೆಗಳ 410 ಕೊಠಡಿ ದುರಸ್ತಿ ಹಂತದಲ್ಲಿವೆ. 212 ಕೊಠಡಿಗಳ ದುರಸ್ತಿ ಪೂರ್ಣವಾಗಿದೆ. ಉಳಿದ ಕೊಠಡಿಗಳ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿದೆ.
ಎಚ್.ಲೇಪಾಕ್ಷಪ್ಪ, ಬಿಇಒ ಹರಪನಹಳ್ಳಿ

ವಿಧಾನಪರಿಷತ್: ನಾಲ್ವರ ಹೆಸರು ಅಂತಿಮ

ಬೆಂಗಳೂರು: ವಿಧಾನಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಮಾಡಲು ಆರತಿ ಕೃಷ್ಣ, ರಮೇಶ್ ಬಾಬು, ದಿನೇಶ್ ಅಮೀನ್‌ಮಟ್ಟು, ಡಿ.ಜಿ. ಸಾಗರ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದ್ದು, ರಾಜಭವನಕ್ಕೆ ಕಳುಹಿಸಲಾಗಿದೆ.

ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್, ಪ್ರಕಾಶ್ ಕೆ. ರಾಥೋಡ್ ಅವರ ಅವಧಿ ಅಕ್ಟೋಬರ್ 2024ಕ್ಕೆ, ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಅವಧಿ ಜನವರಿ 2025ಕ್ಕೆ ಮುಕ್ತಾಯವಾಗಿತ್ತು. ಚನ್ನಪಟ್ಟಣ ಉಪಚುನಾವಣೆಗೆ ಸ್ಪರ್ಧಿಸಲು ಸಿ.ಪಿ. ಯೋಗೇಶ್ವರ್ ರಾಜೀನಾಮೆ ನೀಡಿದ್ದರಿಂದ ಅವರ ಸ್ಥಾನವೂ ತೆರವಾಗಿತ್ತು.

ಖಾಲಿ ಇದ್ದ ನಾಲ್ಕು ನಾಮನಿರ್ದೇಶನ ಸ್ಥಾನಗಳಿಗೆ 20ಕ್ಕೂ ಹೆಚ್ಚು ಆಕಾಂಕ್ಷಿಗಳು ಇದ್ದರು. ಎಐಸಿಸಿ ಸಮ್ಮತಿ ದೊರೆತ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಲ್ವರ ಹೆಸರನ್ನು ಅಂತಿಮಗೊಳಿಸಿದ್ದರು. ಆರತಿ ಕೃಷ್ಣ ಅನಿವಾಸಿ ಭಾರತೀಯ ಸಮಿತಿ ಉಪಾಧ್ಯಕ್ಷೆಯಾಗಿದ್ದಾರೆ. ರಮೇಶ್ ಬಾಬು ಪ್ರಸ್ತುತ ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷರು. ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಸಿದ್ದರಾಮಯ್ಯ ಅವರಿಗೆ 2013–18ರವರೆಗೆ ಮಾಧ್ಯಮ ಸಲಹೆಗಾರರಾಗಿದ್ದರು. ಡಿ.ಜಿ. ಸಾಗರ್ ದಲಿತ ಸಂಘರ್ಷ ಸಮಿತಿಯ ನಾಯಕರಲ್ಲಿ ಒಬ್ಬರು.

ನಾಲ್ವರ ನೇಮಕದೊಂದಿಗೆ ಕಾಂಗ್ರೆಸ್ ಸಂಖ್ಯಾಬಲ 37ಕ್ಕೆ ಏರಿಕೆಯಾಗಲಿದ್ದು, ವಿಧಾನಪರಿಷತ್‌ನಲ್ಲಿ ಬಹುಮತ ಹೊಂದಲಿದೆ.

ದೇಗುಲ ಪ್ರವೇಶ: ದಲಿತರಿಗೆ ವಿರೋಧ

ಎಲೆಚಾಕನಹಳ್ಳಿಯ ಮಾರಮ್ಮ ದೇವಸ್ಥಾನ; ಶಾಂತಿ ಸಭೆ ವಿಫಲ, ಬಂದೋಬಸ್ತ್

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಎಲೆಚಾಕನಹಳ್ಳಿಯ ಮಾರಮ್ಮ ದೇವಸ್ಥಾನ ಪ್ರವೇಶದ ವಿಚಾರದಲ್ಲಿ ಲಿಂಗಾಯತರು, ಒಕ್ಕಲಿಗರು, ಮಡಿವಾಳರು ಮತ್ತಿತರ ಜಾತಿಗಳವರು ಹಾಗೂ ದಲಿತ ಸಮುದಾಯಗಳ ನಡುವೆ ಸಂಘರ್ಷ ನಡೆದಿದ್ದು, ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ದೇವಾಲಯಕ್ಕೆ ಸರ್ಕಾರಿ ಅಧಿಕಾರಿಗಳು ಮತ್ತು ಗ್ರಾಮಸ್ಥರು ಪ್ರತ್ಯೇಕ ಬೀಗಗಳನ್ನು ಹಾಕಿದ್ದಾರೆ. ಗ್ರಾಮದಲ್ಲಿ ವಾತಾವರಣ ಬೂದಿ ಮುಚ್ಚಿದ ಕೆಂಡದಂತಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಎಲೆಚಾಕನಹಳ್ಳಿಗೆ ಪೊಲೀಸ್ ಬಿಗಿ ಬಂದೋಬಸ್ತ್ ಒದಗಿಸಿದ್ದು, ಇದೇ 9ರಂದು ಶಾಸಕರು ಮತ್ತು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಶಾಂತಿ ಸಭೆ ನಡೆಸಿ, ಸಮಸ್ಯೆ ಪರಿಹರಿಸಲಾಗುವುದು ಮಲ್ಲಿಕಾರ್ಜುನ ಬಾಲದಂಡಿ
ಎಸ್ಪಿ, ಮಂಡ್ಯ

ದೇವಾಲಯದಲ್ಲಿ ದಲಿತರು ಪೂಜೆ ಸಲ್ಲಿಸಿದರೆಂಬ ಕಾರಣಕ್ಕೆ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದರಿಂದ ತಹಶೀಲ್ದಾರ್ ಶಿವಕುಮಾರ್ ಬಿರಾದರ್ ನೇತೃತ್ವದಲ್ಲಿ ಗ್ರಾಮದಲ್ಲಿ ಶಾಂತಿ ಸಭೆಯನ್ನೂ ನಡೆಸಲಾಗಿತ್ತು. 'ದಲಿತರಿಗೆ ದೇವಸ್ಥಾನ ಪ್ರವೇಶಿಸಲು ಬಿಡುವುದಿಲ್ಲ' ಎಂದು ಸಭೆಯನ್ನು ಬಹಿಷ್ಕರಿಸಿ ಎದ್ದು ಹೋಗಿದ್ದರು.

'ದೇವಾಲಯಕ್ಕೆ ನಮಗೂ ಪ್ರವೇಶ ನೀಡಿ' ಎಂದು ದಲಿತರು ಒತ್ತಾಯಿಸಿದ್ದು, 'ಪ್ರವೇಶ ನೀಡುವುದಿಲ್ಲ' ಎಂದು ಇತರ ಕೆಲ ಜಾತಿಗಳವರು ಪಟ್ಟು ಹಿಡಿದಿದ್ದಾರೆ. 'ಅಧಿಕಾರಿಗಳ ಎದುರಿಗೇ ನಮ್ಮನ್ನು ಅವಾಚ್ಯ ಪದ ಬಳಸಿ ನಿಂದಿಸಿದ್ದಾರೆ' ಎಂದು ದಲಿತ ಮುಖಂಡರು ಆರೋಪಿಸಿದ್ದಾರೆ.


ಕಾರಿನ ಗಾಜು ಒಡೆದಿರುವ ದೃಶ್ಯ

'ಜೂನ್ 3ರಂದು ಮಧ್ಯರಾತ್ರಿ 12.30ರ ವೇಳೆ ಗ್ರಾಮದ ದಲಿತ ಸಮುದಾಯದ ವಿಜಯಕುಮಾರ್ ಎಂಬುವರ ಕಾರಿನ ಗಾಜನ್ನು ಒಡೆದಿದ್ದು, ಜಾತಿ ನಿಂದನೆ ಮಾಡಿದ್ದಾರೆ' ಎಂದು ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದ್ದು, ಶಿವಲಿಂಗ ಬಿನ್ ಕರಿಗೌಡ ಅಲಿಯಾಸ್ ಪಾಪು, ದಿನೇಶ್ ಬಿನ್ ಮಾದೇಗೌಡ, ಜನಾರ್ದನ ಬಿನ್ ತಿಮ್ಮೆಗೌಡ, ಚೇತನ್ ಕುಮಾರ್ ಬಿನ್ ಪುಟ್ಟಸ್ವಾಮಿ, ರೂಪೇಶ ಬಿನ್ ಚಿಕ್ಕಣ್ಣ ಹಾಗೂ ಮನು ಬಿನ್ ಮಾದೇಗೌಡ ಸೇರಿದಂತೆ ಇತರರ ಮೇಲೆ ಎಫ್‌ಐಆರ್ ದಾಖಲಾಗಿದೆ.

ನೇಕಾರರ ಒಕ್ಕೂಟದಿಂದ ಗಣತಿ

ಬೆಂಗಳೂರು: 'ಜಾತಿ ಸಮೀಕ್ಷೆಯಲ್ಲಿ ನೇಕಾರರ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ನಿಖರ ಮಾಹಿತಿಗಾಗಿ ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದಿಂದಲೇ ಸಮೀಕ್ಷೆ ನಡೆಸಲಾಗುತ್ತಿದೆ' ಎಂದು ಒಕ್ಕೂಟದ ಅಧ್ಯಕ್ಷ ಬಿ.ಎಸ್. ಸೋಮಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾವು ಜಾತಿಗಣತಿ ಸ್ವಾಗತಿಸುತ್ತೇವೆ. ಆದರೆ, ಗಣತಿ ಸಮರ್ಪಕವಾಗಿ ನಡೆದಿಲ್ಲ. ನಮ್ಮ ಪ್ರಕಾರ ಸಮುದಾಯದ ಜನಸಂಖ್ಯೆ 40 ಲಕ್ಷದಿಂದ 45 ಲಕ್ಷ ಇದೆ. ಆದರೆ, ಆಯೋಗದ ವರದಿಯಲ್ಲಿ ಕೇವಲ 9.30 ಲಕ್ಷ ಇದೆ' ಎಂದರು.

'ನೇಕಾರರ ಸಮುದಾಯದ ಗಣ್ಯರು ಸೇರಿ ಐದಾರು ಸಭೆಗಳನ್ನು ನಡೆಸಲಾಗಿದೆ. ಮರುಸಮೀಕ್ಷೆಗೆ ರಾಜ್ಯ ಸರ್ಕಾರವನ್ನು ಒತ್ತಾಯಿಸಲಾಗಿದೆ' ಎಂದು ಹೇಳಿದರು.

ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟ ಎಂಬ ಆ್ಯಪ್ ತಯಾರಿಸಲಾಗಿದೆ. ಅದರಲ್ಲಿ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಮಾಹಿತಿ ಭರ್ತಿ ಮಾಡಬಹುದು. ಅಲ್ಲದೇ 224 ವಿಧಾನಸಭಾ ಕ್ಷೇತ್ರಗಳಲ್ಲೂ ಒಕ್ಕೂಟದಿಂದ ನೇಮಕಗೊಂಡವರು ನೇಕಾರರ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಆಗಸ್ಟ್ ಒಳಗೆ ಸಮೀಕ್ಷೆ ಮುಗಿಯಲಿದೆ' ಎಂದರು.

ಶಾಸಕ ವಿನಯ ಜಾಮೀನು ರದ್ದು

ಒಂದನೇ ಪುಟದಿಂದ...

ನ್ಯಾಯಮೂರ್ತಿಗಳಾದ ಸಂಜಯ ಕರೋಲ್ ಹಾಗೂ ಸತೀಶಚಂದ್ರ ಶರ್ಮಾ ಅವರು ಇದ್ದ ಪೀಠ, ಒಂದು ವಾರದ ಒಳಗಾಗಿ ಸಂಬಂಧಪಟ್ಟ ವಿಚಾರಣಾ ನ್ಯಾಯಾಲಯದ ಮುಂದೆ ಶರಣಾಗುವಂತೆ ವಿನಯ ಕುಲಕರ್ಣಿ ಅವರಿಗೆ ನಿರ್ದೇಶನ ನೀಡಿದೆ.

ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್, ಆರೋಪಿಗೆ ಜಾಮೀನು ಮಂಜೂರು ಮಾಡಿದ್ದರೂ ಕೂಡ ವಿಚಾರಣಾ ನ್ಯಾಯಾಲಯವು ಜಾಮೀನನ್ನು ರದ್ದುಪಡಿಸಬಹುದು ಎಂದೂ ಪೀಠ ಹೇಳಿದೆ.

2016ರ ಮೇ ತಿಂಗಳಲ್ಲಿ ಯೋಗೇಶ್ ಗೌಡ ಗೌಡರ ಅವರ ಕೊಲೆ ನಡೆದಿತ್ತು. ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಯತ್ನಿಸಿದ ಆರೋಪದ ಅಡಿಯಲ್ಲಿ ಚಂದ್ರಶೇಖರ ಇಂಡಿ ಅಲಿಯಾಸ್ ಚಂದು ಮಾಮಾ ಅವರಿಗೆ ನೀಡಿದ್ದ ಜಾಮೀನನ್ನು ವಿಚಾರಣಾ ನ್ಯಾಯಾಲಯ ರದ್ದುಗೊಳಿಸಿತ್ತು. ಆದರೆ ವಿನಯ ಕುಲಕರ್ಣಿ ಅವರಿಗೆ ನೀಡಿದ್ದ ಜಾಮೀನನ್ನು ರದ್ದುಗೊಳಿಸಲು ನಿರಾಕರಿಸಿತ್ತು. ವಿನಯ 2021ರ ಆಗಸ್ಟ್ 11ರಿಂದ ಜಾಮೀನಿನ ಮೇಲೆ ಹೊರಗಿದ್ದಾರೆ.

'ಆರೋಪಿಯು ಸಾಕ್ಷಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದ್ದಾರೆ ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಯತ್ನಿಸಿದ್ದಾರೆ ಎನ್ನುವ ಆರೋಪಗಳನ್ನು ಪುಷ್ಟೀಕರಿಸುವ ಬಲವಾದ ಸಾಕ್ಷ್ಯಗಳಿವೆ' ಎಂದು ಸುಪ್ರೀಂ ಕೋರ್ಟ್ ಜಾಮೀನು ರದ್ದುಗೊಳಿಸಿರುವ ಆದೇಶದಲ್ಲಿ ಹೇಳಿದೆ.

ತಾನು ಹೊರಡಿಸಿರುವ ಆದೇಶದಲ್ಲಿನ ಅಂಶಗಳಿಂದ ಯಾವುದೇ ರೀತಿಯಲ್ಲೂ ಪ್ರಭಾವಿತವಾಗದೆ ಪ್ರಕರಣದ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆಯೂ ಸುಪ್ರೀಂ ಕೋರ್ಟ್ ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಧರ್ಮ ಒಂದೇ ಆದಮಾತ್ರಕ್ಕೆ ಮನುಷ್ಯರ ಮನೋಧರ್ಮ ಒಂದೇ ಆಗಲು ಸಾಧ್ಯವೇ?

–ಕೆ.ಎಸ್. ನಿಸಾರ್ ಅಹಮದ್

ಕೌಟುಂಬಿಕ ದೌರ್ಜನ್ಯಕ್ಕೆ ಲಗಾಮು ಕೋರ್ಟ್‌ನ ಕಾಳಜಿ ಶ್ಲಾಘನೀಯ

ಕೌಟುಂಬಿಕ ಹಿಂಸಾಚಾರವನ್ನು ಹತ್ತಿಕ್ಕಲು ಇನ್ನೊಂದು ಹೆಜ್ಜೆ ಮುಂದಕ್ಕೆ ಇರಿಸಿರುವ ಸುಪ್ರೀಂ ಕೋರ್ಟ್, ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳನ್ನು ಗುರುತಿಸಿ, ಅವರನ್ನು 'ರಕ್ಷಣಾ ಅಧಿಕಾರಿ'ಗಳು ಎಂದು ಘೋಷಿಸಬೇಕು ಎನ್ನುವ ಸೂಚನೆ ನೀಡಿದೆ. ಕೌಟುಂಬಿಕ ಹಿಂಸಾಚಾರ ಪ್ರಕರಣಗಳ ಸಂತ್ರಸ್ತರಿಗೆ ರಕ್ಷಣೆ ಒದಗಿಸುವ ಹೊಣೆಯು ಈ ಅಧಿಕಾರಿಗಳ ಮೇಲೆ ಇರುತ್ತದೆ. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ, ಕಾಯ್ದೆಯು ಮಹಿಳೆಯರಿಗೆ ನೀಡಿರುವ ಹಕ್ಕುಗಳ ಬಗ್ಗೆ ಮಾಹಿತಿ ನೀಡುವ, ಕಾಯ್ದೆಗೆ ಅನುಗುಣವಾಗಿ ವಿವಿಧ ಸೇವೆಗಳ ನಡುವೆ ಸಮನ್ವಯ ಖಾತರಿಪಡಿಸುವ ಕೆಲಸವು ಈ ಅಧಿಕಾರಿಗಳದ್ದಾಗಿರುತ್ತದೆ. ಈ ಕೆಲಸಗಳೆಲ್ಲ ಆರು ವಾರಗಳಲ್ಲಿ ಪೂರ್ಣಗೊಳ್ಳಬೇಕು ಎಂದು ಕೋರ್ಟ್ ಹೇಳಿರುವುದು ಈ ವಿಚಾರದಲ್ಲಿ ಅದು ಬಹಳ ಗಂಭೀರವಾಗಿದೆ ಎಂಬುದನ್ನು ತೋರಿಸುತ್ತಿದೆ. ಈ ಕಾಯ್ದೆಯ ಅಡಿಯಲ್ಲಿ ಉಚಿತವಾಗಿ ಕಾನೂನಿನ ನೆರವು ಪಡೆಯುವ ಹಕ್ಕು ಮಹಿಳೆಯರಿಗೆ ಇರುತ್ತದೆ ಎಂಬ ಜಾಗೃತಿ ಮೂಡಿಸುವ ಕೆಲಸ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳಿಂದ ಆಗಬೇಕಿದೆ, ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದಿಂದ ರಾಜ್ಯಗಳಿಗೆ ಈ ಕುರಿತ ಸೂಚನೆ ರವಾನೆ ಆಗಬೇಕಿದೆ ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮಾ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.




ದೇಶದ ಎಲ್ಲ ಕಡೆಗಳಲ್ಲಿಯೂ ಕೌಟುಂಬಿಕ ದೌರ್ಜನ್ಯವು ಮಹಿಳೆಯರಿಗೆ ಬಹಳ ಗಂಭೀರವಾದ ಬೆದರಿಕೆಯಾಗಿ ಪರಿಣಮಿಸಿದೆ

'ವಿ ದಿ ವಿಮೆನ್ ಆಫ್ ಇಂಡಿಯಾ' ಎನ್ನುವ ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಪೀಠವು ಈ ನಿರ್ದೇಶನ ನೀಡಿದೆ. ಕಾಯ್ದೆಯನ್ನು ರೂಪಿಸಿ 15 ವರ್ಷಗಳು ಕಳೆದಿದ್ದರೂ ಅದರ ಅನುಷ್ಠಾನದಲ್ಲಿ ಸಮಸ್ಯೆಗಳು ಇವೆ ಎಂದು ಈ ಸಂಸ್ಥೆ ಅರ್ಜಿ ಸಲ್ಲಿಸಿತ್ತು. ಮಹಿಳೆಯರನ್ನು ಗುರಿಯಾಗಿಸಿಕೊಂಡು ನಡೆಯುವ ಅಪರಾಧ ಪ್ರಕರಣಗಳಲ್ಲಿ ಕೌಟುಂಬಿಕ ದೌರ್ಜನ್ಯವು ಬಹಳ ವ್ಯಾಪಕವಾಗಿದೆ ಎಂದು ದೂರಲಾಗಿತ್ತು. ಇಂತಹ ದೌರ್ಜನ್ಯಕ್ಕೆ ಗುರಿಯಾಗುವವರಿಗೆ ಕಾನೂನಿನ ನೆರವು ಸಿಗುವಂತೆ ಆಗಬೇಕು, ಅಗತ್ಯ ಇರುವವರಿಗೆ ಆಶ್ರಯ ಕೇಂದ್ರಗಳು ಸಿಗಬೇಕು ಎಂದು ಕೋರಲಾಗಿತ್ತು. ದೇಶದ ಎಲ್ಲ ಕಡೆಗಳಲ್ಲಿಯೂ ಕೌಟುಂಬಿಕ ದೌರ್ಜನ್ಯವು ಮಹಿಳೆಯರಿಗೆ ಬಹಳ ಗಂಭೀರವಾದ ಬೆದರಿಕೆಯಾಗಿ ಉಳಿದಿದೆ. ಅಧ್ಯಯನವೊಂದರ ಪ್ರಕಾರ, 15ರಿಂದ 49 ವರ್ಷ ವಯಸ್ಸಿನ ನಡುವೆ ಇರುವ ಮಹಿಳೆಯರ ಪೈಕಿ ಶೇ 31ರಷ್ಟು ಮಂದಿ, ದೈಹಿಕ, ಭಾವನಾತ್ಮಕ ಮತ್ತು ಲೈಂಗಿಕ ಹಲ್ಲೆ ಒಳಗೊಂಡಂತೆ ಒಂದಲ್ಲ ಒಂದು ಬಗೆಯಲ್ಲಿ ಕೌಟುಂಬಿಕ ದೌರ್ಜನ್ಯ ಅನುಭವಿಸಿರುವುದಾಗಿ ಹೇಳಿದ್ದಾರೆ. ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಪ್ರತಿವರ್ಷ ಸಾವಿರಾರು ದೂರುಗಳು ಬರುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ನೂರಾರು ಸಂಖ್ಯೆಯ ಪ್ರಕರಣಗಳನ್ನು ಮತ್ತು ವರದಿ ಮಾಡುತ್ತದೆ. ಆದರೆ, ದೂರುಗಳು ಹಾಗೂ ಪ್ರಕರಣಗಳ ಸಂಖ್ಯೆಯು ವಾಸ್ತವ ಸ್ಥಿತಿಯನ್ನು ಬಿಂಬಿಸುವುದಿಲ್ಲ. ಅವು ಇಡೀ ಸಮಸ್ಯೆಯ ಒಂದು ಸಣ್ಣ ಭಾಗವನ್ನಷ್ಟೇ ತೋರಿಸುತ್ತವೆ ಎಂಬುದು ತಿಳಿದಿರಬೇಕು.

ಕೌಟುಂಬಿಕ ದೌರ್ಜನ್ಯಕ್ಕೆ ಮೂಲ ಕಾರಣಗಳು ಹಲವು. ಸಾಮಾಜಿಕ, ಆರ್ಥಿಕ ಹಾಗೂ ಇತರ ಹಲವು ಅಂಶಗಳು ಈ ಬಗೆಯ ದೌರ್ಜನ್ಯಕ್ಕೆ ಕಾರಣವಾಗುತ್ತವೆ. ಈ ಅಂಶಗಳು ಇಂತಹ ದೌರ್ಜನ್ಯಗಳಿಗೆ ಪ್ರತಿಕ್ರಿಯೆ ಏನಿರುತ್ತದೆ ಎಂಬುದರ ಮೇಲೆಯೂ ಪ್ರಭಾವ ಬೀರುತ್ತವೆ. ಮಹಿಳೆಯರು ಕಾನೂನಿನ ನೆರವು ಪಡೆದುಕೊಳ್ಳಲು, ಕುಟುಂಬಗಳು ಹಾಗೂ ಸಮಾಜವು ಇಂತಹ ದೌರ್ಜನ್ಯಕ್ಕೆ ಪ್ರತಿಕ್ರಿಯಿಸುವುದರಲ್ಲಿ ಈ ಅಂಶಗಳ ಪ್ರಭಾವ ಇರುತ್ತದೆ. ದೌರ್ಜನ್ಯಕ್ಕೆ ಪ್ರತಿರೋಧ ಒಡ್ಡಲು, ಕಾನೂನು ಹಾಗೂ ಇತರ ಮಾರ್ಗಗಳ ಮೂಲಕ ಅದನ್ನು ಎದುರಿಸಲು ಕೆಲವೇ ಕೆಲವು ಮಹಿಳೆಯರಿಗೆ ಮಾತ್ರ ಸಾಧ್ಯವಾಗುತ್ತದೆ. ಕೌಟುಂಬಿಕ ದೌರ್ಜನ್ಯ ಪ್ರಕರಣಗಳನ್ನು ನಡೆಯಿಸುವುದರಲ್ಲಿ, ಅವುಗಳ ವರದಿಯಾಗುವ ವಿಚಾರದಲ್ಲಿ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸ ಇದೆ. ಆದರೆ, ತುಲನಾತ್ಮಕ ಅಂಕಿ-ಅಂಶಗಳು ಸಂಪೂರ್ಣವಾಗಿ ವಿಶ್ವಾಸಾರ್ಹ ಆಗಿಲ್ಲದಿರಬಹುದು. ಕೆಲವು ವರದಿಗಳ ಪ್ರಕಾರ ಇಂತಹ ದೌರ್ಜನ್ಯಗಳು ಕರ್ನಾಟಕದಲ್ಲಿ ಬಹಳ ಹೆಚ್ಚಿವೆ. ಕಾನೂನಿನ ಕಟ್ಟುನಿಟ್ಟಿನ ಅನುಷ್ಠಾನ ಮಾತ್ರವೇ ಇಂತಹ ದೌರ್ಜನ್ಯವನ್ನು ಕಡಿಮೆ ಮಾಡಲು ಇರುವ ಮಾರ್ಗೋಪಾಯ. ಇಂತಹ ಪ್ರಕರಣಗಳನ್ನು ಸುಪ್ರೀಂ ಕೋರ್ಟ್ ಹಾಗೂ ಇತರ ನ್ಯಾಯಾಲಯಗಳು ಈ ಹಿಂದೆಯೂ ಬಹಳ ಗಂಭೀರವಾಗಿ ಪರಿಗಣಿಸಿವೆ. ಈಗ ಸುಪ್ರೀಂ ಕೋರ್ಟ್ ನೀಡಿರುವ ಸೂಚನೆಗಳು, ನ್ಯಾಯಾಂಗವು ಈ ಬಗೆಯ ದೌರ್ಜನ್ಯಗಳ ವಿಚಾರದಲ್ಲಿ ಬಹಳ ಗಂಭೀರವಾಗಿದೆ ಎಂಬುದನ್ನು ತೋರಿಸುತ್ತಿದೆ.

ಮ್ಯಾಚ್ ಫಿಕ್ಸಿಂಗ್ ಚುನಾವಣೆಯು ಯಾವುದೇ ಪ್ರಜಾಪ್ರಭುತ್ವಕ್ಕೆ ಉಣಿಸುವ ವಿಷ

ಚುನಾವಣಾ ಫಲಿತಾಂಶ ಕದಿಯುವುದು ಹೇಗೆ?



ವಿಶ್ಲೇಷಣೆ

ರಾಹುಲ್ ಗಾಂಧಿ



ಮಹಾರಾಷ್ಟ್ರ ವಿಧಾನಸಭೆಗೆ 2024ರ ನವೆಂಬರ್‌ನಲ್ಲಿ ಚುನಾವಣೆ ನಡೆಸಿದ ರೀತಿಯ ಕುರಿತು ಸಂಸತ್ತಿನಲ್ಲಿ ಫೆಬ್ರುವರಿ 3ರಂದು ಮಾಡಿದ ಭಾಷಣ ಮತ್ತು ನಂತರ ನಡೆಸಿದ ಮಾಧ್ಯಮಗೋಷ್ಠಿಯಲ್ಲಿ ನಾನು ಕಳವಳ ವ್ಯಕ್ತಪಡಿಸಿದ್ದೇನೆ. ಎಲ್ಲ ಬಾರಿಯೂ ಎಲ್ಲ ಕಡೆಗಳಲ್ಲಿಯೂ ಅಲ್ಲದಿದ್ದರೂ ಸಾಮಾನ್ಯವಾಗಿ ಭಾರತದ ಚುನಾವಣೆಗಳ ನ್ಯಾಯಸಮ್ಮತತೆಯ ಕುರಿತು ನನಗೆ ಅನುಮಾನಗಳಿವೆ. ಸಣ್ಣ ಪ್ರಮಾಣದ ಮೋಸದ ಬಗ್ಗೆ ನಾನು ಮಾತನಾಡುತ್ತಿಲ್ಲ, ಬದಲಿಗೆ ರಾಷ್ಟ್ರ ಮಟ್ಟದ ಸಂಸ್ಥೆಗಳನ್ನು ಬಳಸಿಕೊಂಡು ಭಾರಿ ಪ್ರಮಾಣದಲ್ಲಿ ಮಾಡುವ ವಂಚನೆ ಇದು.

ಈ ಹಿಂದಿನ ಕೆಲವು ಚುನಾವಣೆಗಳ ಫಲಿತಾಂಶ ಸರಿಯಾಗಿಲ್ಲ ಎಂದು ಅನಿಸಿತ್ತು. ಆದರೆ, 2024ರ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಫಲಿತಾಂಶ ಕಣ್ಣು ಕುಕ್ಕುವ ರೀತಿಯಲ್ಲಿ ವಿಚಿತ್ರವಾಗಿತ್ತು. ವಂಚನೆಯು ಎಷ್ಟು ವ್ಯಾಪಕವಾಗಿತ್ತು ಎಂದರೆ ಮುಚ್ಚಿಡುವ ಎಲ್ಲ ಪ್ರಯತ್ನಗಳ ಬಳಿಕವೂ ಕಣ್ಣಿಗೆ ರಾಚುವ ಸಾಕ್ಷ್ಯಗಳು ಅಧಿಕೃತ ಅಂಕಿಅಂಶಗಳಿಂದಲೇ ಮೂಡಿಬಂದವು. ಅನಧಿಕೃತ ಮೂಲಗಳನ್ನು ಅವಲಂಬಿಸುವ ಅಗತ್ಯವೇ ಇರಲಿಲ್ಲ. ಹಂತ ಹಂತವಾಗಿ ನಡೆಸಿದ ವಂಚನೆಯು ಬಯಲಾಗಿದೆ.

ಹಂತ 1: ಅಂಪೈರ್ ನೇಮಕದ ಸಮಿತಿಯಲ್ಲಿಯೇ ವಂಚನೆ

ಚುನಾವಣಾ ಆಯುಕ್ತರನ್ನು ಪ್ರಧಾನಿ ಮತ್ತು ಗೃಹ ಸಚಿವರೇ 2:1 ಬಹುಮತದಲ್ಲಿ ನೇಮಕ ಮಾಡುವುದನ್ನು 2023ರ ಚುನಾವಣಾ ಆಯುಕ್ತರ ನೇಮಕ ಕಾಯ್ದೆಯು ಖಾತರಿಪಡಿಸಿದೆ. ಏಕೆಂದರೆ ಆಯ್ಕೆ ಸಮಿತಿಯ ಮೂರನೇ ಸದಸ್ಯರಾದ ವಿರೋಧ ಪಕ್ಷದ ನಾಯಕ ಸದಾ ಏಕಾಂಗಿಯಾಗಿಬಿಡುತ್ತಾರೆ. ಅಂಪೈರ್‌ಗಳಾಗಿ ಯಾರನ್ನು ನೇಮಕ ಮಾಡಬೇಕು ಎಂಬುದನ್ನು ಇವರಿಬ್ಬರೇ ನಿರ್ಧರಿಸಿಬಿಡುತ್ತಾರೆ. ಆಯ್ಕೆ ಸಮಿತಿಯಲ್ಲಿ ಮುಖ್ಯ ನ್ಯಾಯಮೂರ್ತಿಯ ಬದಲಿಗೆ ಸಂಪುಟ ಸಚಿವರನ್ನು ಸೇರಿಸಿದ ನಿರ್ಧಾರವು ನೈತಿಕವಾಗಿ ಸರಿ ಅನಿಸಲು ಸಾಧ್ಯವೇ ಇಲ್ಲ. ಮಹತ್ವದ ಸಂಸ್ಥೆಯೊಂದರ ಮುಖ್ಯಸ್ಥರ ಆಯ್ಕೆ ಸಮಿತಿಯಲ್ಲಿ ಇದ್ದ ತಟಸ್ಥ ವ್ಯಕ್ತಿಯನ್ನು ನಿಯಮ ಮೀರಿ ಕಿತ್ತು ಹಾಕಿರುವುದು ಏಕೆ? ಈ ಪ್ರಶ್ನೆಯನ್ನು ನೀವೇ ಕೇಳಿಕೊಳ್ಳಿ. ಪ್ರಶ್ನೆ ಕೇಳಿಕೊಂಡರೆ ಉತ್ತರ ಸಿಕ್ಕೇ ಸಿಗುತ್ತದೆ.


ಹಂತ 2: ಮತದಾರರ ಪಟ್ಟಿಗೆ ನಕಲಿ ಮತದಾರರ ಹೆಸರು ಸೇರ್ಪಡೆ

ಚುನಾವಣಾ ಆಯೋಗದ ಮಾಹಿತಿ ಪ್ರಕಾರ 2019ರಲ್ಲಿ ನಡೆದ ವಿಧಾನಸಭಾ ಚುನಾವಣೆಯ ಹೊತ್ತಿಗೆ ಮಹಾರಾಷ್ಟ್ರದ ಮತದಾರರ ಸಂಖ್ಯೆ 8.98 ಕೋಟಿ. ಐದು ವರ್ಷಗಳಲ್ಲಿ ಅಂದರೆ, 2024ರ ಲೋಕಸಭಾ ಚುನಾವಣೆಯ ಹೊತ್ತಿಗೆ ಈ ಸಂಖ್ಯೆ 9.29 ಕೋಟಿಗೆ ಏರಿಕೆಯಾಗಿತ್ತು. ಆದರೆ, ಐದು ತಿಂಗಳ ಬಳಿಕ 2024ರ ನವೆಂಬರ್‌ನಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಹೊತ್ತಿಗೆ ಮತದಾರರ ಸಂಖ್ಯೆ 9.70 ಕೋಟಿಗೆ ಜಿಗಿದಿತ್ತು. ಐದು ವರ್ಷಗಳಲ್ಲಿ ಮತದಾರರ ಸಂಖ್ಯೆಯಲ್ಲಿ ಆಗಿರುವ ಏರಿಕೆ 31 ಲಕ್ಷ ಮಾತ್ರ. ಆದರೆ, ಐದೇ ತಿಂಗಳಲ್ಲಿ 41 ಲಕ್ಷ ಮತದಾರರು ಸೇರ್ಪಡೆಯಾಗಿದ್ದಾರೆ. ಇದು ನಂಬಲು ಅಸಾಧ್ಯವಾದ ಜಿಗಿತ. ಏಕೆಂದರೆ, ಸರ್ಕಾರದ ಅಂದಾಜು ಪ್ರಕಾರವೇ ಮಹಾರಾಷ್ಟ್ರದಲ್ಲಿರುವ ವಯಸ್ಕರ ಸಂಖ್ಯೆಯು 9.54 ಕೋಟಿ. ಆದರೆ, ಒಟ್ಟು ಮತದಾರರ ಸಂಖ್ಯೆ 9.70 ಕೋಟಿ.

ಹಂತ 3: ಮತದಾರರ ಸಂಖ್ಯೆಯ ಜೊತೆಗೆ ಮತದಾನದ ಪ್ರಮಾಣವೂ ಏರಿಕೆ

ವೀಕ್ಷಕರು ಮತ್ತು ಹೆಚ್ಚಿನ ಭಾಗೀದಾರರಿಗೆ ಮಹಾರಾಷ್ಟ್ರದ ಮತದಾನದ ದಿನವು ಸಂಪೂರ್ಣವಾಗಿ ಸಹಜವಾಗಿತ್ತು. ಎಲ್ಲೆಡೆಯಂತೆಯೇ ಮತದಾರರು ಸರತಿ ಸಾಲಿನಲ್ಲಿ ನಿಂತರು, ಮತದಾನ ಮಾಡಿದರು ಮತ್ತು ಮನೆಗೆ ಹೋದರು. ಸಂಜೆ 5 ಗಂಟೆಗೆ ಮೊದಲು ಮತಗಟ್ಟೆ ತಲುಪಿದ ಎಲ್ಲರಿಗೂ ಮತದಾನಕ್ಕೆ ಅವಕಾಶ ಕೊಡಲಾಗಿದೆ. ಯಾವುದೇ ಮತಗಟ್ಟೆಯಲ್ಲಿಯೂ ಅಸಹಜವಾದ, ಬಹು ಉದ್ದದ ಸರತಿ ಸಾಲು ಇತ್ತು ಎಂಬುದು ಎಲ್ಲಿಯೂ ವರದಿಯಾಗಿಲ್ಲ.

ಆದರೆ, ಚುನಾವಣಾ ಆಯೋಗದ ಪ್ರಕಾರ, ಮತದಾನದ ದಿನ ನಾಟಕೀಯ ಬೆಳವಣಿಗೆಗಳು ನಡೆದಿವೆ. ಸಂಜೆ 5 ಗಂಟೆಯ ಹೊತ್ತಿಗೆ ಮತದಾನ ಪ್ರಮಾಣವು ಶೇ 58.22ರಷ್ಟು ಆಗಿತ್ತು. ಮತದಾನ ಮುಕ್ತಾಯವಾದ ಬಳಿಕವೂ ಮತದಾನ ಪ್ರಮಾಣ ಏರಿಕೆಯಾಗುತ್ತಲೇ ಹೋಯಿತು. ಮತದಾನದ ಅಂತಿಮ ಪ್ರಮಾಣವನ್ನು ಮರುದಿನ ಬೆಳಿಗ್ಗೆ ಪ್ರಕಟಿಸಲಾಯಿತು. ಆ ಪ್ರಮಾಣವು ಶೇ 66.05ರಷ್ಟು ಇತ್ತು. ಈ ಅಭೂತಪೂರ್ವ ಏರಿಕೆಯು ಶೇ 7.83ರಷ್ಟಿದೆ. ಅಥವಾ 76 ಲಕ್ಷ ಜನರು ಹೆಚ್ಚುವರಿಯಾಗಿ ಮತದಾನ ಮಾಡಿದ್ದಾರೆ. ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಈ ಹಿಂದೆ ದಾಖಲಾದ ಮತಪ್ರಮಾಣಕ್ಕಿಂತ ಇದು ಬಹಳ ಹೆಚ್ಚು (ಪಟ್ಟಿ ನೋಡಿ).



ಹಂತ 4: ಆಯ್ದ ಮತಗಟ್ಟೆ ಗುರಿಯಾಗಿಸಿ ಮಾಡಿದ ವಂಚನೆಯಿಂದ ಬಿಜೆಪಿಗೆ ಗೆಲುವು

ಅಸಂಗತವಾದ ಇನ್ನಷ್ಟು ವಿಚಾರಗಳೂ ಇವೆ. ಮಹಾರಾಷ್ಟ್ರದಲ್ಲಿ ಸುಮಾರು ಒಂದು ಲಕ್ಷ ಮತಗಟ್ಟೆಗಳು ಇವೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಕಳಪೆ ಪ್ರದರ್ಶನ ತೋರಿದ್ದ 85 ವಿಧಾನಸಭಾ ಕ್ಷೇತ್ರಗಳ 12 ಸಾವಿರ ಮತಗಟ್ಟೆಗಳನ್ನು ಆಯ್ದು ಹೆಚ್ಚುವರಿ ಮತಗಳನ್ನು ಸೇರ್ಪಡೆ ಮಾಡಲಾಗಿದೆ. ಸಂಜೆ 5 ಗಂಟೆಯ ನಂತರ ಮತಗಟ್ಟೆಗಳಲ್ಲಿ ಸರಾಸರಿ 600 ಮತಗಳ ಏರಿಕೆ ಆಗಿದೆ. ಒಬ್ಬ ಮತದಾರನಿಗೆ ಮತದಾನ ಮಾಡಲು ಕನಿಷ್ಠ ಒಂದು ನಿಮಿಷ ಬೇಕು ಎಂದು ಭಾವಿಸಿದರೂ ಮುಂದಿನ 10 ತಾಸು ಮತದಾನ ಮುಂದುವರಿಯಬೇಕಿತ್ತು. ಆದರೆ ಹಾಗೆ ಆಗಿಲ್ಲ. ಹಾಗಾಗಿಯೇ ಈ ಪ್ರಶ್ನೆ ಬರುತ್ತದೆ: 'ಈ ಹೆಚ್ಚುವರಿ ಮತದಾನ ಹೇಗೆ ನಡೆಯಿತು?' ಈ 85 ಕ್ಷೇತ್ರಗಳ ಪೈಕಿ ಹೆಚ್ಚಿನವುಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆದ್ದಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಮತದಾನದಲ್ಲಿ ಆಗಿರುವ ಭಾರಿ ಏರಿಕೆಯನ್ನು 'ಯುವಜನರ ಭಾಗೀದಾರಿಕೆಯು ಸ್ವಾಗತಾರ್ಹ ಪ್ರವೃತ್ತಿ' ಎಂದು ಚುನಾವಣಾ ಆಯೋಗ ಬಣ್ಣಿಸಿದೆ. ಆದರೆ, ಈ ಸ್ವಾಗತಾರ್ಹ ಪ್ರವೃತ್ತಿಯು 12 ಸಾವಿರ ಮತಗಟ್ಟೆಗಳಿಗೆ ಸೀಮಿತವಾಗಿದೆ, ಉಳಿದ ಸುಮಾರು 88 ಸಾವಿರ ಮತಗಟ್ಟೆಗಳಲ್ಲಿ ಈ ಪ್ರವೃತ್ತಿ ಕಂಡುಬಂದಿಲ್ಲ. ಇದು ದುರಂತಮಯ ಅಲ್ಲ ಎಂದಾದರೆ, ಹಾಸ್ಯಾಸ್ಪದವಂತೂ ಹೌದು.

ಅಂತಹ ಒಂದು ಕ್ಷೇತ್ರ ಕಾಮ್‌ಠಿ. ಇಲ್ಲಿ ನಡೆದಿರುವುದು ಅಧ್ಯಯನ ಯೋಗ್ಯವಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ 1.36 ಲಕ್ಷ ಮತಗಳು ಸಿಕ್ಕಿದ್ದವು. ಬಿಜೆಪಿಗೆ ಸಿಕ್ಕಿದ್ದು 1.19 ಲಕ್ಷ ಮತಗಳು. 2024ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸಿಕ್ಕಿದ್ದು 1.34 ಲಕ್ಷ ಮತಗಳು. ಹೆಚ್ಚು ಕಡಿಮೆ ಲೋಕಸಭಾ ಚುನಾವಣೆಯಲ್ಲಿ ಸಿಕ್ಕಷ್ಟೇ ಮತಗಳು. ಆದರೆ ಬಿಜೆಪಿಗೆ ಮಾತ್ರ 1.75 ಲಕ್ಷ ಮತಗಳು ಸಿಕ್ಕಿವೆ. 56 ಸಾವಿರ ಮತಗಳ ಏರಿಕೆಯಾಗಿದೆ. ಎರಡು ಚುನಾವಣೆಗಳ ನಡುವೆ ಸೇರ್ಪಡೆಯಾದ 35 ಸಾವಿರ ಹೊಸ ಮತದಾರರ ಕಾರಣದಿಂದ ಈ ಏರಿಕೆ ಸಾಧ್ಯವಾಗಿದೆ. ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡದ ಎಲ್ಲರನ್ನೂ ಮತ್ತು ಹೊಸದಾಗಿ ಸೇರ್ಪಡೆಯಾದ ಬಹುತೇಕ ಎಲ್ಲ 35 ಸಾವಿರ ಮತದಾರರನ್ನು ಬಿಜೆಪಿಯು ಸೂಜಿಗಲ್ಲಿನಂತೆ ಸೆಳೆದಿದೆ. ಕಮಲದ ಆಕಾರದಲ್ಲಿರುವ ಸೂಜಿಗಲ್ಲನ್ನು ಕಲ್ಪಿಸಿಕೊಳ್ಳುವುದು ಕಷ್ಟವೇನಲ್ಲ.

ಮೇಲೆ ನಾಲ್ಕು ಹಂತಗಳಲ್ಲಿ ವಿವರಿಸಿದ ಅಂಶಗಳ ಪರಿಣಾಮವಾಗಿ, 2024ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪರ್ಧಿಸಿದ್ದ 149 ಕ್ಷೇತ್ರಗಳ ಪೈಕಿ 132ರಲ್ಲಿ ಗೆದ್ದಿದೆ. ಗೆಲುವಿನ ಪ್ರಮಾಣವು ಶೇ 89ರಷ್ಟಿದೆ. ಆ ಪಕ್ಷವು ಎಂದೂ ಎಲ್ಲಿಯೂ ಪಡೆಯದ ಗೆಲುವಿನ ಪ್ರಮಾಣ ಇದಾಗಿದೆ. ಐದು ತಿಂಗಳ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಈ ಕ್ಷೇತ್ರಗಳಲ್ಲಿ ಸಿಕ್ಕಿದ್ದ ಗೆಲುವಿನ ಪ್ರಮಾಣವು ಶೇ 32ರಷ್ಟು.

ಹಂತ 5: ಸಾಕ್ಷ್ಯಗಳ ಅಡಗಿಸುವಿಕೆ

ವಿರೋಧ ಪಕ್ಷಗಳು ಕೇಳಿದ ಎಲ್ಲ ಪ್ರಶ್ನೆಗಳಿಗೂ ಚುನಾವಣಾ ಆಯೋಗದ ಉತ್ತರ ಮೌನ ಮತ್ತು ಕೆಲವೊಮ್ಮೆ ಆಕ್ರಮಣಕಾರಿ ನಡವಳಿಕೆಯೇ ಆಗಿತ್ತು. 2024ರ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಯ ಮತದಾರರ ಪಟ್ಟಿಯನ್ನು ಫೋಟೊಸಹಿತ ಒದಗಿಸಿ ಎಂಬ ಕೋರಿಕೆಯನ್ನು ಆಯೋಗವು ಸಾರಾಸಗಟಾಗಿ ತಿರಸ್ಕರಿಸಿದೆ. ವಿಧಾನಸಭಾ ಚುನಾವಣೆ ನಡೆದು ಒಂದು ತಿಂಗಳ ಬಳಿಕ ನಡೆದುದು ಇನ್ನೂ ಆಘಾತಕಾರಿ. ಮತಗಟ್ಟೆಗಳಲ್ಲಿ ಚಿತ್ರೀಕರಿಸಿದ ವಿಡಿಯೊ ಮತ್ತು ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಒದಗಿಸಿ ಎಂದು ಚುನಾವಣಾ ಆಯೋಗಕ್ಕೆ ಹೈಕೋರ್ಟ್ ನಿರ್ದೇಶನ ನೀಡಿತು. ಆದರೆ, ಕೇಂದ್ರ ಸರ್ಕಾರವು ಚುನಾವಣಾ ಆಯೋಗದ ಜೊತೆಗೆ ಸಮಾಲೋಚನೆ ನಡೆಸಿ, 1961ರ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ನಿಯಮಗಳ ಸೆಕ್ಷನ್ 93(2)(ಎ)ಗೆ ತಿದ್ದುಪಡಿ ಮಾಡಿ ಸಿಸಿಟಿವಿ ಕ್ಯಾಮೆರಾ ದೃಶ್ಯಗಳು ಹಾಗೂ ಎಲೆಕ್ಟ್ರಾನಿಕ್ ದಾಖಲೆಗಳ ಲಭ್ಯತೆ ಮೇಲೆ ನಿರ್ಬಂಧ ವಿಧಿಸಿತು. ತಿದ್ದುಪಡಿಯಾದ ವಿಷಯ ಮತ್ತು ತಿದ್ದುಪಡಿಯ ಸಮಯವೇ ಎಲ್ಲವನ್ನೂ ವಿವರಿಸುತ್ತದೆ. ಇತ್ತೀಚೆಗೆ ಪತ್ತೆಯಾದ ಒಂದೇ ಸಂಖ್ಯೆಯ ಒಂದಕ್ಕಿಂತ ಹೆಚ್ಚು ಮತದಾರರ ಚೀಟಿಗಳು ಕೂಡ ನಕಲಿ ಮತದಾನದ ಕುರಿತ ಕಳವಳವನ್ನು ಹೆಚ್ಚಿಸುತ್ತವೆ. ಈಗ ಪತ್ತೆಯಾಗಿರುವುದು ಒಂದು ಸಣ್ಣ ಭಾಗ ಮಾತ್ರ ಆಗಿರುವ ಸಾಧ್ಯತೆಯೂ ಇದೆ.

ಮತದಾರರ ಪಟ್ಟಿಗಳು ಮತ್ತು ಸಿಸಿಟಿವಿ ಕ್ಯಾಮೆರಾ ದೃಶ್ಯಗಳು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ಇರುವ ಸಾಧನಗಳು. ಪ್ರಜಾಪ್ರಭುತ್ವದ ಉಲ್ಲಂಘನೆಯಾಗುತ್ತಿರುವ ಸಂದರ್ಭದಲ್ಲಿ ಅವುಗಳನ್ನು ತಿಜೋರಿಯಲ್ಲಿಟ್ಟು ಬೀಗ ಹಾಕಲು ಅವು ಆಭರಣಗಳಲ್ಲ. ಯಾವುದೇ ದಾಖಲೆಯನ್ನು ನಾಶಪಡಿಸಲಾಗಿಲ್ಲ ಎಂಬ ಖಾತರಿ ಪಡೆದುಕೊಳ್ಳುವ ಹಕ್ಕು ಭಾರತದ ಜನರಿಗೆ ಇದೆ. ಆಯ್ದ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡುವುದು ಅಥವಾ ಮತಗಟ್ಟೆ ಬದಲಾಯಿಸುವುದು ಮುಂತಾದ ಮೋಸದ ವಿಧಾನಗಳ ಕುರಿತು ಸಾಕ್ಷ್ಯಗಳು ಇವೆ. ಈ ಕುರಿತು ಜನರಲ್ಲಿ ಕಳವಳವೂ ಇದೆ. ದಾಖಲೆಗಳ ಪರಿಶೀಲನೆಯಿಂದ ಇಂತಹವುಗಳನ್ನು ಗುರುತಿಸಬಹುದಾಗಿದೆ. ಚುನಾವಣೆಯಲ್ಲಿ ವಂಚನೆ ನಡೆಸುವ ಈ ವಿಧಾನಗಳನ್ನು ಕೆಲವು ವರ್ಷಗಳಿಂದ ಅನುಸರಿಸಲಾಗುತ್ತಿದೆ ಎಂಬ ಕಳವಳವೂ ಇದೆ. ದಾಖಲೆಗಳ ಪರಿಶೀಲನೆಯಿಂದ ಈ ವಂಚನೆಯ ಕಾರ್ಯವಿಧಾನ ಹೇಗೆ ಮತ್ತು ಶಾಮೀಲಾದವರು ಯಾರು ಎಂಬುದನ್ನು ಪತ್ತೆ ಮಾಡಲು ಸಾಧ್ಯವಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ, ವಿರೋಧ ಪಕ್ಷಗಳು ಮತ್ತು ಸಾರ್ವಜನಿಕರಿಗೆ ಈ ದಾಖಲೆ ಲಭ್ಯ ಆಗುವುದನ್ನು ತಡೆಯಲಾಗಿದೆ. ಮಹಾರಾಷ್ಟ್ರದಲ್ಲಿ 2024ರ ನವೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮೋಸ ಮಾಡಿರುವುದು ಏಕೆ ಎಂಬುದನ್ನು ಊಹಿಸುವುದು ಕಷ್ಟವೇನಲ್ಲ. ಚುನಾವಣೆಯಲ್ಲಿ ವಂಚನೆ ಎಂದರೆ ಮ್ಯಾಚ್ ಫಿಕ್ಸಿಂಗ್ ಇದ್ದ ಹಾಗೆ. ಮ್ಯಾಚ್ ಫಿಕ್ಸ್ ಮಾಡಿದವರು ಆಟ ಗೆಲ್ಲಬಹುದು. ಆದರೆ, ಸಂಸ್ಥೆಗಳು ಮತ್ತು ಫಲಿತಾಂಶದ ಮೇಲೆ ಜನರಿಗೆ ಇರುವ ವಿಶ್ವಾಸಕ್ಕೆ ಆಗುವ ಹಾನಿಯನ್ನು ಎಂದೂ ಸರಿಪಡಿಸಲಾಗದು.

ಮ್ಯಾಚ್ ಫಿಕ್ಸಿಂಗ್ ಚುನಾವಣೆಯು ಯಾವುದೇ ಪ್ರಜಾಪ್ರಭುತ್ವಕ್ಕೆ ಉಣಿಸುವ ವಿಷವಾಗಿದೆ.

ಲೇಖಕ: ಲೋಕಸಭೆಯ ವಿರೋಧ ಪಕ್ಷದ ನಾಯಕ

ದಿನದ ಟ್ವೀಟ್

ಆರೋಗ್ಯಕರ ಮಣ್ಣಿನಿಂದ ರೈತರ ಸಶಕ್ತತೆ

ಕೃಷಿ ಜಮೀನಿನಲ್ಲಿ ಮಣ್ಣಿನ ಫಲವತ್ತತೆಯ ಸಂರಕ್ಷಣೆಗೆ ರೈತರನ್ನು ಸಶಕ್ತಗೊಳಿಸಲು ನಾವು ಏನೆಲ್ಲ ಮಾಡಬಹುದೋ ಅದನ್ನು ವಿಳಂಬವಿಲ್ಲದೆ ಈಗಲೇ ಮಾಡಬೇಕು. ರೈತ ಸಮುದಾಯದ ಸಶಕ್ತತೆಗೆ ಆರೋಗ್ಯಕರ ಮಣ್ಣು ಏಕೈಕ ಮಾರ್ಗವಾಗಿದೆ...



ಜಗ್ಗಿ ವಾಸುದೇವ್

ಕಿಡಿನುಡಿ

ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಈಗ ಬೆಂಗಳೂರು ಪೊಲೀಸ್ ಕಮಿಷನರ್ ಹಾಗೂ ಅಧಿಕಾರಿಗಳನ್ನು ಅಮಾನತು ಮಾಡಿ, ಕೈತೊಳೆದುಕೊಳ್ಳಲು ನೋಡುತ್ತಿದೆ. ಉಪ ಮುಖ್ಯಮಂತ್ರಿ ಕಣ್ಣೀರು ಹಾಕಿದ ಮಾತ್ರಕ್ಕೆ ಪಾಪದ ಕೃತ್ಯವನ್ನು ಮರೆಮಾಚಲು ಆಗುವುದಿಲ್ಲ.



ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

---

25 ವರ್ಷಗಳ ಹಿಂದೆ

ಬುಧವಾರ, 7-6-2000

● **ರಾಜ್ಯಕ್ಕೆ ರೂ. 8 ಸಾವಿರ ಕೋಟಿ ಬಂಡವಾಳ ನಿರೀಕ್ಷೆ**

ಬೆಂಗಳೂರು, ಜೂನ್ 6– ಬಂಡವಾಳ ಆಕರ್ಷಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಮ್ಮಿಕೊಂಡಿದ್ದ 'ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನ'ದಿಂದ ಇಂದಿನವರೆಗೆ ಒಟ್ಟು ಎಂಟು ಸಾವಿರ ಕೋಟಿ ರೂಪಾಯಿಗಳ ಬಂಡವಾಳ ರಾಜ್ಯದ ವಿವಿಧ ವಲಯಕ್ಕೆ ಹರಿದುಬರಲಿದೆ.

ಇದರ ಜೊತೆಯಲ್ಲಿ ಮಾಹಿತಿ ತಂತ್ರಜ್ಞಾನ, ಬೃಹತ್ ಹಾಗೂ ಸಣ್ಣ ಕೈಗಾರಿಕೆ ಮತ್ತು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಆಸಕ್ತರಾದ ಹಲವು ಉದ್ಯಮಿಗಳು ತಮ್ಮ ಪ್ರಸ್ತಾವಗಳನ್ನು ಎರಡು ದಿನಗಳ ಅವಧಿಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಮುಂದೆ ಸಲ್ಲಿಸಿದ್ದಾರೆ.

ಈ ಬಗ್ಗೆ ರಾಜ್ಯ ಸರ್ಕಾರವು ದೇಶ-ವಿದೇಶದ ಸುಮಾರು 15 ಉದ್ಯಮಿಗಳ ಜತೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದೆ.

● **ಬಾರ್ಜ್ ಮೌಂಟೆಡ್ ಸ್ಥಾವರದ ಕಾಮಗಾರಿ ಚುರುಕು**

ಮಂಗಳೂರು, ಜೂನ್ 6– ರಾಜ್ಯದ ವಿದ್ಯುತ್ ಬರ ನೀಗಿಸಲು ದಕ್ಷಿಣ ಕನ್ನಡ ಜಿಲ್ಲೆಯನ್ನು ಮುಖ್ಯವಾಗಿ ಆಯ್ಕೆ ಮಾಡಿಕೊಂಡ ಸರ್ಕಾರ ಹಮ್ಮಿಕೊಂಡ ಯೋಜನೆಗಳಲ್ಲಿ ಮೊದಲ ತೇಲುತೆಪ್ಪ ವಿದ್ಯುತ್ ಸ್ಥಾವರದ (ಬಾರ್ಜ್ ಮೌಂಟೆಡ್ ವಿದ್ಯುತ್ ಸ್ಥಾವರ) ಕಾಮಗಾರಿ ಮುಂಗಾರಿನ ಬಿರು ಮಳೆಯ ನಡುವೆಯೂ ಚುರುಕಾಗಿ ನಡೆಯುತ್ತಿದೆ.

ಮುಂದಿನ ಜನವರಿ ವೇಳೆಗೆ ದೇಶದ ಮೊದಲ 220 ಮೆ.ವಾ ಸಾಮರ್ಥ್ಯದ ತಣ್ಣೀರುಬಾವಿ ಬಾರ್ಜ್ ಮೌಂಟೆಡ್ ವಿದ್ಯುತ್ ಸ್ಥಾವರ ಯೋಜನೆ ತನ್ನ ವಿದ್ಯುತ್ ಉತ್ಪಾದನೆ ಆರಂಭಿಸುವ ಎಲ್ಲ ಸೂಚನೆಗಳಿವೆ.

50 ವರ್ಷಗಳ ಹಿಂದೆ

ಶನಿವಾರ, 7-6-1975

● **ವೈಮಾನಿಕ ವೈದ್ಯ– ಹಾರುವ ಮಾನವನ ಮಿತ್ರ**

ನವದೆಹಲಿ, ಜೂನ್ 6– ಹಲವಾರು ವರ್ಷಗಳ ಹಿಂದೆ ಅಮೆರಿಕದ ವಾಯುದಳದ ವೈಮಾನಿಕನೊಬ್ಬ ಅತಿ ಎತ್ತರದಲ್ಲಿ ಶಬ್ದವೇಗದಲ್ಲಿ ವಿಮಾನ ಹಾರಿಸಿಕೊಂಡು ಹೋಗುತ್ತಿದ್ದ. ಇದ್ದಕ್ಕಿದ್ದಂತೆಯೇ ವಿಮಾನ ಉರುಳಿಕೊಂಡು ಬಂದು ನೆಲಕ್ಕಪ್ಪಳಿಸಿತು. ವಿಮಾನ ನುಚ್ಚುನೂರಾಯಿತು. ವೈಮಾನಿಕ ಸಾವಿಗೀಡಾದ. ವಿಮಾನದ ಉಪಕರಣಗಳು ಸರಿಯಾಗಿದ್ದವು. ವೈಮಾನಿಕ ಅನುಭವಿ. ವಿಮಾನ ಹತ್ತುವುದಕ್ಕೆ ಮುನ್ನ ಅವನಲ್ಲಿ ಲೋಪ ದೋಷಗಳೇನೂ ಕಂಡುಬಂದಿರಲಿಲ್ಲ... ಅಪಘಾತಕ್ಕೆ ಕಾರಣ ಯಾರಿಗೂ ಹೊಳೆಯಲಿಲ್ಲ...

ವಿಮಾನ ಅಪಘಾತಕ್ಕೆ ಕಾರಣ ವೈಮಾನಿಕ ವೈದ್ಯರಿಂದ ದೊರಕಿತು. ಅವನ ದೇಹದ ಪರೀಕ್ಷೆ ನಡೆಸಿ ಅವನ ಕರುಳಿನ ಅಧ್ಯಯನ ನಡೆಸಿ ಅವನು 'ವರ್ಟಿಗೋ' ರೋಗಕ್ಕೆ ಬಲಿಯಾದ ಎಂದರು.

'ವರ್ಟಿಗೋ' ಎಂದರೆ ಅತಿ ಎತ್ತರದಲ್ಲಿ ಉಂಟಾಗುವ ಮಾನಸಿಕ ದುರ್ಬಲತೆ. ಎತ್ತರದ ಹೆದರಿಕೆ ಇರುವವರಿಗೆ ಈ ರೋಗ ಬಡಿಯುತ್ತದೆ. ಈ ವೈಮಾನಿಕನಿಗೆ ಒಮ್ಮೆಲೆ ತಾನು ಭೂಮಿಯಿಂದ ಅತಿ ಎತ್ತರದಲ್ಲಿ ಏಕಾಂಗಿಯಾಗಿ ಇದ್ದೇನೆ ಎಂಬ ಅರಿವು ಉಂಟಾಯಿತು. ತಲೆ ಸುತ್ತಲು ಪ್ರಾರಂಭವಾಯಿತು. ಹೊಟ್ಟೆ ತೊಳಸಿಬಂದು ಹತೋಟಿ ತಪ್ಪಿತು. ವಿಮಾನ ನಡೆಸಲು ಸಾಧ್ಯವಾಗಲಿಲ್ಲ.

ಸಂಗತ

ಅಭಿಮಾನದ ಹುಚ್ಚು; ಅನಾಹುತ ಹೆಚ್ಚು

ಅತಿರೇಕವು ಗೆಲುವಿನ ಸಂಭ್ರಮವನ್ನು ನುಂಗಿಹಾಕಿದೆ

● ಐ. ಸೇಸುನಾಥನ್

ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ಕ್ರಿಕೆಟ್ ಫೈನಲ್‌ನಲ್ಲಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವ ವೇಳೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಪ್ರಕರಣವು ಭಾರತೀಯ ಕ್ರಿಕೆಟ್ ಚರಿತ್ರೆಗೆ ಕಪ್ಪುಚುಕ್ಕೆಯಾಗಿದೆ. ದೇಶದಲ್ಲಿ ಈಗ ಸಿನಿಮಾ ತಾರೆಯರಿಗಿಂತ ಕ್ರಿಕೆಟ್ ಆಟಗಾರರಿಗೆ ಅಭಿಮಾನಿಗಳು ಹೆಚ್ಚು. ದೇಶ ಕಾಯುವ ಸೈನಿಕರು, ಜೀವ ರಕ್ಷಿಸುವ ವೈದ್ಯರು, ಅಕ್ಷರ ಕಲಿಸುವ ಶಿಕ್ಷಕರು, ಸಮಾಜ ಸೇವಕರಿಗಿಂತ ಕ್ರಿಕೆಟಿಗರಿಗೆ ಯುವಪೀಳಿಗೆಯು ಅಭಿಮಾನದ ಮಳೆ ಸುರಿಸುವುದು ವ್ಯವಸ್ಥೆಯ ವ್ಯಂಗ್ಯ.

ಆರ್‌ಸಿಬಿ ತಂಡ ಫೈನಲ್ ಗೆದ್ದ ರಾತ್ರಿಯೇ ಅಭಿಮಾನಿಗಳಿಂದ ಬೆಂಗಳೂರು ಮಾತ್ರವಲ್ಲದೆ ಹಳ್ಳಿ ಹಳ್ಳಿಯಲ್ಲೂ ಸಂಭ್ರಮಾಚರಣೆ ನಡೆಯಿತು. ಮಲಗಿದ್ದ ಜನರಿಗೆ ಪಟಾಕಿ ಶಬ್ದ ನಿದ್ದೆಗೆಡಿಸಿತು. ರಾತ್ರಿಯ ಪ್ರಶಾಂತ ವಾತಾವರಣಕ್ಕೆ ಶಬ್ದ ಮಾಲಿನ್ಯದ ಜೊತೆಗೆ ವಾಯುಮಾಲಿನ್ಯವೂ ಸೇರ್ಪಡೆಯಾಯಿತು.

ಮೈಸೂರಿನಲ್ಲಿ ನಾವು ವಾಸವಿರುವ ಬಡಾವಣೆಯಲ್ಲಿ ಯುವಕರು ಆರ್‌ಸಿಬಿ ಪರ ಜೈಕಾರ ಕೂಗುತ್ತಾ ಬೀದಿಗಳಲ್ಲಿ ಮೆರವಣಿಗೆ ಮಾಡಿದರು. ತಮ್ಮ ಜೊತೆಗೆ ಸೇರಿಕೊಂಡು ಸಂಭ್ರಮಿಸುವಂತೆ ಮಲಗಿದ್ದವರನ್ನೂ ಕೂಗಿ ಕರೆಯುತ್ತಿದ್ದರು. ರಾತ್ರಿ ಎರಡು ಗಂಟೆವರೆಗೂ ಇದು ಮುಂದುವರಿಯಿತು. ಬಳಿಕ ಪೊಲೀಸರು ಬಂದು ಧ್ವನಿವರ್ಧಕದಲ್ಲಿ 'ಎಲ್ಲರನ್ನೂ ಎಳೆದುಕೊಂಡು ಹೋಗಿ ಒಳಗೆ ಹಾಕುತ್ತೇವೆ' ಎಂದು ಎಚ್ಚರಿಕೆ ನೀಡಿದ ಬಳಿಕ ಎಲ್ಲರೂ ಮನೆಯತ್ತ ಹೆಜ್ಜೆ ಹಾಕಿದರು.


ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಮೆಟ್ರೊ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಅಭಿಮಾನಿಗಳ ಕುಣಿತಕ್ಕೆ ರೈಲಿನ ಬೋಗಿಗಳು ಅಲುಗಾಡುವ ಅನುಭವವಾಯಿತು ಎಂಬುದಾಗಿ ಸಹ ಪ್ರಯಾಣಿಕರು ಹೇಳಿದ್ದಾರೆ. ಕೆಲವರು ಅಂದು ರಾತ್ರಿ ಬಸ್‌ಗಳನ್ನು ರಸ್ತೆಯ ಮಧ್ಯದಲ್ಲಿ ನಿಲ್ಲಿಸಿ 'ಆರ್‌ಸಿಬಿ... ಆರ್‌ಸಿಬಿ...' ಎಂದು ಕೂಗಾಡಿದ್ದಾಗಿ ವರದಿ ಆಗಿದೆ. ದ್ವಿಚಕ್ರ ವಾಹನಗಳಲ್ಲಿ ಮೆರವಣಿಗೆ ಹೊರಟ ಕೆಲವು ಯುವಕರು ರಸ್ತೆಯಲ್ಲಿರುವ ಬ್ಯಾರಿಕೇಡ್‌ಗಳನ್ನು ಬೈಕ್ ಜೊತೆಗೆ ಎಳೆದೊಯ್ಯುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಆರ್‌ಸಿಬಿ ಅಭಿಮಾನಿಗಳು ಬೇರೆ ತಂಡದ ಲಾಂಛನ ಇರುವ ಅಭಿಮಾನಿಯೊಬ್ಬನ ಮೇಲಂಗಿಯನ್ನು ಬಲವಂತವಾಗಿ ಕಿತ್ತು ಹರಿದು ಹಾಕಿ, ಅದರ ಮೇಲೆ ವಾಹನಗಳನ್ನು ಚಲಾಯಿಸಿದ ಮತ್ತೊಂದು ದೃಶ್ಯವೂ ಹರಿದಾಡುತ್ತಿದೆ. ಚಿತ್ರದುರ್ಗದಲ್ಲಿ ವಿರಾಟ್ ಕೊಹ್ಲಿ ಪೋಸ್ಟರ್‌ಗೆ ಮೇಕೆಯೊಂದನ್ನು ಬಲಿ ನೀಡಿ ರಕ್ತಾಭಿಷೇಕ ಮಾಡಿದ ಅಭಿಮಾನಿಯೊಬ್ಬ ಪೊಲೀಸರ ಅತಿಥಿಯಾಗಿದ್ದಾನೆ.

ಮುಂಬೈ ಮತ್ತು ಚೆನ್ನೈ ತಂಡ ತಲಾ ಐದು ಬಾರಿ ಗೆದ್ದಿದ್ದರೂ ಇಂತಹ ಹುಚ್ಚಾಟವು ಈ ಹಿಂದೆ ಎಂದೂ ನಡೆದಿರಲಿಲ್ಲ. ಅಭಿಮಾನಿಗಳ ಅತಿರೇಕದ ವರ್ತನೆಯು ಕಾಲ್ತುಳಿತಕ್ಕೆ ಕಾರಣವಾಗಿ ಗೆಲುವಿನ ಸಂಭ್ರಮವನ್ನು ನುಂಗಿಹಾಕಿದೆ. ಒಂದು ಕಾಲದಲ್ಲಿ ಕ್ರಿಕೆಟ್‌ಗೆ 'ಮೂರ್ಖರ ಆಟ' ಎಂಬ ಬಿರುದು ಇತ್ತು. ಈಗ ಕ್ರಿಕೆಟ್ ನೋಡದವರು, ಅದರ ಬಗ್ಗೆ ಮಾತನಾಡದವರು ಮೂರ್ಖರು ಎಂಬಂತಾಗಿದೆ.

ಎಷ್ಟೋ ಮನೆಗಳಲ್ಲಿ ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ, ಮಕ್ಕಳು ಇನ್ನೊಂದು ಕಡೆ ಕುಳಿತು ಮೊಬೈಲ್ ಫೋನ್‌ನಲ್ಲಿ ಐಪಿಎಲ್ ಪಂದ್ಯಾವಳಿ ವೀಕ್ಷಿಸುವುದನ್ನು ಕಾಣಬಹುದಾಗಿದೆ. ಇದನ್ನು ಅಭಿಮಾನ ಎನ್ನಬೇಕೋ, ಹುಚ್ಚು ಎನ್ನಬೇಕೋ ತಿಳಿಯದು. ಕ್ರಿಕೆಟ್ ಅಭಿಮಾನಿಗಳಲ್ಲಿ ಬಹುತೇಕರು ಯುವಜನರಾಗಿದ್ದಾರೆ. ಅವರಲ್ಲಿ ವಿದ್ಯಾರ್ಥಿಗಳು ಮತ್ತು ನಿರುದ್ಯೋಗಿ ಯುವಕರ ಸಂಖ್ಯೆ ಹೆಚ್ಚಿದೆ.

ತಂದೆ, ತಾಯಿ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಕೆಲವು ಯುವಕರು ಕ್ರಿಕೆಟ್ ವೀಕ್ಷಣೆ, ಬೆಟ್ಟಿಂಗ್ ಮತ್ತು ಸಂಭ್ರಮಾಚರಣೆಗೆ ಖರ್ಚು ಮಾಡುತ್ತಾ ಕಾಲ ದೂಡುತ್ತಾರೆ. ಕಳೆದ ವರ್ಷ ತನ್ನ ಮೂವರು ಪುತ್ರಿಯರ ಶಾಲಾ ಶುಲ್ಕ ಕಟ್ಟದೆ ₹64 ಸಾವಿರಕ್ಕೆ ಟಿಕೆಟ್ ಖರೀದಿಸಿ ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣಕ್ಕೆ ಹೋಗಿ ಕ್ರಿಕೆಟ್ ಪಂದ್ಯ ವೀಕ್ಷಿಸಿದ್ದ ಬೇಜವಾಬ್ದಾರಿ ತಂದೆಯ ಬಗ್ಗೆ ವರದಿಯಾಗಿತ್ತು.



'ಹನ್ನೊಂದು ಜನ ಮೂರ್ಖರು ಆಟವಾಡುತ್ತಿದ್ದಾರೆ. ಅದನ್ನು ಹನ್ನೊಂದು ಸಾವಿರ ಮೂರ್ಖರು ನೋಡುತ್ತಿದ್ದಾರೆ' ಎಂದು ಹೇಳಿದ ಐರಿಷ್ ನಾಟಕಕಾರ ಜಾರ್ಜ್ ಬರ್ನಾರ್ಡ್ ಶಾ ಇಂದು ಬದುಕಿದ್ದರೆ, 'ಹನ್ನೊಂದು ಜನ ಮೂರ್ಖರು ಆಟವಾಡುತ್ತಿದ್ದಾರೆ; ಅದನ್ನು ಹಲವು ಕೋಟಿ ಮೂರ್ಖರು ನೋಡುತ್ತಿದ್ದಾರೆ' ಎಂದು ಹೇಳುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಕ್ರಿಕೆಟ್ ಹೆಸರಿನಲ್ಲಿ ಬೆಟ್ಟಿಂಗ್ ದಂಧೆ ವಿಪರೀತಕ್ಕೆ ಹೋಗಿದೆ. ಪಂದ್ಯದಿಂದ ಪಂದ್ಯಕ್ಕೆ ಪ್ರಾಯೋಜಕರ ಸಂಖ್ಯೆ ಹೆಚ್ಚುತ್ತಿದ್ದು, ಫ್ರಾಂಚೈಸಿಗಳ ಬೊಕ್ಕಸ ತುಂಬುತ್ತಿದೆ. ಫ್ರಾಂಚೈಸಿ ಪರ ಆಡುವ ಆಟಗಾರರು ಕೋಟ್ಯಧಿಪತಿಗಳಾಗುತ್ತಾರೆ. ನೋಡುವ ಪ್ರೇಕ್ಷಕರಿಗೆ ಹಣ, ಸಮಯ ವ್ಯರ್ಥವಾಗುತ್ತದೆ.

ಕ್ರಿಕೆಟ್ ಆಟದ ವಿಜೃಂಭಣೆಯಿಂದಾಗಿ ಅನೇಕ ದೇಶೀಯ ಕ್ರೀಡೆಗಳು ಪ್ರೋತ್ಸಾಹವಿಲ್ಲದೆ ನೇಪಥ್ಯಕ್ಕೆ ಸರಿದಿವೆ. ವೀಕ್ಷಕರ ಕೊರತೆಯಿಂದ ಅಂತಹ ಆಟಗಳಿಗೆ ಪ್ರಾಯೋಜಕತ್ವವೂ ಲಭಿಸುವುದಿಲ್ಲ.

ಯುವಜನರು ಕ್ರಿಕೆಟ್ ಉನ್ಮಾದದಿಂದ ಹೊರಬರಬೇಕು. ವಿದ್ಯಾಭ್ಯಾಸ, ವ್ಯಕ್ತಿತ್ವ ವಿಕಸನ, ಹಣ ಸಂಪಾದನೆ ಕಡೆಗೆ ಗಮನಹರಿಸಬೇಕು. ಕ್ರಿಕೆಟ್ ವೀಕ್ಷಣೆಯು ಬಿಡುವಿನ ಕಾಲದ ಮನರಂಜನೆಯ ಅಂಶವಾಗಬೇಕಷ್ಟೇ. ಅದು ಊಟಕ್ಕೆ ಉಪ್ಪಿನಕಾಯಿಯಂತೆ ಇರಬೇಕು. ಉಪ್ಪಿನಕಾಯಿಯೇ ಊಟವಾಗಲಾರದು.

ವಾಚಕರ ವಾಣಿ

ಕೆಎಟಿ ತೀರ್ಪು: ಉದ್ಯೋಗಾಕಾಂಕ್ಷಿಗಳಿಗೆ ಸಂಕಷ್ಟ

ಸರ್ಕಾರಿ ನೇಮಕಾತಿಗಳಲ್ಲಿ ಮೀಸಲು ಪ್ರಮಾಣವನ್ನು ಶೇ 50ರಿಂದ ಶೇ 56ಕ್ಕೆ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಈ ಆದೇಶದ ಆಧಾರದ ಮೇಲೆ ಕರ್ನಾಟಕ ಲೋಕಸೇವಾ ಆಯೋಗವು 2024ರ ಫೆಬ್ರುವರಿ 26ರಂದು ಹೊರಡಿಸಿದ್ದ 384 ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕ ಅಧಿಸೂಚನೆಯನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ರದ್ದುಪಡಿಸಿದೆ.

2022ರ ಡಿಸೆಂಬರ್ 12ರಂದು ಸರ್ಕಾರ ಮೀಸಲು ಹೆಚ್ಚಳಕ್ಕೆ ಹೊರಡಿಸಿದ್ದ ಆದೇಶವನ್ನೂ ರದ್ದುಪಡಿಸಿದೆ. ಈ ತೀರ್ಪು ಅಭ್ಯರ್ಥಿಗಳ ಪಾಲಿಗೆ ನುಂಗಲಾರದ ಬಿಸಿತುಪ್ಪವಾಗಿದೆ. 2022ರಿಂದ ಪರೀಕ್ಷೆ ಬರೆದು ನೇಮಕಗೊಂಡಿರುವ ಹಾಗೂ ಕೆಎಎಸ್ ಹಾಗೂ ಇತರೆ ಹಲವು ನೇಮಕಾತಿಗಳ ಅಂತಿಮ ಪರೀಕ್ಷೆ ಬರೆದು ಫಲಿತಾಂಶದ ನಿರೀಕ್ಷೆಯಲ್ಲಿ ಇರುವ ಪದವೀಧರರು ಅಡಕತ್ತರಿಗೆ ಸಿಲುಕುವಂತಾಗಿದೆ. ಕೂಡಲೇ, ಸರ್ಕಾರವು ಮಧ್ಯಪ್ರವೇಶಿಸಿ ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಉದ್ಯೋಗ ಆಕಾಂಕ್ಷಿಗಳ ಹಿತ ಕಾಪಾಡಬೇಕಿದೆ.

ಎಸ್.ಎನ್. ರಮೇಶ್, ಸಾತನೂರು, ಮಂಡ್ಯ

ತಾಂತ್ರಿಕ ಸಮಸ್ಯೆ ಪರಿಹರಿಸಬೇಕಿದೆ

ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಚಿಲ್ಲರೆ ಸಮಸ್ಯೆ ಪರಿಹರಿಸಲು ಯುಪಿಐ ಆಧಾರಿತ ಹಣ ಪಾವತಿಗೆ ಅವಕಾಶ ಕಲ್ಪಿಸಿರುವುದು ಒಳ್ಳೆಯ ನಿರ್ಧಾರ. ಆದರೆ, ಕೆಲವೊಮ್ಮೆ ಫೋನ್ ಪೇ ಮೂಲಕ ಹಣ ಪಾವತಿಸಿದಾಗ ನಮ್ಮ ಮೊಬೈಲ್ ಫೋನ್‌ನಲ್ಲಿ ಕ್ರೆಡಿಟ್ ಆಗಿರುವುದಾಗಿ ತೋರಿಸುತ್ತದೆ. ಆದರೆ, ನಿರ್ವಾಹಕರ ಟಿಕೆಟ್ ಮಷಿನ್‌ನಲ್ಲಿ ಟಿಕೆಟ್ ಜನರೇಟ್ ಆಗದೆ ಪ್ರಯಾಣಿಕರು ತೊಂದರೆ ಅನುಭವಿಸುವಂತಾಗಿದೆ.

ಟಿಕೆಟ್ ಜನರೇಟ್ ಆಗದಿದ್ದರೆ ನಿರ್ವಾಹಕರಿಗೂ ತೊಂದರೆಯಾಗಲಿದೆ. ಹಣ ಕಡಿತವಾಗಿರುವುದರಿಂದ ಮತ್ತೆ ಹಣ ಪಾವತಿಗೆ ಪ್ರಯಾಣಿಕರಿಗೂ ತೊಂದರೆಯಾಗಲಿದೆ. ಆಗ ಪ್ರಯಾಣಿಕರು ನಿರ್ವಾಹಕರೊಟ್ಟಿಗೆ ಜಗಳಕ್ಕಿಳಿಯುವುದು ಸಾಮಾನ್ಯವಾಗಿದೆ.

ಇಂಟರ್‌ನೆಟ್ ಸಮಸ್ಯೆಯಿಂದ ಕೆಲವೊಮ್ಮೆ ಇಂತಹ ಸಮಸ್ಯೆಯಾಗುತ್ತದೆ. ಮತ್ತೊಂದೆಡೆ ಕಡಿತವಾದ ಹಣವು ಪ್ರಯಾಣಿಕರ ಬ್ಯಾಂಕ್ ಖಾತೆಗೆ ಮರಳುವುದು ವಿಳಂಬವಾಗುತ್ತಿದೆ. ಈ ತಾಂತ್ರಿಕ ಸಮಸ್ಯೆ ಬಗೆಹರಿಸಲು ಸರ್ಕಾರ ಗಮನಹರಿಸಬೇಕಿದೆ.

ಮಂಜುನಾಥ್ ಬಿ., ಹೊಳೆಹೊನ್ನೂರು

ರೈತರ ಜೀವ ಉಳಿಸಿ

ಕರ್ನಾಟಕದಲ್ಲಿ 2023ರ ಏಪ್ರಿಲ್‌ನಿಂದ 2024ರ ಮಾರ್ಚ್‌ವರೆಗೆ ಒಟ್ಟು 983 ರೈತರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಯಾಗಿದೆ. ಈ ಪೈಕಿ 828 ರೈತರು ಆರ್ಥಿಕ ಸಂಕಷ್ಟ ಮತ್ತು ಕೃಷಿ ವೈಫಲ್ಯಕ್ಕೆ ಜೀವ ಕಳೆದುಕೊಂಡಿದ್ದಾರೆ. ಬೆಳಗಾವಿ, ಹಾವೇರಿ, ವಿಜಯಪುರ ಮತ್ತು ಮಂಡ್ಯ ಜಿಲ್ಲೆಯಲ್ಲಿ ಅತಿಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ.

ವರ್ಷದಿಂದ ವರ್ಷಕ್ಕೆ ರೈತರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದು ಕೃಷಿ ಕ್ಷೇತ್ರದ ಸುಧಾರಣೆಯತ್ತ ಸರ್ಕಾರಗಳು ಗಮನಹರಿಸಬೇಕು ಎಂಬುದರತ್ತ ಬೊಟ್ಟು ಮಾಡುತ್ತದೆ.

ರಾಜ್ಯದಲ್ಲಿ ರೈತರು ಕೂಡ ಒಂದೇ ರೀತಿಯ ಬೆಳೆ ಪದ್ಧತಿಗೆ ಮಾರುಹೋಗಿದ್ದಾರೆ. ಹವಾಮಾನ ವೈಪರೀತ್ಯವು ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ. ಬ್ಯಾಂಕ್‌ಗಳಿಂದ ರೈತರಿಗೆ ಸಕಾಲದಲ್ಲಿ ಕಡಿಮೆ ಬಡ್ಡಿದರಕ್ಕೆ ಕೃಷಿ ಸಾಲ ದೊರೆಯುತ್ತಿಲ್ಲ. ಹಾಗಾಗಿ, ಅವರು ಖಾಸಗಿ ಲೇವಾದೇವಿದಾರರ ಸಾಲದ ಶೂಲಕ್ಕೆ ಸಿಲುಕುವಂತಾಗಿದೆ. ಮತ್ತೊಂದೆಡೆ ಕೃಷಿ ಇಲಾಖೆಯು ಅನ್ನದಾತರಿಗೆ ಕೃಷಿ ಪೂರಕ ಸೇವೆ ಒದಗಿಸುವಲ್ಲಿ ವಿಫಲವಾಗಿದೆ.

ಪರಮಾಧಿಕಾರ!

ತಾವು ಎಸಗಿದ ತಪ್ಪಿಗೆ
ಪರರನ್ನು ಶಿಕ್ಷಿಸುವ
ಪರಮಾಧಿಕಾರ ಇರುತ್ತದೆ
ಪ್ರಜಾಪ್ರಭುತ್ವದಲ್ಲಿ
ಆಳುವವರಿಗೆ!

ಎಚ್. ಆನಂದರಾಮಶಾಸ್ತ್ರೀ
ಬೆಂಗಳೂರು

ಸರ್ಕಾರವೂ ರೈತರ ಆತ್ಮಹತ್ಯೆ ತಗ್ಗಿಸುವ ದಿಸೆಯಲ್ಲಿ ಪ್ರತಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮಾನಸಿಕ ಆರೋಗ್ಯ ಮತ್ತು ಆಪ್ತ ಸಮಾಲೋಚನಾ ಕೇಂದ್ರ ಸ್ಥಾಪಿಸಬೇಕು. ರೈತರು ಮತ್ತು ಅವರ ಕುಟುಂಬಗಳಿಗೆ ನೆರವಾಗಲು ಸಹಾಯವಾಣಿ ವ್ಯವಸ್ಥೆ ಕಲ್ಪಿಸಬೇಕು. ಕಡಿಮೆ ಬಡ್ಡಿದರದಲ್ಲಿ ಅಲ್ಪಾವಧಿ ಕೃಷಿ ಸಾಲ ಸೌಲಭ್ಯ ಕಲ್ಪಿಸಲು ಮುಂದಾಗಬೇಕು. ಖಾಸಗಿ ಲೇವಾದೇವಿದಾರರು ವಿಧಿಸುವ ಅಧಿಕ ಬಡ್ಡಿದರಕ್ಕೆ ಅಂಕುಶ ಹಾಕಬೇಕು. ಬೆಳೆ ವಿಮಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಆಗಷ್ಟೇ ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಗ್ಗಿಸಲು ಸಾಧ್ಯ.

ವಿಜಯಕುಮಾರ್ ಎಚ್.ಕೆ., ರಾಯಚೂರು

ವೈಫಲ್ಯ ಮುಚ್ಚಿಕೊಳ್ಳಲು ಅಮಾನತು ಕ್ರಮ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಬೆಂಗಳೂರು ಪೊಲೀಸ್ ಕಮಿಷನರ್ ಬಿ. ದಯಾನಂದ ಅವರನ್ನು ಸೇವೆಯಿಂದ ಅಮಾನತುಗೊಳಿಸಿದೆ. ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಕೈಗೊಂಡಿರುವ ಕ್ರಮ ಇದಾಗಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಸಂಭ್ರಮಾಚರಣೆಗೆ ಒಲವು ತೋರಿದ್ದು ಯಾರು ಎಂಬ ಸಂಗತಿ ಇನ್ನೂ ಬಯಲಾಗಿಲ್ಲ. ಘಟನೆ ನಡೆದ ಬಳಿಕ ಪತ್ರಿಕಾಗೋಷ್ಠಿ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಇಲಾಖೆಯ ವೈಫಲ್ಯವನ್ನು ನಿರಾಕರಿಸಿದ್ದರು. ಈಗ ಹಿರಿಯ ಪೊಲೀಸ್ ಅಧಿಕಾರಿ ವಿರುದ್ಧ ಕ್ರಮ ಕೈಗೊಂಡಿರುವುದು ಅಚ್ಚರಿ ತಂದಿದೆ. ಘಟನೆಯ ಹಿಂದೆ ಗೃಹ ಇಲಾಖೆಯ ವೈಫಲ್ಯವೂ ಇದೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಖುದ್ದಾಗಿ ನಿಂತು ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಕಮಿಷನರ್ ಅವರೊಬ್ಬರನ್ನೇ ಹೊಣೆ ಮಾಡುವುದು ಎಷ್ಟು ಸರಿ?

ಪ್ರಕಾಶ್ ಮಲ್ಕಿ ಒಡೆಯರ್, ಹೂವಿನಹಡಗಲಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಹೇಮಾವತಿ ನದಿ ನೀರು ಹಂಚಿಕೆ ವಿವಾದ ತುಮಕೂರು ಮತ್ತು ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಗಳಲ್ಲಿ ದೊಡ್ಡದಾಗಿ ಸದ್ದು ಮಾಡುತ್ತಿದೆ. ‘ಹಂಚಿಕೆ’ ರಾಜಕೀಯ ಸ್ವರೂಪ ಪಡೆದುಕೊಂಡ ನಂತರ ಹಲವು ಮಗ್ಗಲು ದಾಟಿ ಸಾಗುತ್ತಿದೆ. ನೀರು ಹರಿಸುವ ವಿಚಾರದಲ್ಲಿ ರಾಜಕಾರಣ ನುಸುಳುತ್ತಿದ್ದಂತೆಯೇ ಪ್ರತಿಷ್ಠೆ, ದ್ವೇಷದ ಕಿಚ್ಚು ಹೆಚ್ಚಾಗಿದೆ. ‘ನೀ ಕೊಡೆ, ನಾ ಬಿಡೆ’ ಎಂಬ ಪರಿಸ್ಥಿತಿ ತುಮಕೂರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿ ನಿರ್ಮಾಣವಾಗಿದೆ. ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದಾದ ವಿಚಾರ ಬೆಟ್ಟದಂತೆ ಎದ್ದು ನಿಂತಿದೆ. ಸಣ್ಣ ಕಿಡಿಯು ಜ್ವಾಲೆಯ ರೂಪ ಪಡೆದುಕೊಂಡಿದ್ದು, ಅಣ್ಣ–ತಮ್ಮಂದಿರಂತೆ ಇದ್ದ ತುಮಕೂರಿನ ಅಕ್ಕಪಕ್ಕದ ತಾಲ್ಲೂಕುಗಳು ಮತ್ತು ಎರಡೂ ಜಿಲ್ಲೆಗಳ ನಡುವೆ ದೊಡ್ಡ ಕಂದಕವನ್ನೇ ಸೃಷ್ಟಿಸಿದೆ

ರಾಜಕೀಯ ಕಿಚ್ಚು ಹಚ್ಚಿದ ಹೇಮಾವತಿ ನೀರು

ತುಮಕೂರು ಜಿಲ್ಲೆಯಲ್ಲಿ ಹೇಮಾವತಿ ನಾಲೆಗೆ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್

● ಕೆ.ಜೆ. ಮರಿಯಪ್ಪ


ಗುಬ್ಬಿ ತಾಲ್ಲೂಕಿನ ಸುಂಕಾಪುರ ಗ್ರಾಮದ ಬಳಿ ಕಾಮಗಾರಿ

34.5 ಕಿ.ಮೀ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಮಾರ್ಗದ ಉದ್ದ

₹986 ಕೋಟಿ ಯೋಜನೆಯ ವೆಚ್ಚ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಸುಂಕಾಪುರ ಗ್ರಾಮದಿಂದ ಕುಣಿಗಲ್ ತಾಲ್ಲೂಕಿನ (34.5 ಕಿ.ಮೀ) ಹೇಮಾವತಿ ನಾಲೆಗೆ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ (ಕೊಳವೆ ಮಾರ್ಗದಲ್ಲಿ ನೀರು ಹರಿಸುವ ಯೋಜನೆ) ನಿರ್ಮಾಣ ಮಾಡಲು ಸರ್ಕಾರ ಮುಂದಾಗಿದೆ. ಇದು ವಿವಾದದ ಸ್ವರೂಪ ಪಡೆದಿದೆ. ಈವರೆಗೆ ಕುಣಿಗಲ್ ತಾಲ್ಲೂಕಿಗೆ ಹೇಮಾವತಿ ನಾಲೆ ಮೂಲಕ ನೀರು ಬಿಡುತ್ತಿದ್ದು, ಹಂಚಿಕೆಯಾದಷ್ಟು (3.04 ಟಿಎಂಸಿ ಅಡಿ) ಹರಿದು ಬರುತ್ತಿಲ್ಲ. ನೀರು ಕೊನೆಯ ಭಾಗಕ್ಕೆ ತಲುಪುತ್ತಲೇ ಇಲ್ಲ. ‘ನಮ್ಮ ಪಾಲನ್ನು ಜಿಲ್ಲೆಯ ಇತರ ಭಾಗದವರು ಕಬಳಿಸುತ್ತಿದ್ದಾರೆ. ಇದನ್ನು ತಪ್ಪಿಸಿ ನಮ್ಮದನ್ನು ನಾವು ಬಳಸಿಕೊಳ್ಳಬೇಕು’ ಎಂಬ ಕುಣಿಗಲ್ ತಾಲ್ಲೂಕಿನ ಜನರ ಒತ್ತಡದ ಕಾರಣಕ್ಕೆ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ರೂಪುಗೊಂಡಿದೆ.

ಕಾಮಗಾರಿ ಇನ್ನೂ ಆರಂಭಿಕ ಹಂತದಲ್ಲಿದ್ದು, ಈವರೆಗೆ ಕೆಲವು ಮೀಟರ್‌ಗಳಷ್ಟೇ ಕೆಲಸ ನಡೆದಿದೆ.

ಕುಣಿಗಲ್ ತಾಲ್ಲೂಕಿಗೆ ನೀರು ತೆಗೆದುಕೊಂಡು ಹೋಗುವುದಕ್ಕೆ ಗುಬ್ಬಿ, ತುರುವೇಕೆರೆ, ತುಮಕೂರು ಭಾಗದವರು ವಿರೋಧ ವ್ಯಕ್ತಪಡಿಸುತ್ತಿಲ್ಲ. ಆದರೆ, ಕೋಟ್ಯಂತರ ರೂಪಾಯಿ ವ್ಯಯಿಸಿ ಆಧುನೀಕರಣ ಮಾಡಿರುವ ಹೇಮಾವತಿ ನಾಲೆ ಮೂಲಕವೇ ನೀರು ಹರಿಸಬೇಕು ಎನ್ನುತ್ತಿದ್ದಾರೆ. ಜಿಲ್ಲೆಯ ಇತರೆ ಭಾಗಗಳಿಗೂ ನಾಲೆ ಮೂಲಕವೇ ನೀರು ಬಿಡಲಾಗುತ್ತಿದೆ. ಒಂದು ವೇಳೆ ಪೈಪ್‌ಲೈನ್ ಮೂಲಕ ಹರಿಸಿದರೆ ಹೆಚ್ಚಿನ ಪ್ರಮಾಣದಲ್ಲಿ ಆ ಭಾಗಕ್ಕೆ ಹರಿದುಹೋಗುತ್ತದೆ. ಇತರೆ ಪ್ರದೇಶದವರಿಗೆ ಸಮಸ್ಯೆಯಾಗುತ್ತದೆ. ಜತೆಗೆ ನಾಲೆಯಲ್ಲಿ ನೀರಿನ ಹರಿವಿನ ಪ್ರಮಾಣ ಕಡಿಮೆಯಾದರೆ ಉಳಿದ ಭಾಗಕ್ಕೆ ನೀರಿನ ಕೊರತೆಯಾಗುತ್ತದೆ. ಹಾಗಾಗಿ, ಎಲ್ಲೆಡೆ ನಾಲೆ ಮೂಲಕವೇ ನೀರು ಬಿಡಬೇಕು ಎಂಬ ಬೇಡಿಕೆ ಮುಂದಿಟ್ಟುಕೊಂಡು ರೈತರು, ರಾಜಕಾರಣಿಗಳು ಹೋರಾಟಕ್ಕೆ ಇಳಿದಿದ್ದಾರೆ.

ಕುಣಿಗಲ್ ತಾಲ್ಲೂಕಿಗೆ ಪೈಪ್‌ಲೈನ್ ಮೂಲಕ ನೀರು ಹರಿದರೆ ಮುಂದಿನ ದಿನಗಳಲ್ಲಿ ಪಕ್ಕದ ಮಾಗಡಿ, ರಾಮನಗರ ಭಾಗಕ್ಕೂ ನೀರು ಒದಗಿಸುವುದು ಸುಲಭವಾಗುತ್ತದೆ. ಇದೇ ಉದ್ದೇಶ ಇಟ್ಟುಕೊಂಡು ಪೈಪ್‌ಲೈನ್ ಯೋಜನೆ ಜಾರಿಗೆ ತರಲಾಗಿದೆ. ಇದರಿಂದ ಮುಂದಿನ ವರ್ಷಗಳಲ್ಲಿ ಗುಬ್ಬಿ, ತುರುವೇಕೆರೆ, ತುಮಕೂರು ಭಾಗದವರು ನೀರಿನ ತೀವ್ರ ಕೊರತೆ ಎದುರಿಸಬೇಕಾಗುತ್ತದೆ ಎಂಬ ಆತಂಕವನ್ನು ರೈತರು ವ್ಯಕ್ತಪಡಿಸುತ್ತಿದ್ದಾರೆ.

ಮಾತು ಬದಲು: ಆರಂಭದಲ್ಲಿ ಯೋಜನೆ ವಿರೋಧಿಸಿ ಕೆಡಿಪಿ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಈಗ ಮಾತು ಬದಲಿಸಿದ್ದಾರೆ. ‘ತಾಂತ್ರಿಕ ಸಮಿತಿ ವರದಿ ಆಧರಿಸಿ ಯೋಜನೆ ಜಾರಿ ಮಾಡಲಾಗುತ್ತಿದೆ’ ಎಂಬ ಸಮರ್ಥನೆ ನೀಡುತ್ತಿದ್ದಾರೆ. ಗುಬ್ಬಿಯ ಕಾಂಗ್ರೆಸ್ ಶಾಸಕ ಎಸ್.ಆರ್.ಶ್ರೀನಿವಾಸ್ ಬಹಿರಂಗವಾಗಿ ಹೋರಾಟಕ್ಕೆ ಇಳಿಯದಿದ್ದರೂ ಯೋಜನೆ ವಿರೋಧಿಸಿದ್ದಾರೆ.

ತುಮಕೂರು ಭಾಗದ ಬಿಜೆಪಿ, ಜೆಡಿಎಸ್, ರೈತ ಸಂಘಟನೆಗಳು, ಮಠಾಧೀಶರು ಹಾಗೂ ರೈತರು ಒಟ್ಟಾಗಿ ಯೋಜನೆ ವಿರೋಧಿಸಿ ಹೋರಾಟಕ್ಕೆ ಇಳಿದಿದ್ದಾರೆ. ಕುಣಿಗಲ್ ಭಾಗದಲ್ಲೂ ಯೋಜನೆ ಜಾರಿಗೆ ಪಕ್ಷಾತೀತವಾಗಿ ಒತ್ತಾಯಿಸಲಾಗುತ್ತಿದೆ. ❖

ಕಾಂಗ್ರೆಸ್–ಜೆಡಿಎಸ್ ಸರ್ಕಾರದಲ್ಲಿ ಒಪ್ಪಿಗೆ


2018ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕಾಂಗ್ರೆಸ್– ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಸಿ.ಎಂ ಆಗಿದ್ದ ಎಚ್.ಡಿ.ಕುಮಾರಸ್ವಾಮಿ ಅವಧಿಯಲ್ಲೇ ₹450 ಕೋಟಿ ಮೊತ್ತದ ಯೋಜನೆಗೆ ಒಪ್ಪಿಗೆ ನೀಡಲಾಗಿತ್ತು. ಆಗ ಡಿ.ಕೆ. ಶಿವಕುಮಾರ್ ಅವರು ಜಲಸಂಪನ್ಮೂಲ ಸಚಿವರಾಗಿದ್ದರು. ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಯೋಜನೆ ರದ್ದುಪಡಿಸಿತ್ತು. ಕಳೆದ ವಿಧಾನಸಭೆ ಚುನಾವಣೆ ಕಾಂಗ್ರೆಸ್ ನೀಡಿದ್ದ ಭರವಸೆಯಂತೆ ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಯೋಜನೆ ಆರಂಭಿಸಲಾಗಿದೆ.

ಕೆನಾಲ್ ಯೋಜನೆ ಕೈಬಿಟ್ಟು ನಾಲೆ ಮೂಲಕ ನೀರು ಹರಿಸಲಿ. ಮೊದಲು ಕುಣಿಗಲ್ ಭಾಗಕ್ಕೆ ನೀರು ಹರಿಸಿದ ನಂತರ ಇತರೆ ಭಾಗಕ್ಕೆ ಕೊಡುವ ಬಗ್ಗೆ ನಿಯಮ ರೂಪಿಸಲಿ
ಬಿ.ಸುರೇಶ್ ಗೌಡ, ತುಮಕೂರು ಗ್ರಾ. ಬಿಜೆಪಿ ಶಾಸಕ

ತಮಗೆ ಬೇಕಾದವರನ್ನು ತಾಂತ್ರಿಕ ಸಮಿತಿಗೆ ನೇಮಿಸಿಕೊಂಡು, ತಮಗೆ ಬೇಕಾದಂತೆ ವರದಿ ಬರೆಸಿಕೊಂಡಿದ್ದಾರೆ. ಈ ಯೋಜನೆಗೆ ನನ್ನ ವಿರೋಧವಿದೆ
ಎಸ್.ಆರ್.ಶ್ರೀನಿವಾಸ್, ಗುಬ್ಬಿ ಕಾಂಗ್ರೆಸ್ ಶಾಸಕ

ನಮ್ಮ ಪಾಲಿನ ನೀರನ್ನು ನಾವು ಕೇಳುತ್ತಿದ್ದೇವೆ. ಪಕ್ಕದ ತಾಲ್ಲೂಕಿನವರಿಗೆ ಅನ್ಯಾಯ ಮಾಡಿ ಕಿತ್ತುಕೊಳ್ಳುತ್ತಿಲ್ಲ. ಕೆಲವರು ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಹೋರಾಟ ಮಾಡುತ್ತಿದ್ದಾರೆ
ಡಾ. ಎಚ್.ಡಿ.ರಂಗನಾಥ್, ಕುಣಿಗಲ್ ಕಾಂಗ್ರೆಸ್ ಶಾಸಕ


ಕೆನಾಲ್ ಯೋಜನೆ ಸಂಪೂರ್ಣ ಅವೈಜ್ಞಾನಿಕವಾಗಿದೆ. ಈಗಿರುವ ನಾಲೆಯಲ್ಲೇ ಕುಣಿಗಲ್‌ಗೆ ನೀರು ಹರಿಸಬೇಕು. ಕಾಮಗಾರಿ ನಿಲ್ಲುವವರೆಗೂ ಹೋರಾಟ ಮುಂದುವರಿಯಲಿದೆ
ಎ.ಗೋವಿಂದರಾಜು, ರೈತ ಸಂಘದ ತುಮಕೂರು ಜಿಲ್ಲಾ ಅಧ್ಯಕ್ಷ



ಗುಬ್ಬಿ ತಾಲ್ಲೂಕು ಸುಂಕಾಪುರದಿಂದ ಅದೇ ತಾಲ್ಲೂಕಿನ ನಾರನಹಳ್ಳಿವರೆಗೆ ಪೈಪ್ ಲೈನ್ ಮೂಲಕ ಹರಿಯುವ ಹೇಮಾವತಿ ನದಿ ನೀರು, ಅಲ್ಲಿಂದ ನಾಲೆ ಮೂಲಕ ಕುಣಿಗಲ್ ದೊಡ್ಡ ಕೆರೆಗೆ ಹರಿಯಲಿದೆ...

ತುಮಕೂರು ವಲಯ: ತಾಲ್ಲೂಕುವಾರು ನೀರಿನ ಹಂಚಿಕೆ


(ಟಿಎಂಸಿ ಅಡಿಗಳಲ್ಲಿ)



*ಹೊಸದುರ್ಗ 0.03, ಕಡೂರು 0.02

10 ವರ್ಷಗಳಲ್ಲಿ ತುಮಕೂರು ವಲಯಕ್ಕೆ ಹರಿದ ನೀರು

(ಟಿಎಂಸಿ ಅಡಿಗಳಲ್ಲಿ)



ರಾಜಕೀಯ ಮೇಲಾಟ

ಹೇಮಾವತಿ ನೀರು ಹಂಚಿಕೆ ವಿಚಾರದಲ್ಲಿ ರಾಜಕೀಯ ನಂಟು ಬೆಸೆದುಕೊಂಡಿರುವುದು ಸಮಸ್ಯೆಯನ್ನು ಜಟಿಲವಾಗಿಸಿದೆ. ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂಬಂಧಿ ಡಾ.ಎಚ್.ಡಿ.ರಂಗನಾಥ್ ಕುಣಿಗಲ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ನಿರ್ಮಿಸಿ ನೀರು ತಂದರೆ ಮುಂದಿನ ಚುನಾವಣೆ ಹೊತ್ತಿಗೆ ‘ಕ್ಷೇತ್ರ ಗಟ್ಟಿ’ ಮಾಡಿಕೊಳ್ಳುವ ರಾಜಕೀಯ ಉದ್ದೇಶವೂ ಕೆಲಸ ಮಾಡಿದಂತೆ ಕಾಣುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಕುಣಿಗಲ್ ಭಾಗಕ್ಕೆ ನೀರು ಬಂದರೆ ಅಲ್ಲಿಂದ ಮಾಗಡಿ, ರಾಮನಗರಕ್ಕೆ ತೆಗೆದುಕೊಂಡು ಹೋಗಲು ಯಾವುದೇ ಅಡ್ಡಿ ಇರುವುದಿಲ್ಲ. ನೀರಿನ ರಾಜಕಾರಣ ಮುಂದಿಟ್ಟುಕೊಂಡು ರಾಮನಗರ ಭಾಗದಲ್ಲಿ ಸುಲಭವಾಗಿ ರಾಜಕೀಯ ಕಡುವೈರಿ ಜೆಡಿಎಸ್ ಅನ್ನು ಮಣಿಸುವುದು ಸುಲಭವಾಗುತ್ತದೆ ಎಂಬ ಲೆಕ್ಕಾಚಾರಗಳೂ ಇವೆ ಎನ್ನಲಾಗಿದೆ. ರಾಜಕೀಯ ಒಳಸುಳಿಗಳೇ ‘ಹಿನ್ನೆಲೆ–ಮುನ್ನೆಲೆ’ಯಲ್ಲಿ ಗೋಚರಿಸುತ್ತಿರುವುದು ವಿವಾದವನ್ನು ದೊಡ್ಡದು ಮಾಡಿದೆ.


ಲಿಂಕ್ ಕೆನಾಲ್ ಯೋಜನೆ ವಿರೋಧಿಸಿ ಕಾಮಗಾರಿ ಸ್ಥಳದಲ್ಲಿ ಸೇರಿದ್ದ ಜನ

‘ನಮ್ಮ ಪಾಲಿನ ನೀರಿಗೆ ಬೇರೆಯವರ ಹಂಗ್ಯಾಕೆ’

● ಓದೇಶ ಸಕಲೇಶಪುರ

‘ಹೇಮಾವತಿ ನೀರಿನ ಮೇಲೆ ನಮಗೂ ಹಕ್ಕಿದೆ. ಬರಡು ಭೂಮಿ ಮಾಗಡಿಗೆ ಮುಕ್ಕಾಲು ಟಿಎಂಸಿ ಅಡಿ ನೀರು ಹಂಚಿಕೆಯಾಗಿದೆ. ನಮ್ಮ ಪಾಲಿನ ನೀರು ಪಡೆಯಲು ಬೇರೆಯವರ ಹಂಗ್ಯಾಕೆ? ಜನರ ಬದುಕಿಗೆ ಸಂಬಂಧಿಸಿದ ಇಂತಹ ವಿಷಯದಲ್ಲಿ ಯಾರೂ ತಮ್ಮ ರಾಜಕೀಯದ ಬೇಳೆ ಬೇಯಿಸಿಕೊಳ್ಳಬಾರದು. ನಮ್ಮ ಹಕ್ಕಿನ ನೀರನ್ನು ನಮಗೆ ಬಿಡಲಿ...’

– ವಿವಾದದ ಸ್ವರೂಪ ತಳೆದಿರುವ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ಬಗ್ಗೆ ಬೆಂಗಳೂರು ದಕ್ಷಿಣ (ಹಿಂದಿನ ರಾಮನಗರ) ಜಿಲ್ಲೆಯ ಮಾಗಡಿ ತಾಲ್ಲೂಕಿನ ರೈತ ಲೋಕೇಶ್ ಹೊಸಪಾಳ್ಯ ಅವರ ಕೆಚ್ಚಿನ ನುಡಿಗಳಿವು.

ಯೋಜನೆ ಆರಂಭವಾದಾಗಿನಿಂದ ಬೆಂಗಳೂರು ದಕ್ಷಿಣ ಮತ್ತು ತುಮಕೂರು ಜಿಲ್ಲೆಗಳ ನಡುವೆ ‘ಶೀತಲ ಸಮರ’ ನಡೆಯುತ್ತಲೇ ಇದೆ. ತುಮಕೂರು ಭಾಗದಲ್ಲಿ ಯೋಜನೆಗೆ ದೊಡ್ಡಮಟ್ಟದಲ್ಲಿ ವಿರೋಧ ವ್ಯಕ್ತವಾಗುತ್ತಿದ್ದಂತೆಯೇ ಇತ್ತ ಮಾಗಡಿಯಲ್ಲೂ ಯೋಜನೆ ಪರವಾದ ಹೋರಾಟದ ಕಿಚ್ಚು ಹೊತ್ತಿಕೊಂಡಿದೆ.

83 ಕೆರೆಗೆ ನೀರು: ಕಾವೇರಿ ನ್ಯಾಯಮಂಡಳಿ ಆದೇಶದಂತೆ ತುಮಕೂರಿನ ಹೇಮಾವತಿ ನಾಲಾ ವಲಯಕ್ಕೆ ಒಟ್ಟು 25.31 ಟಿಎಂಸಿ ಅಡಿ ನೀರು ನಿಗದಿಯಾಗಿದೆ. ಅದರಂತೆ ನಾಲಾ ವಲಯದಲ್ಲಿರುವ ಹಾಸನ, ಮಂಡ್ಯ, ತುಮಕೂರು ಹಾಗೂ ರಾಮನಗರ ಜಿಲ್ಲೆಗಳ 14 ತಾಲ್ಲೂಕುಗಳಿಗೆ ನೀರು ಹಂಚಿಕೆಯಾಗಿದೆ. ಈ ಪೈಕಿ ಮಾಗಡಿ ತಾಲ್ಲೂಕಿನ 62 ಕೆರೆಗಳು ಮತ್ತು ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ 21 ಕೆರೆಗಳು ಸೇರಿದಂತೆ ಒಟ್ಟು 83 ಕೆರೆಗಳಿಗೆ ನೀರು ತುಂಬಿಸುವುದು ಯೋಜನೆ ಉದ್ದೇಶವಾಗಿದೆ.

ಹೇಮಾವತಿ ನೀರಿಗಾಗಿ ತಾಲ್ಲೂಕಿನಲ್ಲಿ ಹಿರಿಯ ರಾಜಕಾರಣಿ ದಿವಂಗತ ಟಿ.ಎ. ರಂಗಯ್ಯ ಸೇರಿದಂತೆ ರೈತರು ನಡೆಸಿದ ಹೋರಾಟದ ಫಲವಾಗಿ 83 ಕೆರೆಗಳಿಗೆ ನೀರು ಹರಿಸುವ ₹327 ಕೋಟಿ ಮೊತ್ತದ ‘ಶ್ರೀರಂಗ ಏತ ನೀರಾವರಿ ಯೋಜನೆ’ಗೆ 2016ರಲ್ಲಿ ಕಾವೇರಿ ನೀರಾವರಿ ನಿಗಮ ಚಾಲನೆ ಕೊಟ್ಟಿತ್ತು. ಇದೀಗ, ಕಾಮಗಾರಿ ಪ್ರಗತಿಯಲ್ಲಿದ್ದು, ದಶಕಗಳ ಕನಸು ನನಸಾಗುವ ದಿನಗಳು ಸಮೀಪಿಸುತ್ತಿವೆ. ಶ್ರೀರಂಗ ಕೆರೆ ತುಂಬಿಸುವ ಯೋಜನೆಗೆ ನೀರನ್ನು ಖಾತರಿ ಪಡಿಸುವ ಸಲುವಾಗಿ ಹೇಮಾವತಿ ಲಿಂಕ್ ಕೆನಾಲ್ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳುತ್ತದೆ ಕಾವೇರಿ ನೀರಾವರಿ ನಿಗಮ.

‘ಯೋಜನೆಗೆ ಮರುಜೀವ ಸಿಗುತ್ತಿದ್ದಂತೆಯೇ ತುಮಕೂರು ಭಾಗದಲ್ಲಿ ವಿರೋಧ ವ್ಯಕ್ತವಾಯಿತು. ಒಂದೆಡೆ ಶ್ರೀರಂಗ ಯೋಜನೆ ಪೂರ್ಣವಾಗುವ ಹಂತದಲ್ಲಿದ್ದರೆ, ಮತ್ತೊಂದೆಡೆ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕಡಪ ಬಳಿಯ ಡಿ.ರಾಂಪುರ ಸಮೀಪ ಲಿಂಕ್ ಕೆನಾಲ್ ಕಾಮಗಾರಿ ಶುರುವಾಯಿತು. ನಮಗೆ ಹಂಚಿಕೆಯಾಗಿರುವ ನೀರೇ ಪೂರ್ಣ ಪ್ರಮಾಣದಲ್ಲಿ ತಲುಪುತ್ತಿಲ್ಲ. ಹೀಗಿರುವಾಗ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ಮೂಲಕ, ನಮ್ಮ ಪಾಲಿನ ನೀರನ್ನೇ ಮಾಗಡಿಗೆ ತೆಗೆದುಕೊಂಡು ಹೋಗಲು ಮುಂದಾಗಿದ್ದಾರೆ ಎಂದು ಅಲ್ಲಿನವರು ಹೇಳುತ್ತಿದ್ದಾರೆ. ಆದರೆ, ಇದು ಸುಳ್ಳು. ನಾವು ನಮ್ಮ ಪಾಲಿನ ನೀರನ್ನಷ್ಟೇ ಕೇಳುತ್ತಿದ್ದೇವೆ’ ಎಂದು ಲೋಕೇಶ್ ಹೊಸಪಾಳ್ಯ ಹೇಳಿದರು.

ಪಕ್ಷಾತೀತ ಬೆಂಬಲ: ಯೋಜನೆಗೆ ಮಾಗಡಿಯಲ್ಲಿ ಪಕ್ಷಾತೀತ ಬೆಂಬಲ ವ್ಯಕ್ತವಾಗಿದೆ. ‘ನಮ್ಮ ನೀರು, ನಮ್ಮ ಹಕ್ಕು’ ಘೋಷಣೆಯಡಿ ಜೂನ್ 5ರಂದು ಮರೂರು ಹ್ಯಾಂಡ್ ಪೋಸ್ಟ್‌ನಲ್ಲಿ ರಸ್ತೆ ತಡೆ ಹೋರಾಟ ಹಮ್ಮಿಕೊಂಡಿದ್ದ ಸ್ಥಳೀಯ ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ, ‘ತಾಲ್ಲೂಕಿನಲ್ಲಿ ರೈತರು ಜೀವಂತವಿದ್ದರೆ ಹೋರಾಟದಲ್ಲಿ ಭಾಗವಹಿಸಿ’ ಎಂದು ಕರೆ ಕೊಟ್ಟಿದ್ದಾರೆ. ಮಾಜಿ ಶಾಸಕ ಎಚ್.ಎಂ.ರೇವಣ್ಣ, ಜೆಡಿಎಸ್ ಮಾಜಿ ಶಾಸಕ ಎ. ಮಂಜುನಾಥ್ ಸೇರಿದಂತೆ ತಾಲ್ಲೂಕಿನ ಬಿಜೆಪಿ ಮುಖಂಡರು, ರೈತ ಸಂಘ, ಕನ್ನಡಪರ ಸೇರಿದಂತೆ ಹಲವು ಸಂಘಟನೆಗಳು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಹೋರಾಟಕ್ಕೆ ಕೈ ಜೋಡಿಸಿದ್ದಾರೆ. ❖



ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ಮೂಲಕ ಬೆಂಗಳೂರು ದಕ್ಷಿಣ ಜಿಲ್ಲೆಗೆ ನೀರು ಕೊಂಡೊಯ್ಯಲಾಗುತ್ತಿದೆ ಎಂಬುದು ಸುಳ್ಳು. ಜಿಲ್ಲೆಗೆ ಹೇಮಾವತಿ ನೀರಿನ ಅಗತ್ಯವಿಲ್ಲ. ಕುಣಿಗಲ್ ತಾಲ್ಲೂಕಿಗೆ ಹೇಮಾವತಿಯ 3.37 ಟಿಎಂಸಿ ಅಡಿ ನೀರು ಪಾಲು ಸಿಕ್ಕಿದೆ. ಆದರೂ, 10-12 ವರ್ಷಗಳಿಂದ ತಾಲ್ಲೂಕಿಗೆ ತನ್ನ ಪಾಲಿನ ನೀರು ತಲುಪಿಲ್ಲ. ಅಲ್ಲಿನ ಜನರಿಗೆ ಶೇ 92ರಷ್ಟು ನೀರು ನಷ್ಟವಾಗಿದೆ. ಹೀಗಾಗಿ ಯೋಜನೆ ಕೈಗೊಂಡಿದ್ದೇವೆ
ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

‘70 ಕಿ.ಮೀ. ಅಂತರ ತಗ್ಗಲಿದೆ’

ಈ ಯೋಜನೆಯ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿರುವ ನೀರಾವರಿ ಕ್ಷೇತ್ರದ ಪರಿಣತ ಟಿ.ಜಿ.ವೆಂಕಟೇಶ್ ಅವರು, ‘ಹೇಮಾವತಿ ನೀರಿಗಾಗಿ ಗೊರೂರು ಜಲಾಶಯದಿಂದ ಕುಣಿಗಲ್ ತಾಲ್ಲೂಕಿನ ಬೇಗೂರು ಕೆರೆವರೆಗೆ 191 ಕಿ.ಮೀ. ಉದ್ದದ ಕಾಲುವೆ ಇದೆ. ನೀರು ಪೂರೈಸುವ ಜಾಕ್‌ವೆಲ್ ಇರುವುದೂ ಇಲ್ಲೇ. ಆದರೆ, ಇಷ್ಟು ಉದ್ದಕ್ಕೂ ಸರಾಗವಾಗಿ ನೀರು ಬರುತ್ತಿಲ್ಲ. ಹಾಗಾಗಿ, ಕಾಲುವೆಯ 70 ಕಿ.ಮೀ.ನಿಂದ 165 ಕಿ.ಮೀ. ನಡುವೆ 34.5 ಕಿ.ಮೀ. ಉದ್ದದ ಪೈಪ್‌ಲೈನ್ ಕೊಳವೆ ಮಾರ್ಗದಲ್ಲಿ ನೀರು ಪೂರೈಸಲು ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ರೂಪಿಸಿ ಕಾಮಗಾರಿ ನಡೆಸಲಾಗುತ್ತಿದೆ’ ಎಂದರು.

‘ಇದರಿಂದಾಗಿ ನೀರು ಕುಣಿಗಲ್ ತಲುಪುವ ಅಂತರ 70 ಕಿ.ಮೀ. ಕಡಿಮೆಯಾಗುತ್ತದೆ. ಅಲ್ಲದೆ, ಸೋರಿಕೆಯೂ ತಪ್ಪಲಿದೆ. ಅಲ್ಲಿಂದ ಏತ ನೀರಾವರಿ ಮೂಲಕ ಮಾಗಡಿ ಮತ್ತು ಕುಣಿಗಲ್‌ನ 83 ಕೆರೆಗಳಿಗೆ ನೀರು ಹರಿಸಲಾಗುತ್ತದೆ. ಮಾಗಡಿಯಲ್ಲಿ ಮುಖ್ಯವಾಗಿ ಕುಡಿಯುವುದಕ್ಕೆ ಬಳಸಲಾಗುತ್ತದೆ. ಇದಕ್ಕಾಗಿ ಕುಣಿಗಲ್‌ನ ಹಿರೇಕೆರೆ ಬಳಿ ಶ್ರೀರಂಗ ಏತ ನೀರಾವರಿ ಯೋಜನೆ ರೂಪುಗೊಂಡಿದೆ. ಕೃಷ್ಣಾ ಜಲಾನಯನ ಪ್ರದೇಶದ ತಾಲ್ಲೂಕುಗಳಿಗೆ ನೀರು ಕೊಟ್ಟರೂ ಸುಮ್ಮನಿರುವ ತುಮಕೂರಿನವರು ಕಾವೇರಿ ಜಲಾನಯನ ಪ್ರದೇಶವಾದ ಮಾಗಡಿಗೆ ನೀರು ಪೂರೈಸುವ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವುದರಲ್ಲಿ ಯಾವುದೇ ಅರ್ಥವಿಲ್ಲ’ ಎಂದು ಹೇಳಿದರು.


ಇದು ನಮ್ಮ ನೀರು, ನಮ್ಮ ಹಕ್ಕಿನ ವಿಷಯ. ನಮ್ಮ ನೀರಿಗಾಗಿ ಯಾವ ಮಟ್ಟದ ಹೋರಾಟಕ್ಕೂ ಸಿದ್ಧ. ನೀರಿಗಾಗಿ ನಡೆಯುವ ಹೋರಾಟದಲ್ಲಿ ತಾಲ್ಲೂಕಿನ ಸಮಸ್ತರೂ ಭಾಗವಹಿಸಬೇಕು
ಎಚ್.ಸಿ. ಬಾಲಕೃಷ್ಣ, ಮಾಗಡಿ ಶಾಸಕ

ವಿವಾದ ಬಗೆಹರಿಸಲು ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕೂಡಲೇ ಎರಡೂ ಜಿಲ್ಲೆಗಳ ಜನಪ್ರತಿನಿಧಿಗಳು, ರೈತ ಮುಖಂಡರು ಹಾಗೂ ನೀರಾವರಿ ತಜ್ಞರ ಸಭೆ ಕರೆದು ಚರ್ಚಿಸಬೇಕು
ಡಾ.ಸಿ.ಎನ್. ಮಂಜುನಾಥ್, ಸಂಸದ (ಸಿ.ಎಂಗೆ ಬರೆದ ಪತ್ರದಲ್ಲಿ)

ಹಲವು ವರ್ಷಗಳ ಹೋರಾಟದ ಫಲವಾಗಿ ಯೋಜನೆ ಮಂಜೂರಾಗಿ ಕಾಮಗಾರಿಯೂ ಶುರುವಾಗಿದೆ. ಆರಂಭದಲ್ಲಿ ಸುಮ್ಮನಿದ್ದವರು ಈಗ ರಾಜಕೀಯ ಕಾರಣಕ್ಕೆ ವಿರೋಧಿಸುತ್ತಿದ್ದಾರೆ
ಎಚ್.ಎಂ. ರೇವಣ್ಣ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ

ಕುಡಿಯುವುದಕ್ಕಾಗಿ ಹಂಚಿಕೆಯಾಗಿರುವ ನಮ್ಮ ಪಾಲಿನ ನೀರನ್ನು ನಾವು ಪಡೆದೇ ಪಡೆಯುತ್ತೇವೆ. ನಾವು ನಮ್ಮ ಹಕ್ಕಿನ ನೀರು ಕೇಳುತ್ತಿದ್ದೇಯೇ ಹೊರತು, ಬೇರೆಯವರ ಹಕ್ಕಿನ ನೀರನ್ನಲ್ಲ
ಎ.ಮಂಜುನಾಥ್, ಜೆಡಿಎಸ್ ಮಾಜಿ ಶಾಸಕ, ಮಾಗಡಿ

ಪದಬಂಧ 6066 – ವಿದ್ಯಾ ವಿನಯ್



ಎಡದಿಂದ ಬಲಕ್ಕೆ
2.ಕಡ ತಂದು ಖರೀದಿಸಿರುವ ಬಟ್ಟೆ (3)
4. ಕೊನೆಗೆ ದರವಿದ್ದಾಗ ಮಡಿಕೆ ಕಾಣುವುದೇ (3)
5.ಯುವತಿ ಸರಿಸಿದ ಪರದೆ (4)
6. ಇದು ನಕ್ಷತ್ರಗಳ ಗುಂಪು (4)
7. ಹೊಸತನ್ನ ಉಲ್ಟಾ ಮಾಡಿದರೆ ಕಾಡು ಕಂಡೀತು (2)
9.ನಗರದಲ್ಲಿ ಖರೀದಿಸಿದ ಆಭರಣ (2)
13.ತಾಯಿಯ ಮನೆಯ ಕಿಟಕಿ (4)
14.ಜೊತೆಯಲ್ಲಿ ವಾಸಿಸುವುದು (4)
15.ಬನದಲ್ಲಿ ನೀಡಿದ ಮುತ್ತು! (3)
16.ಮುಳ್ಳುಗಳ ನಡುವೆ ಅರಳಿದ ಹೂವು (3)

ಮೇಲಿಂದ ಕೆಳಕ್ಕೆ
1.ನಡುವೆ ಪತ್ರ ಬಂದದಕ್ಕೇ ಈ ತೊಂದರೆ! (4)
2.ಚಪ್ಪಾಳೆಯನ್ನು ಹೀಗೆನ್ನಿ (5)
3.ನಿಯಮಿತವಾಗಿ ಕಾಣಿಸುವ ಹೆಂಗಸು (3)
5.ಒಡೆಯನಿಲ್ಲಿದ್ದಾನೆ (4)
8.ಕಾಡಿನಲ್ಲಿ ವಾಸಮಾಡುವುದು (4)
10.ಆಕಾಶವನ್ನು ಮುಟ್ಟುವಂಥ ಕಟ್ಟಡ (5)
11.ಹೊಸದಾಗಿ ಅಭಿನಯಿಸುತ್ತಿರುವವನು (4)
12.ವಿಶಾಲವಾದ ಕಟ್ಟಡ (3)

6065ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಮಾದ 5.ನಗುಮೊಗ
6.ರಥೋತ್ಸವ 8.ಹಿಜರಿ
11.ರಿಕಾಪು 13.ದಿನಮಣಿ
17.ಗಡಿರುಗಾ 18.ಸುಯೋಗ

ಮೇಲಿಂದ ಕೆಳಕ್ಕೆ:
1.ಪ್ರಯೋಗ 2.ದನಗಾಹಿ
3.ಸಂಗರ 4.ಭೀಬತ್ಸ
7.ವರ್ಣನೆ 9.ರಿಪೇರಿ
10.ವರದಿ 12.ಪುಡಿಗಾಸು
14.ನಲ್ಲುಡಿ 15.ಣಿಗಸ
16.ಪರಾಗ

ಸುಡೊಕು 6450

		4		7	1			3
						6		
5	2		8		9		4	7
		5	4			3		
	6			9			7	
3		7			8	5		9
4	1			8			3	
		2	7		4	9		1
7		9		3			2	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6449 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜೂನ್ 7, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ದ್ವಾದಶಿ ಆಹೋರಾತ್ರ ನಕ್ಷತ್ರ: ಚಿತ್ರಾ ಗಂ.9-40 ಯೋಗ: ವರಿಯಾನ್ ಗಂ. 11-17 ಕರಣ: ಬವ ಗಂ. 18-04, ವೃಷಭ ಮಾಸದ 24 ನೇ ದಿನ. ಮಳೆ ನಕ್ಷತ್ರ : ರೋಹಿಣಿ 4ನೇ ಪಾದ.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-07 ಸೂರ್ಯಾಸ್ತ : 06-52
ಮುಸ್ಲಿಂ ದಿನಾಂಕ : 10 ಜುಲ್‌ಹಿಜಾ
ದಿನ ವಿಶೇಷ : ಈದ್-ಉಜ್-ಜುಹಾ (ಬಕ್ರೀದ್) ,ಅದೃಷ್ಟ ಸಂಖ್ಯೆ : 9, 12

ಮೇಷ: ಕೃಷಿಗೆ ಸಂಬಂಧಿಸಿದ ಆರ್ಥಿಕತೆಯಲ್ಲಿ ಪಡೆದ ಸಾಲವನ್ನು ಹಿಂದಿರುಗಿಸುವ ಶಕ್ತಿ ದೊರಕಲಿದೆ. ಅನೇಕ ಕಾಲದಿಂದ ಕಾಡುತ್ತಿರುವ ದೇಹಬಾಧೆಯನ್ನು ನಿವಾರಿಸಿಕೊಳ್ಳಲು ವೈದ್ಯರನ್ನು ಬದಲಾಯಿಸಿ.

ವೃಷಭ: ಸಮಯದ ಗಡುವಿರುವ ಕೆಲಸಗಳನ್ನು ಕಡೆಯ ತನಕ ಉಳಿಸಿಕೊಳ್ಳುವ ಬದಲು ಮುಗಿಸಿಕೊಳ್ಳಿ. ವೃದ್ಧರಾದ ತಂದೆಯ ಆರೋಗ್ಯವು ಕ್ಷೀಣಿಸಬಹುದು, ಎಚ್ಚರವಹಿಸಿ.

ಮಿಥುನ: ಎಷ್ಟು ಜಾಗರೂಕತೆಯಿಂದ ಕೆಲಸ ಮಾಡಿದರೂ ಮೇಲಿನ ಅಧಿಕಾರಿಗಳ ಹದ್ದಿನಕಣ್ಣಿಗೆ ಕೆಲವು ದೋಷಗಳು ಕಾಣುತ್ತವೆ. ಸ್ನೇಹಿತನಿಗಾದ ವಾಹನ ಅಪಘಾತವು ಖೇದವಾಗಿಸುವುದು.

ಕರ್ಕಾಟಕ: ವ್ಯಕ್ತಿಯನ್ನು ಅವರ ಮೊದಲ ಭೇಟಿಯಲ್ಲಿ ನೋಡಿದ ಸ್ವಭಾವವೆಂದು ತೂಕಹಾಕಿ ತೀರ್ಮಾನಿಸಬೇಡಿ. ಸ್ನೇಹಿತರಲ್ಲಿ ಅನಗತ್ಯ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ಗೌರವದಿಂದ ನೋಡಿ.

ಸಿಂಹ: ನ್ಯಾಯಯುತವಾಗಿ ನಿಷ್ಠೆಯಿಂದ ಕಾರ್ಯ ನಿರ್ವಹಿಸುವ ಯೋಚನೆಯನ್ನು ಮಾಡಿ. ಅಂತರರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಗುರುತಿಸಿಕೊಂಡಿರುವ ಯೋಗಪಟುಗಳಿಗೆ ಉತ್ತಮ ಅವಕಾಶಗಳು ಬರಲಿವೆ.

ಕನ್ಯಾ: ವಿವಿಧ ಕಾರ್ಯಗಳ ಜವಾಬ್ದಾರಿಗಳ ಭಾರ ಬೀಳುವುದರಿಂದ ಕೆಲಸದ ಒತ್ತಡ ಹೆಚ್ಚಿರುವ ಸಾಧ್ಯತೆ ಇರುತ್ತದೆ. ಆಸೆಗಳು ಈಡೇರಿ ಜೀವನದಲ್ಲಿ ನೆಮ್ಮದಿ ಕಾಣಲಿದ್ದೀರಿ.

ತುಲಾ: ಪ್ರಶ್ನಿಸಿಕೊಳ್ಳುವ ಸಮಯ ಎದುರಾಗುವುದು. ಅವಿವೇಕಿಗಳ ನಡುವೆ ವಾದಿಸಲು ಹೋಗಬೇಡಿ. ವಿವೇಕಯುತ ನಡವಳಿಕೆಯು ಪ್ರಯೋಜನಗಳನ್ನು ನೀಡುತ್ತದೆ. ಅಸಹಾಯಕರಿಗೆ ಸಹಾಯ ಮಾಡಿ, ಪುಣ್ಯ ಸಂಪಾದಿಸಬಹುದು.

ವೃಶ್ಚಿಕ: ಪ್ರಯೋಜನ ಪಡೆದ ವ್ಯಕ್ತಿಗಳು ದೂಷಿಸುವರು. ಪರಿಸ್ಥಿತಿ ಭಾವುಕರನ್ನಾಗಿ ಮಾಡಲಿದೆ. ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡುವಿರಿ. ವಾಹನಚಾಲನೆಯಲ್ಲಿ ಮುತುವರ್ಜಿ ವಹಿಸಿ.

ಧನು: ಲೆಕ್ಕಪತ್ರಗಳನ್ನು ಸರಿಯಾಗಿ ಪರಿಶೀಲಿಸಿ ಸಹಿ ಮಾಡಿ. ಆಭರಣವನ್ನು ಕೊಳ್ಳುವ ಬಗ್ಗೆ ಯೋಚಿಸಿ. ಮಕ್ಕಳ ಒತ್ತಾಯಕ್ಕೆ ಮಣಿದು ವಾಹನ ಕೊಳ್ಳುವಿರಿ. ಸಿದ್ಧ ಉಡುಪು ಮಾರಾಟಗಾರರಿಗೆ ವಿಶೇಷ ಲಾಭ .

ಮಕರ: ಎಷ್ಟೇ ಪ್ರಯತ್ನವಿದ್ದರೂ ಮೊದಲನೇ ಬಾರಿ ವಿಘ್ನವೇ ಸಂಭವಿಸಲಿದೆ. ನಂತರ ಗುರಿ ಸಾಧಿಸಬೇಕಿದ್ದಲ್ಲಿ ಜನರೊಂದಿಗೆ ಹೆಚ್ಚಿನ ಸಂಪರ್ಕ ಬೆಳೆಸಿಕೊಳ್ಳುವುದು ಉತ್ತಮ. ಅಗ್ನಿಯಿಂದ ಅಪಾಯವಾಗುವ ಭೀತಿ ಇದೆ. ಜಾಗ್ರತೆವಹಿಸಿ.

ಕುಂಭ: ಹವ್ಯಾಸಿ ಕಲಾವಿದರಾದ ನೀವು ಕತೆ, ಕವನಗಳ ಬರವಣಿಗೆಯಲ್ಲಿ ಸಮಯ ಕಳೆಯುವಿರಿ. ಉನ್ನತ ಅಧಿಕಾರಿಗಳ ಮೇಲೆ ಇದ್ದ ತಪ್ಪು ತಿಳಿವಳಿಕೆಗಳು ದೂರಾಗಲಿವೆ. ಪ್ರಶಸ್ತಿ ಗೆಲ್ಲುವಂಥ ಚಿತ್ರ ಸೆರೆಹಿಡಿಯುವ ಅವಕಾಶ ಸಿಗಲಿದೆ.

ಮೀನ: ಧನಾಗಮನಕ್ಕೆ ಹಲವು ರೀತಿಯ ಅವಕಾಶಗಳು ಇದ್ದರೂ ಪರಿಶ್ರಮ, ಆತ್ಮವಿಶ್ವಾಸದ ಅಗತ್ಯವಿರುತ್ತದೆ. ಸಹಾಯಕರಲ್ಲಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮವೆಂದು ಅನಿಸಲಿದೆ.

ಸಂಕ್ಷಿಪ್ತ ಸುದ್ದಿ

ಎಚ್‌ಎಂಟಿ ಪುನಶ್ಚೇತನ ಖಚಿತ: ಎಚ್‌ಡಿಕೆ



ಬೆಂಗಳೂರು: 'ನಾನು ಎಚ್‌ಎಂಟಿಯನ್ನು ಪುನಶ್ಚೇತನ ಮಾಡಬೇಕು ಎಂದು ಪ್ರಯತ್ನಿಸುತ್ತಿದ್ದರೆ, ಅದಕ್ಕೆ ರಾಜ್ಯ ಸರ್ಕಾರದ ಹಲವರು ಅಡ್ಡಿ ಮಾಡುತ್ತಿದ್ದಾರೆ. ಅವರು ಎಷ್ಟೇ ಅಡ್ಡಿ ಮಾಡಿದರೂ ಎಚ್‌ಎಂಟಿಯನ್ನು ಪುನಶ್ಚೇತನ ಮಾಡಿಯೇ ಮಾಡುತ್ತೇನೆ' ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಚ್‌ಎಂಟಿ ಜಮೀನು ಉಳಿಸಲು ಕ್ರಮ ತೆಗೆದುಕೊಂಡಿದ್ದ ಐಎಫ್‌ಎಸ್ ಅಧಿಕಾರಿಯನ್ನು ರಾಜ್ಯ ಸರ್ಕಾರ, ಅರಣ್ಯ ಇಲಾಖೆ ಅಮಾನತು ಮಾಡಿದೆ. ಆದರೆ ಯಾವುದಕ್ಕೂ ನಾನು ಸೊಪ್ಪು ಹಾಕುವುದಿಲ್ಲ' ಎಂದರು.

'ರಾಜ್ಯ ಸರ್ಕಾರದ ಕೆಲ ನಾಯಕರ ಬಗ್ಗೆ ನನಗೆ ಅಸೂಯೆ ಎಂದು ಕೆಲವರು ಮಾತನಾಡಿಕೊಳ್ಳುತ್ತಾರೆ. ನರೇಂದ್ರ ಮೋದಿ ಅವರು ಕರೆದು ನನಗೆ ಕೇಂದ್ರ ಸರ್ಕಾರದ ಎರಡು ಪ್ರಮುಖ ಖಾತೆಗಳನ್ನು ನೀಡಿದ್ದಾರೆ. ಎರಡೂ ಖಾತೆಗಳನ್ನು ಚೆನ್ನಾಗಿ ನಿರ್ವಹಿಸುತ್ತಿದ್ದೇನೆ. ರಾಜ್ಯಕ್ಕಾಗಿಯೂ ಕೆಲಸ ಮಾಡುತ್ತಿದ್ದೇನೆ' ಎಂದರು.


ಉತ್ತರೋತ್ತಮ ಉತ್ಸವ 14ಕ್ಕೆ

ಬೆಂಗಳೂರು: ಹೋಟೆಲ್ ನಳಪಾಕ, ವಂದೇ ಕರ್ನಾಟಕ ಹಾಗೂ ಹುಬ್ಬಳ್ಳಿಯ ಗುರು ಇನ್‌ಸ್ಟಿಟ್ಯೂಟ್ ಜಂಟಿಯಾಗಿ ಇದೇ 14ರಂದು ಬೆಳಿಗ್ಗೆ 10ಗಂಟೆಗೆ ಕೋಣನಕುಂಟೆಯ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ 'ಉತ್ತರೋತ್ತಮ ಉತ್ಸವ' ಏರ್ಪಡಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಸಾಂಸ್ಕೃತಿಕ ಉತ್ಸವದಲ್ಲಿ ಐಶ್ವರ್ಯ ದೇಸಾಯಿ ಅವರಿಂದ ಹಿಂದೂಸ್ತಾನಿ ಗಾಯನ, ಸಂಗೀತ ಕಟ್ಟಿ ಕುಲಕರ್ಣಿ ಅವರಿಂದ ಸಂಗೀತ ವೈವಿಧ್ಯ ಕಾರ್ಯಕ್ರಮ ನಡೆಯಲಿದೆ. ಗುರುಬಲ ಎಂಟರ್ಟೈನರ್ಸ್ ಅವರಿಂದ 'ಅಮರ ಮಧುರ ಪ್ರೇಮ' ನಾಟಕ, ಗುರು ಇನ್‌ಸ್ಟಿಟ್ಯೂಟ್‌ನಿಂದ 'ರಾಶಿಚಕ್ರ' ಏಕವ್ಯಕ್ತಿ ಹಾಸ್ಯ ರಂಗಪ್ರಯೋಗ, ಸ್ಫೂರ್ತಿ ಜೋಶಿ ಅವರಿಂದ ಕಥಕ್ ನೃತ್ಯ ಹಮ್ಮಿಕೊಳ್ಳಲಾಗಿದೆ. ಉತ್ತರ ಕರ್ನಾಟಕದ ರೊಟ್ಟಿ ಊಟ ಇರಲಿದೆ.

ಟಿಕೆಟ್‌ಗಳು ಬುಕ್ ಮೈ ಶೊದಲ್ಲಿ ಲಭ್ಯ. ವಿವರಕ್ಕೆ 9483872385ಕ್ಕೆ ಸಂಪರ್ಕಿಸಿ.

ರಾಜಶೇಖರಪ್ಪ ನೇಮಕ



ಕೆ.ಎಸ್. ರಾಜಶೇಖರಪ್ಪ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ಎಂಜಿನಿಯರಿಂಗ್ ಮಹಾ ವಿದ್ಯಾಲಯದ ವಿಶೇಷಾಧಿಕಾರಿಯಾಗಿ ಕೆ.ಎಸ್. ರಾಜಶೇಖರಪ್ಪ ನೇಮಕಗೊಂಡಿದ್ದಾರೆ.

ಚಿತ್ರದುರ್ಗ ಹಿರಿಯೂರು ತಾಲ್ಲೂಕಿನ ಖಂಡೇನಹಳ್ಳಿ ಯವರಾದ ರಾಜಶೇಖರಪ್ಪ, ಬೆಂಗಳೂರು ಕೃಷಿ ವಿ.ವಿಯಲ್ಲಿ 33 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕೃಷಿ ವಿ.ವಿ ಶಿಕ್ಷಕರ ಸಂಘ ಪ್ರಕಟಣೆ ಯಲ್ಲಿ ತಿಳಿಸಿದೆ.

21ಕ್ಕೆ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆ 'ಪ್ರತಿಭಾ ವೇದಿಕೆ ಸೀಸನ್ 5'ರ ಸಂಭ್ರಮದ ನಿಮಿತ್ತ ಜೂನ್ 21ರಂದು ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ರವೀಂದ್ರ ಕಲಾ ಕ್ಷೇತ್ರದಲ್ಲಿ ಏರ್ಪಡಿಸಿದೆ ಎಂದು ಸಂಸ್ಥೆ ಕಾರ್ಯದರ್ಶಿ ವಿನಾಯಕ ಪಾಟೀಲ್ ತಿಳಿಸಿದ್ದಾರೆ.

8 ವರ್ಷ, 12 ವರ್ಷ ಮತ್ತು 18 ವರ್ಷದ ಒಳಗಿನ ಮತ್ತು 18 ವರ್ಷದ ಮೇಲಿನ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ಎಲ್ಲರಿಗೂ ಬಹುಮಾನ ಹಾಗೂ ಪ್ರಮಾಣಪತ್ರ ವಿತರಿಸಲಾಗುವುದು. ವಿಜೇತರಿಗೆ ವಿಶೇಷ ಬಹುಮಾನ ಇರಲಿದೆ ಆಸಕ್ತರು ಹೆಸರು ನೋಂದಾಯಿಸಬಹುದು.

ಸಾಮಾನ್ಯರಲ್ಲಿ ಅಸಾಮಾನ್ಯ ಕಲಾವಿದರು, ಬಾಲಪ್ರತಿಭೆಗಳಿಗೆ 'ಕಲಾ ದರ್ಪಣ' ವಾರ್ಷಿಕ ಪ್ರಶಸ್ತಿ, ಹಾಗೂ ಕಲಾ ಸಾಧಕರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮಾಹಿತಿಗಾಗಿ ಮೊಬೈಲ್: 9380671947 ಸಂಪರ್ಕಿಸಬಹುದು.

'ವಿಶ್ವ ಪರಿಸರ ದಿನ' ಆಚರಣೆ • ಬೆಂಗಳೂರು ಕಾರ್ಯಯೋಜನೆ ಕ್ಲಬ್‌ಗಳಿಗೆ ಚಾಲನೆ

ಉಸಿರಿಗಾಗಿ ಪರಿಸರ ಸಂರಕ್ಷಿಸಿ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಸರವನ್ನು ನಾವು ಕೇವಲ ಹಸಿರಿಗಾಗಿ ಅಲ್ಲ, ನಮ್ಮ ಉಸಿರಿಗಾಗಿ ಸಂರಕ್ಷಣೆ ಮಾಡಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಬಿಎಂಪಿ ಏರ್ಪಡಿಸಿದ್ದ 'ವಿಶ್ವ ಪರಿಸರ ದಿನಾಚರಣೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, 'ನೀರು, ಗಾಳಿ, ಮರ, ಪರಿಸರಕ್ಕೆ ಜಾತಿ, ಧರ್ಮವಿಲ್ಲ. ಹಿಂದೆ ಹಳ್ಳಿಗಳಲ್ಲಿ ಮನೆಗಳ ಪಕ್ಕ ಸಣ್ಣ ತೋಟವಾದರೂ ಮಾಡಿಕೊಳ್ಳುತ್ತಿದ್ದೆವು. ನಗರ ಪ್ರದೇಶಗಳಲ್ಲಿ ಜಾಗದ ಕೊರತೆಯಿಂದ ವಿವಿಧ ಸಣ್ಣಪುಟ್ಟ ಗಿಡಗಳನ್ನು ಮಾತ್ರ ಬೆಳೆಸಲಾಗುತ್ತಿದೆ' ಎಂದರು.

'ಶಾಲಾ ವಿದ್ಯಾರ್ಥಿಗಳಿಂದ ಗಿಡಗಳನ್ನು ಬೆಳೆಸಲಾಗುತ್ತಿದೆ. ಗಿಡದ ಬಳಿ ಆ ಮಗುವಿನ ಹೆಸರು ಹಾಕಿಕೊಳ್ಳುವ ಅವಕಾಶ ನೀಡುವ ಕಾರ್ಯ ಆರಂಭಿಸಿದೆವು. ಈ ಕಾರ್ಯಕ್ರಮದಡಿ 53 ಸಾವಿರ ಮಕ್ಕಳು ಗಿಡ ನೆಟ್ಟು, ಅವುಗಳನ್ನು ಬೆಳೆಸುತ್ತಿದ್ದಾರೆ' ಎಂದು ಹೇಳಿದರು.

'ಬೆಂಗಳೂರು ಹವಾಮಾನ ಕ್ರಿಯಾ ಕೋಶ (ಬೆಂಗಳೂರು ಕಾರ್ಯಯೋಜನೆ ಕ್ಲಬ್) ಆರಂಭಿಸಿದ್ದು, ಕನಿಷ್ಠ 25 ಸದಸ್ಯರಿರುತ್ತಾರೆ. ನಗರದಲ್ಲಿ ಸುಮಾರು ಏಳು ಸಾವಿರ ಶಾಲೆಗಳಿವೆ. ಉದ್ಯಾನನಗರಿ ಹೆಸರನ್ನು ಉಳಿಸಿಕೊಂಡು ಹೋಗಬೇಕು. ಈ ಜವಾಬ್ದಾರಿಯನ್ನು ಮುಂದಿನ ಪೀಳಿಗೆಗೆ ನೀಡಬೇಕು ಎಂದು ಈ ಕಾರ್ಯಕ್ರಮ ರೂಪಿಸಲಾಗಿದೆ' ಎಂದು ಹೇಳಿದರು.

'ಬೆಂಗಳೂರಿನ ಶಾಲೆಯಲ್ಲಿ ಕಾರ್ಯಕ್ರಮ ಮಾಡಿದರೆ ಅವುಗಳನ್ನು ಮಕ್ಕಳೇ ನಡೆಸಬೇಕು ಎಂದು ಹೇಳಿದ್ದೇನೆ. ಈ ಕಾರ್ಯಕ್ರಮವನ್ನು ಮಕ್ಕಳೇ ನಡೆಸುತ್ತಿದ್ದಾರೆ. ಆ ಮೂಲಕ ಅವರಲ್ಲಿ ನಾಯಕತ್ವ ಗುಣಬೆಳೆಸಬೇಕು' ಎಂದು ಹೇಳಿದರು.

ಪ್ರತಿಜ್ಞಾ ವಿಧಿ: ಹವಾಮಾನ ಜಾಗೃತಿ ಮೂಡಿಸಿ ಮತ್ತು ಶಿಕ್ಷಣ ಸಂಸ್ಥೆಗಳ ಮೂಲಕ ಕ್ರಿಯಾತ್ಮಕ ಯೋಜನೆಗಳನ್ನು ರೂಪಿಸಲು ಪ್ರೌಢಶಾಲೆಗಳು, ಪಿಯು ಕಾಲೇಜುಗಳಲ್ಲಿ ಯುವಜನರ ನೇತೃತ್ವದ 706 ಹವಾಮಾನ ಕ್ರಿಯಾ ಕ್ಲಬ್ ಪ್ರಾರಂಭಿಸಲಾಗಿದೆ. ಕ್ಲಬ್‌ಗಳ ವಿದ್ಯಾರ್ಥಿಗಳು ಪರಿಸರ-ಪ್ರಜ್ಞೆಯ ಅಭ್ಯಾಸಗಳಿಗೆ ಬದ್ಧರಾಗಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಹವಾಮಾನ ಪ್ರತಿಜ್ಞಾ ವಿಧಿ' ಬೋಧಿಸಿದರು.

ಮರಗಣತಿಯ ವಿಡಿಯೊ, ಅರಣ್ಯ ಕೈಪಿಡಿ, ಮಹದೇವಪುರ ವಲಯದಲ್ಲಿ ಮ್ಯಾಪಥಾನ್ 2.0, ನೀರು, ಹಸಿರು ಮೂಲಸೌಕರ್ಯ ಜಾಲ ಸಾರಾಂಶ ದಾಖಲೆ, ಕೆರೆಗಳಿಗೆ ಎನ್‌ಬಿಎಸ್ ಟೂಲ್‌ಕಿಟ್, ಬಿಕ್ಯಾಪ್ ಕಾರ್ಯ ನಿರ್ವಹಣೆ ಸಾರಾಂಶದ ಕೈಪಿಡಿ ಬಿಡುಗಡೆ ಮಾಡಲಾಯಿತು.

ಬಿಬಿಎಂಪಿ ಹಾಗೂ ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಷನ್ ಜೊತೆ ಒಪ್ಪಂದವಾಗಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಹಸಿರೀಕರಣ, ಮೈಕ್ರೋ ಮಿನಿ ಫಾರೆಸ್ಟ್ ನಿರ್ಮಾಣ ಗುರಿಯಿದೆ.



ಡಿ.ಕೆ. ಶಿವಕುಮಾರ್ ಅವರು ವಿದ್ಯಾರ್ಥಿಗಳೊಂದಿಗೆ ಗಿಡಕ್ಕೆ ನೀರು ಹಾಕಿ ವಿಶ್ವ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು

ತ್ಯಾಜ್ಯ: ದೂರಿಗೆ ಪ್ರತ್ಯೇಕ ವಾಟ್ಸ್ ಆ್ಯಪ್

ನಗರದ ಸ್ವಚ್ಛತೆ ದೃಷ್ಟಿಯಿಂದ ಬಿಬಿಎಂಪಿ ಪ್ರತ್ಯೇಕ ದೂರು ಕೇಂದ್ರ ಸ್ಥಾಪಿಸಿದ್ದು, '94481 97197' ವಾಟ್ಸ್ ಆ್ಯಪ್‌ಗೆ ಚಾಲನೆ ನೀಡಲಾಯಿತು.

'ಸಾರ್ವಜನಿಕರು ಕಸ ಇರುವ ಸ್ಥಳಗಳ ಫೋಟೊ, ವಿಡಿಯೊ ಮಾಡಿ ಆ ಸ್ಥಳದ ಲೊಕೇಶನ್ ಕಳುಹಿಸಿದರೆ ಪಾಲಿಕೆ ಸಿಬ್ಬಂದಿ ಸ್ವಚ್ಛ ಮಾಡುವರು. ಪೌರ ಕಾರ್ಮಿಕರು ಈ ಕಾರ್ಯದಲ್ಲಿ ಭಾಗಿಯಾಗಲಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

1 ಲಕ್ಷ ಸಸಿ ನೆಡುವ ಗುರಿ: 2025-26ನೇ ಸಾಲಿನಲ್ಲಿ ಒಂದು ಲಕ್ಷ ಸಸಿಗಳನ್ನು ನಗರ ವ್ಯಾಪ್ತಿಯಲ್ಲಿ ಬೆಳೆಸಿ ನಿರ್ವಹಣೆ ಮಾಡುವ ಗುರಿ ಇದೆ. ಸಸಿಗಳನ್ನು ಬೆಳೆಸಲು ನಗರದಲ್ಲಿ ಸಾರ್ವಜನಿಕರಿಗೆ ವಿತರಿಸಲಾಗುವುದು ಎಂದು ಅರಣ್ಯ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದರು.

'ಬ್ಲೂ-ಗ್ರೀನ್' ಪ್ರಶಸ್ತಿ ಪುರಸ್ಕೃತರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಸರ ಸಂಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿರುವ ಸಂಸ್ಥೆಗಳಿಗೆ ಬ್ಲೂ-ಗ್ರೀನ್ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿಗೆ 175 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು.

ಪುರಸ್ಕೃತರ ವಿವರ

- **ಇಂಧನ ಮತ್ತು ಸಾರಿಗೆ ವಿಭಾಗ:** ಬಿಎಂಟಿಸಿ.
- **ಘನತ್ಯಾಜ್ಯ ವಿಭಾಗ:** ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಚೇರಿ.
- **ಇಂಧನ ಮತ್ತು ಕಟ್ಟಡಗಳು, ನೀರು, ತ್ಯಾಜ್ಯನೀರು ಮತ್ತು ಮಳೆನೀರು ವಿಭಾಗ:** ಕ್ಲಾಸಿಕ್ ಆರ್ಚರ್ಡ್ಸ್ ಪ್ರಾಪರ್ಟಿ ಮಾಲೀಕರ ಸಂಘ.
- **ನೀರು, ತ್ಯಾಜ್ಯ ನೀರು ಮತ್ತು ಮಳೆನೀರು ವಿಭಾಗ:** ಸೆಂಚುರಿ ಸಾರಸ್ ಅಪಾರ್ಟ್‌ಮೆಂಟ್ ಮಾಲೀಕರ ಸಂಘ
- **ನೀರು, ತ್ಯಾಜ್ಯ, ವಿಪತ್ತು ನಿರ್ವಹಣೆ ವಿಭಾಗ:** ಹಸಿರು ದಳ
- **ನಗರ ಯೋಜನೆ, ಹಸಿರೀಕರಣ ಮತ್ತು ಜೀವವೈವಿಧ್ಯ ವಿಭಾಗ:** ಸೆನ್ಸಿಂಗ್ ಲೋಕಲ್
- **ಇಂಧನ ಮತ್ತು ಕಟ್ಟಡಗಳು, ಘನತ್ಯಾಜ್ಯ, ನೀರು, ತ್ಯಾಜ್ಯನೀರು ಮತ್ತು ಮಳೆನೀರು ವಿಭಾಗ:** ರಾಗಿ ಕಣ
- **ಸಾರಿಗೆ ವಿಭಾಗ:** ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್ (ಇಂಡಿಯಾ) ಮತ್ತು ಟೊಮ್ಮೊಕ್
- **ಘನ್ಯಾಜ್ಯ ವಿಭಾಗ:** ಲೆಟ್ಸ್ ಬಿ ದಿ ಚೇಂಜ್, ಹಸಿರುದಳ ಇನೋವೇಷನ್ಸ್, ಎಚ್‌ಎಸ್‌ಆರ್ ಸಿಟಿಜನ್ ಫೋರಂ, ಸ್ಮಾರ್ಟ್ ರೀಫಿಲ್,ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ದಿ ಇಂಡಿಯನ್ ಫ್ಲಾಗರ್ಸ್ ಆರ್ಮಿ.

ಸುದ್ದಿ 2 ನಿಮಿಷ

ಮಾನಸಿಕ ಅಸ್ವಸ್ಥರಿಗೆ ಆರೈಕೆ ಕೇಂದ್ರ

ಬೆಂಗಳೂರು: ಮಾನಸಿಕ ಅಸ್ವಸ್ಥರ ಆರೈಕೆಗೆ ಸಂಬಂಧಿಸಿದಂತೆ ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಎಲ್ಲ ಜಿಲ್ಲೆಗಳಲ್ಲಿ ಆರೈಕೆ ಕೇಂದ್ರಗಳನ್ನು ಸ್ಥಾಪಿಸುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಚಿತ್ರದುರ್ಗ, ಯಾದಗಿರಿ, ಕೋಲಾರ ಮತ್ತು ಬೀದರ್ ಜಿಲ್ಲೆಯಲ್ಲಿ ಆಲದಮರ ಫೌಂಡೇಷನ್ ವತಿಯಿಂದ, ಉಳಿದ 27 ಜಿಲ್ಲೆಗಳಲ್ಲಿ ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಆರೈಕೆ ಕೇಂದ್ರಗಳನ್ನು ನಿರ್ಮಿಸಬೇಕು. ಈ ಕೇಂದ್ರಗಳ ನಿರ್ಮಾಣಕ್ಕೆ ₹6 ಕೋಟಿ ಅನುದಾನಕ್ಕೆ ಅನುಮೋದನೆ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮಾನಸಿಕ ಆರೋಗ್ಯ ಕಾಯ್ದೆ 2017ರ ಪ್ರಕಾರ, ಬೀದಿಗಳಲ್ಲಿ ಗೊತ್ತು ಗುರಿಯಿಲ್ಲದೆ ಅಲೆದಾಡುತ್ತಿ ರುವ ಜನರನ್ನು ರಕ್ಷಿಸುವುದು ಪೊಲೀಸರ ಕರ್ತವ್ಯ. ಈ ಜನರು ತಮ್ಮ ಮಾನಸಿಕ ಸ್ಥಿತಿಯಿಂದಾಗಿ ಸ್ವಯಂ ಅಥವಾ ಇತರರಿಗೆ ಹಾನಿ ಮಾಡುವ, ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ಸಮುದಾಯದವರಿಗೆ ಮಾನವ ಹಕ್ಕುಸ್ನೇಹಿ ಆರೈಕೆ, ಬೆಂಬಲ, ಮೌಲ್ಯಮಾಪನ, ಚಿಕಿತ್ಸೆಯನ್ನು ಪ್ರಾರಂಭಿಸುವುದು ಅತ್ಯವಶ್ಯಕ ಎಂದು ಹೇಳಲಾಗಿದೆ.

ಮಾನಸಿಕ ಆರೋಗ್ಯ ಸೇವೆ ಪಡೆಯುವ ಸವಾಲುಗಳಿಂದ ಪ್ರತಿ ವರ್ಷ ಸಾವಿರಾರು ಮಾನಸಿಕ ಅಸ್ವಸ್ಥರು ಮನೆಗಳಿಂದ ಹೊರಹೋಗಿ, ನಿರಾಶ್ರಿತರಾಗುತ್ತಿದ್ದಾರೆ. ಅವರಿಗೆ ಬೀದಿಗಳು ಅಸುರಕ್ಷಿತ ಸ್ಥಳಗಳಾಗಿವೆ. ಆದ್ದರಿಂದ ನಿರಾಶ್ರಿತರಲ್ಲಿ ಮಾನಸಿಕ ಅಸ್ವಸ್ಥ ವ್ಯಕ್ತಿಗಳನ್ನು ಗುರುತಿಸಿ, ಅವರನ್ನು ಸುರಕ್ಷಿತ ಸ್ಥಳಕ್ಕೆ ತಲುಪಿಸಬೇಕು ಎಂದು ತಿಳಿಸಲಾಗಿದೆ.

ಮಾನಸಿಕ ಅಸ್ವಸ್ಥ ನಿರಾಶ್ರಿತ ವ್ಯಕ್ತಿಗಳ ಅಗತ್ಯಗಳನ್ನು ಪೂರೈಸಲು ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರ ಅತ್ಯಗತ್ಯ. ಅರ್ಹ ಮತ್ತು ಅನುಭವಿ ಸರ್ಕಾರೇತರ ಸಂಸ್ಥೆಗಳನ್ನು ಜಿಲ್ಲಾಧಿಕಾರಿಗಳು ಗುರುತಿಸಿ, ಕೇಂದ್ರ ನಿರ್ಮಾಣಕ್ಕೆ ಕ್ರಮಕೈಗೊಳ್ಳಬೇಕು ಎಂದು ಆದೇಶದಲ್ಲಿ ಹೇಳಲಾಗಿದೆ.

ಹಿಂದೂ ಸಂಪ್ರದಾಯದಂತೆ ಮುಸ್ಲಿಮರಿಂದ ಎತ್ತಿನ ಅಂತ್ಯಕ್ರಿಯೆ



ಚಿಕ್ಕೋಡಿ: ಇಲ್ಲಿನ ಹಾಲಟ್ಟಿ ಬಡಾವಣೆಯ ರೈತ ತಾಜುದ್ದೀನ್ ಜಾಡವಾಲೆ ಅವರ 'ಹನುಮ' ಎಂಬ ಎತ್ತು ಶುಕ್ರವಾರ ಮೃತಪಟ್ಟಿದ್ದು, ಅದಕ್ಕೆ ಗೌರವಪೂರ್ವಕವಾಗಿ ಹಿಂದೂ ಸಂಪ್ರದಾಯದಂತೆ ಸಕಲ ವಿಧಿ-ವಿಧಾನ ಅನುಸರಿಸಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

22 ವರ್ಷಗಳ ಹಿಂದೆ ಮಹಾರಾಷ್ಟ್ರದ ಕರಸುಂಡಿ ಗ್ರಾಮದಿಂದ ತಾಜುದ್ದೀನ್ ಅವರು ಎರಡು ಹೋರಿ ಕರುಗಳನ್ನು ಖರೀದಿಸಿದ್ದರು. ಒಂದಕ್ಕೆ ರಾಜಾ, ಇನ್ನೊಂದಕ್ಕೆ ಹನುಮ ಎಂದು ಹೆಸರಿಟ್ಟಿದ್ದರು. ಅವುಗಳ ನೆರವಿನಿಂದ ಐದೂವರೆ ಎಕರೆ ಜಮೀನಿನಲ್ಲಿ ಕೃಷಿ ಮಾಡುತ್ತಿದ್ದರು.

2022ರ ಸೆಪ್ಟೆಂಬರ್‌ನಲ್ಲಿ ಕ್ಯಾನ್ಸರ್‌ನಿಂದ ಮೃತಪಟ್ಟ ರಾಜಾ ಎತ್ತಿಗೂ ಹಿಂದೂ ಸಂಪ್ರದಾಯದಂತೆ ತಮ್ಮ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಿದ್ದರು. ಈಗ ಸಾವನ್ನಪ್ಪಿದ ಹನುಮ ಎತ್ತಿಗೂ ರಾಜಾ ಪಕ್ಕದಲ್ಲೇ ಮಣ್ಣು ಮಾಡಿದರು.

ಮಕ್ಕಳಂತೆ ಸಾಕಿದ್ದ ಪ್ರೀತಿಯ ಎತ್ತುಗಳನ್ನು ನೆನೆದು ತಾಜುದ್ದೀನ್ ಅವರ ತಾಯಿ ಲಾಲಬಿ, ಪತ್ನಿ ಮೊಹಬ್ಬತ್, ಮಕ್ಕಳಾದ ತಂಜಿಲಾ, ತನ್ವೀರಾ, ಇಬ್ರಾಹಿಂ ಕಣ್ಣೀರು ಹಾಕಿದರು. ಪೂಜೆ ಸಲ್ಲಿಸಿ, ಆರತಿ ಮಾಡಿ, ನೈವೇದ್ಯ ಇಟ್ಟರು. ಗ್ರಾಮಸ್ಥರು ಇದಕ್ಕೆ ಸಾಕ್ಷಿಯಾದರು.

ಇಂದು ಮಧ್ಯಾಹ್ನ 2 ಗಂಟೆ ನಂತರ ವೆಬ್‌ಸೈಟ್‌ನಲ್ಲಿ ಫಲಿತಾಂಶ ಲಭ್ಯ

ಕಾಮೆಡ್ ಕೆ: ಟಾಪ್ 10ರಲ್ಲಿ ರಾಜ್ಯದ ನಾಲ್ವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಎಂಜಿನಿಯರಿಂಗ್ ಪದವಿ ಕಾಲೇಜುಗಳಲ್ಲಿ ಪ್ರವೇಶಕ್ಕಾಗಿ 'ಕಾಮೆಡ್- ಕೆ' ನಡೆಸಿದ ಪರೀಕ್ಷೆಯ ರ‍್ಯಾಂಕ್ ಪಟ್ಟಿಯು ಶುಕ್ರವಾರ ಬಿಡುಗಡೆಯಾಗಿದೆ. ಅಗ್ರ 10 ರ‍್ಯಾಂಕ್‌ನಲ್ಲಿ ನಾಲ್ಕು ರ‍್ಯಾಂಕ್‌ಗಳು ಕರ್ನಾಟಕದ ವಿದ್ಯಾರ್ಥಿಗಳ ಪಾಲಾಗಿವೆ.

ಮೊದಲ ನೂರು ರ‍್ಯಾಂಕ್‌ಗಳಲ್ಲಿ 55 ರ‍್ಯಾಂಕ್ ಅನ್ನು ಕರ್ನಾಟಕದ ವಿದ್ಯಾರ್ಥಿಗಳು ಪಡೆದಿದ್ದಾರೆ ಎಂದು ಕಾಮೆಡ್ ಕೆ ತಿಳಿಸಿದೆ.

ಮೂಡಬಿದಿರೆಯ ಶಿಶಿರ್ ಶೆಟ್ಟಿ ಪ್ರಥಮ ರ‍್ಯಾಂಕ್ ಗಳಿಸಿದ್ದಾರೆ. ಪಂಜಾಬ್‌ನ ಮೌಲಿಕ್ ಜೈನ್ ಮತ್ತು ಬೆಂಗಳೂರಿನ ವರುಣ್ ಜೆ. ಕುಮಾರ್ ಕ್ರಮವಾಗಿ 2 ಮತ್ತು 3ನೇ ರ‍್ಯಾಂಕ್ ಗಳಿಸಿದ್ದಾರೆ.

ಕರ್ನಾಟಕದ 37,715 ವಿದ್ಯಾರ್ಥಿಗಳು ಸೇರಿ ಒಟ್ಟು 1,13,111 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 11,412 ವಿದ್ಯಾರ್ಥಿಗಳು 90 ರಿಂದ 100 ಪರ್ಸಂಟೈಲ್ ಅಂಕ ಪಡೆದಿದ್ದಾರೆ. ಇವರಲ್ಲಿ 3,330 ವಿದ್ಯಾರ್ಥಿಗಳು ಕರ್ನಾಟಕದವರು ಎಂದು ತಿಳಿಸಿದೆ.

80 ರಿಂದ 90 ಪರ್ಸಂಟೈಲ್ ಅನ್ನು 11,447 ವಿದ್ಯಾರ್ಥಿಗಳು ಗಳಿಸಿದ್ದು ಈ ಪೈಕಿ 3,050 ವಿದ್ಯಾರ್ಥಿಗಳು ಕರ್ನಾಟಕದವರು. 70 ರಿಂದ 80 ಪರ್ಸಂಟೈಲ್ ಅನ್ನು 11723 ವಿದ್ಯಾರ್ಥಿಗಳು ಪಡೆದಿದ್ದು ಈ ಪೈಕಿ 3,297 ಮಂದಿ ಕರ್ನಾಟಕದವರು.

ಕೌನ್ಸೆಲಿಂಗ್ ಅನ್ನು ಆನ್‌ಲೈನ್‌ನಲ್ಲಿ ನಡೆಸಲಾಗುವುದು ಮತ್ತು ಅಭ್ಯರ್ಥಿಗಳು ತಮ್ಮ ಲಾಗಿನ್ ಮೂಲಕ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು ಎಂದು ಕಾಮೆಡ್-ಕೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಅಪ್‌ಲೋಡ್ ಮಾಡಿದ ದಾಖಲೆಗಳನ್ನು ತಜ್ಞರ ಪರಿಶೀಲನಾ ಅಧಿಕಾರಿಗಳ ಸಮಿತಿ ಪರಿಶೀಲಿಸುತ್ತದೆ. ದೇಶಾದ್ಯಂತ 179 ನಗರದ 284 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು.

ಫಲಿತಾಂಶ ಇಂದು ವೆಬ್‌ಸೈಟ್‌ನಲ್ಲಿ ಲಭ್ಯ

'ವಿದ್ಯಾರ್ಥಿಗಳಿಗೆ ಫಲಿತಾಂಶ ಶನಿವಾರ ಮಧ್ಯಾಹ್ನ2 ಗಂಟೆಯ ನಂತರ ಕಾಮೆಡ್-ಕೆ ವೆಬ್ ಸೈಟ್‌ನಲ್ಲಿ ಸಿಗಲಿದೆ. ಉಳಿದಂತೆ ಲಭ್ಯ ಸೀಟ್‌ಗಳು, ಶುಲ್ಕದ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು' ಎಂದು ಕಾಮೆಡ್ ಕೆ ತಿಳಿಸಿದೆ.

ಅರ್ಹ ಅಭ್ಯರ್ಥಿಗಳ ರ‍್ಯಾಂಕ್ ಕಾರ್ಡ್‌ಗಳು ಕಾಮೆಡ್ ಕೆ ವೆಬ್‌ಸೈಟ್‌ನಲ್ಲಿ (www.comedk.org) 'ಅರ್ಜಿದಾರರ ಲಾಗಿನ್'ನಲ್ಲಿ ಅಭ್ಯರ್ಥಿಗಳಿಗೆ ಶನಿವಾರ ಮಧ್ಯಾಹ್ನ 2ಗಂಟೆ ಬಳಿಕ ಲಭ್ಯವಾಗಲಿದೆ.

ಮೊದಲ 10 ರ‍್ಯಾಂಕ್ ವಿಜೇತರು...

1. ಶಿಶಿರ್ ಎಚ್. ಶೆಟ್ಟಿ, ಮೂಡಬಿದಿರೆ
2. ಮೌಲಿಕ್ ಜೈನ್, ಸಂಗ್ರೂರ್, ಪಂಜಾಬ್
3. ವರುಣ್ ಜೆ ಕುಮಾರ್, ಕಲ್ಯಾಣನಗರ, ಬೆಂಗಳೂರು
4. ವೆಣ್ಣಪುಸ ಹರ್ಷವರ್ಧನ್ ರೆಡ್ಡಿ, ಆಂಧ್ರಪ್ರದೇಶ
5. ನಿತೇಶ್ ಆನಂದ್, ಬಿಹಾರ
6. ಎನ್.ಬಿ.ರಿತೇಶ್ ವರ್ಷನ್, ಉತ್ತರ ಪ್ರದೇಶ
7. ಮನೋಜ್ಞ ಶ್ರೀವಿಜಯ್ ಕಲಬುರಗಿ, ಕರ್ನಾಟಕ
8. ಜಿ. ಸಾಯಿಕಿರಣ್, ಕಾಳೇನ ಅಗ್ರಹಾರ, ಬೆಂಗಳೂರು
9. ಅನುರಾಗ್ ಚೌಧರಿ, ಉತ್ತರಪ್ರದೇಶ
10. ಭೂಪತಿ ನಿತಿನ್ ಅಗ್ನಿಹೋತ್ರ, ಆಂಧ್ರಪ್ರದೇಶ

ಮಹಿಳಾ ರೋಗಿ ಮೇಲೆ ಆಸ್ಪತ್ರೆಯಲ್ಲೇ ಅತ್ಯಾಚಾರ: ದೂರು

ಜೈಪುರ (ಪಿಟಿಐ): ರಾಜಸ್ಥಾನದ ಅಲವರ್ ಜಿಲ್ಲೆಯ ಎಂಐಎ ಪ್ರದೇಶದಲ್ಲಿರುವ ಇಎಸ್‌ಐಸಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಬುಧವಾರ ರಾತ್ರಿ 32 ವರ್ಷದ ಮಹಿಳಾ ರೋಗಿಯ ಮೇಲೆ ಸಿಬ್ಬಂದಿಯೇ ಅತ್ಯಾಚಾರವೆಸಗಿರುವ ಕುರಿತು ದೂರು ದಾಖಲಾಗಿದೆ.

'ಪತ್ನಿಗೆ ಜೂನ್ 2ರಂದು ಶಸ್ತ್ರಚಿಕಿತ್ಸೆ ನಡೆದಿದ್ದು, ಐಸಿಯುಗೆ ವರ್ಗಾಯಿಸಲಾಗಿತ್ತು. ಅಲ್ಲಿ ಕಾವಲುಗಾರ ಅವರನ್ನು ಕೊಠಡಿಯಿಂದ ಕರೆದೊಯ್ದಿದ್ದು, ಸಿಬ್ಬಂದಿಯೇ ಅತ್ಯಾಚಾರವೆಸಗಿದ್ದಾರೆ' ಎಂದು ಸಂತ್ರಸ್ತೆಯ ಪತಿ ಪೊಲೀಸರಿಗೆ ದೂರು ನೀಡಿದ್ದಾರೆ.

'ಕೃತ್ಯದ ಮರುದಿನ ಪ್ರಜ್ಞೆ ಬಂದ ಬಳಿಕ ಮಹಿಳೆ ತನ್ನ ಪತಿಗೆ ಈ ಬಗ್ಗೆ ತಿಳಿಸಿದ್ದಾರೆ. ದೂರು ದಾಖಲಿಸಿದ್ದು, ತನಿಖೆ ನಡೆಸಿದೆ' ಎಂದು ಠಾಣಾಧಿಕಾರಿ ಅಜಿತ್ ಬದ್‌ಸಾರಾ ತಿಳಿಸಿದ್ದಾರೆ.

'ಕಾವೇರಿ ಆರತಿ'ಗೆ ರೈತರ ವಿರೋಧ

ಮಂಡ್ಯ: ಕೆ.ಆರ್.ಎಸ್. ಅಣೆಕಟ್ಟೆ ಸುರಕ್ಷತೆಗೆ ಧಕ್ಕೆ ತರುವ ಮತ್ತು ಪರಿಸರ ಮಾಲಿನ್ಯಕ್ಕೆ ಕಾರಣವಾಗುವ 'ಕಾವೇರಿ ಆರತಿ' ಮತ್ತು 'ಅಮ್ಯೂಸ್‌ಮೆಂಟ್ ಪಾರ್ಕ್' ಯೋಜನೆಗಳನ್ನು ವಿರೋಧಿಸಿ ರೈತ ಮುಖಂಡರು ಶುಕ್ರವಾರ ಇಲ್ಲಿ ಒಮ್ಮತದ ನಿರ್ಣಯ ಅಂಗೀಕರಿಸಿದರು.

ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿಯೇ ತೀವ್ರ ವಿರೋಧ ವ್ಯಕ್ತವಾಯಿತು.

'ಕೋಟ್ಯಂತರ ಮೊತ್ತದ ಈ ಯೋಜನೆಗಳ ಬದಲಿಗೆ ಇದೇ ಹಣದಲ್ಲಿ ಉಪ ನಾಲೆಗಳ ದುರಸ್ತಿ ಮತ್ತು ಕೆರೆ-ಕಟ್ಟೆಗಳ ಹೂಳು ತೆಗೆಸಬೇಕು' ಎಂದು ರೈತರು ಒತ್ತಾಯಿಸಿದರು.



ದೊಡ್ಡಾಟ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಹುಬ್ಬಳ್ಳಿಯ ಜಿಕೆ ಕಲಾ ವೇದಿಕೆಯ ಕಲಾವಿದರು ಶುಕ್ರವಾರ ಉತ್ತರ ಕರ್ನಾಟಕದ ವಿಶಿಷ್ಟ ಜನಪದ ಕಲೆ 'ದೊಡ್ಡಾಟ' ಪ್ರದರ್ಶಿಸಿದರು. ಪ್ರಜಾವಾಣಿ ಚಿತ್ರ

'ಪರಾಮರ್ಶನ' ಗ್ರಂಥಾಲಯ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಮಲ್ಲತ್ತಹಳ್ಳಿಯ ಕಲಾ ಗ್ರಾಮದ ತನ್ನ ಕೇಂದ್ರದಲ್ಲಿ ನಿರ್ಮಿಸಿರುವ 'ಪರಾಮರ್ಶನ' ಗ್ರಂಥಾಲಯವನ್ನು ಕಾರ್ಯಾರಂಭಿಸಿದೆ.

ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗ್ರಂಥಾಲಯ ಉದ್ಘಾಟನೆಗೊಂಡಿತು. ಈ ವೇಳೆ ಗ್ರಂಥಾಲಯದ ಬಗ್ಗೆ ಮಾಹಿತಿ ನೀಡಿದ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ, 'ಕನಕ ಸಾಹಿತ್ಯ, ಕೀರ್ತನ ಸಾಹಿತ್ಯ, ತತ್ವಪದ ಸಾಹಿತ್ಯ, ಭಕ್ತಿ ಸಾಹಿತ್ಯ ಮತ್ತು ಸಂತ-ಶರಣರ ಸಾಹಿತ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳು ಗ್ರಂಥಾಲಯದಲ್ಲಿ ಲಭ್ಯ. ಸದ್ಯ ಈ ಕ್ಷೇತ್ರಕ್ಕೆ ಸಂಬಂಧಿಸಿದ 1,500 ಪುಸ್ತಕಗಳನ್ನು ಸಂಗ್ರಹಿಸಲಾಗಿದೆ' ಎಂದು ಹೇಳಿದರು.

'ಗ್ರಂಥಾಲಯವು ಕಚೇರಿ ದಿನಗಳಲ್ಲಿ ಬೆಳಿಗ್ಗೆ 10.30ರಿಂದ ಸಂಜೆ 5 ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ. ಯಾವುದೇ ಶುಲ್ಕ ಇರುವುದಿಲ್ಲ. ಆದರೆ, ಪುಸ್ತಕವನ್ನು ಎರವಲು ನೀಡುವುದಿಲ್ಲ. ನಿಗದಿತ ಪುಟಗಳ ಜೆರಾಕ್ಸ್ ಪ್ರತಿ ಪಡೆಯಲು ಅವಕಾಶವಿದೆ' ಎಂದರು.

'ಪುಸ್ತಕಗಳ ಸಂಗ್ರಹಕಾರ್ಯ ನಿರಂತರ ಪ್ರಕ್ರಿಯೆಯಾಗಿದೆ. ಸಂಸ್ಥೆಗಳು, ವಿದ್ವಾಂಸರು ಹಾಗೂ ಸಾರ್ವಜನಿಕರು ನಿಗದಿತ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳ ಒಂದೊಂದು ಪ್ರತಿ ಒದಗಿಸಿದರೂ ಗ್ರಂಥಾಲಯವನ್ನು ಮತ್ತಷ್ಟು ವಿಸ್ತರಿಸಲು ಸಾಧ್ಯವಾಗುತ್ತದೆ' ಎಂದರು.

ಪ್ರಮುಖರು ಭಾಗಿ: ಗ್ರಂಥಾಲಯದ ಉದ್ಘಾಟನಾ ಕಾರ್ಯಕ್ರಮದಲ್ಲಿn ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎಂ. ಎನ್. ವೆಂಕಟೇಶ್, ನಿರ್ದೇಶಕಿ ಕೆ.ಎಂ.ಗಾಯತ್ರಿ ಹಾಗೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಪಾಲ್ಗೊಂಡಿದ್ದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ.ರವಿ, ಸಾಹಿತ್ಯ ಕ್ಷೇತ್ರದ ಪ್ರಮುಖರಾದ ಅಗ್ರಹಾರ ಕೃಷ್ಣಮೂರ್ತಿ, ಎಲ್. ಹನುಮಂತಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಎಸ್.ಜಿ. ಸಿದ್ಧರಾಮಯ್ಯ, ಬಿ.ಟಿ. ಲಲಿತಾನಾಯಕ್, ಡಾ. ವಸುಂಧರಾ ಭೂಪತಿ, ಎಂ.ಎಸ್. ಆಶಾದೇವಿ, ಶೂದ್ರ ಶ್ರೀನಿವಾಸ್, ಎಸ್. ಆರ್. ವಿಜಯಶಂಕರ, ಜಾಣಗೆರೆ ವೆಂಕಟರಾಮಯ್ಯ ಪಾಲ್ಗೊಂಡಿದ್ದರು.



ಕಾರ್ಯಕ್ರಮದಲ್ಲಿ ಕಾ.ತ. ಚಿಕ್ಕಣ್ಣ ಅವರು ಎಂ.ಎನ್. ವೆಂಕಟೇಶ್ ಅವರ ಜತೆಗೆ ಸಮಾಲೋಚನೆ ನಡೆಸಿದರು. ಎಂ. ಗಾಯತ್ರಿ, ಎಲ್. ಹನುಮಂತಯ್ಯ, ಕೆ.ವಿ. ನಾಗರಾಜಮೂರ್ತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಮನೆಕೆಲಸ ಕಾರ್ಮಿಕರ ಯೂನಿಯನ್‌ಗಳ ಒಕ್ಕೂಟ ಆಗ್ರಹ

'ಮನೆಕೆಲಸದವರನ್ನು ಕಾರ್ಮಿಕರಾಗಿ ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆ ಕೆಲಸದವರಿಗೆ ಜೀವನ ಭದ್ರತೆ ಇಲ್ಲ. ಅವರನ್ನು ಮೊದಲು ಕಾರ್ಮಿಕರು ಎಂದು ಗುರುತಿಸಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಗೃಹ ಕಾರ್ಮಿಕರಿಗಾಗಿ ರಾಷ್ಟ್ರೀಯ ಕಾನೂನು ರೂಪಿಸಬೇಕು' ಎಂದು ಕರ್ನಾಟಕ ರಾಜ್ಯ ಮನೆಕೆಲಸ ಕಾರ್ಮಿಕರ ಯೂನಿಯನ್‌ಗಳ ಒಕ್ಕೂಟ ಆಗ್ರಹಿಸಿದೆ.

ಕಾನೂನು ರೂಪಿಸುವಾಗ ಪ್ರಮುಖ ಅಂಶಗಳನ್ನು ಗಮನಿಸಬೇಕು. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗೆ ನಿಯಮ ರೂಪಿಸಬೇಕು. ಗೃಹ ಕಾರ್ಮಿಕರನ್ನು ಇಎಸ್‌ಐ ವ್ಯಾಪ್ತಿಗೆ ತರಬೇಕು. ಭವಿಷ್ಯನಿಧಿ ಮತ್ತು ಪಿಂಚಣಿ ನೀಡಲು ಕ್ರಮವಹಿಸಬೇಕು ಎಂದು ಒಕ್ಕೂಟದ ಸದಸ್ಯರಾದ ಕರಿಬಸಪ್ಪ ಮತ್ತು ಸಿಸ್ಟರ್ ಸಹಾಯ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಕನಿಷ್ಠ ಕೂಲಿ ಜಾರಿ ಮಾಡಬೇಕು. ಮಾಲೀಕರು ಜಾತಿ ತಾರತಮ್ಯ ಮಾಡುವುದನ್ನು ತಡೆಗಟ್ಟಬೇಕು. ಕಾರ್ಮಿಕರು ಎಂದು ನೋಂದಣಿ ಮಾಡಿಕೊಳ್ಳಬೇಕು ಮತ್ತು ಅವರಿಗೆ ಗುರುತಿನ ಚೀಟಿ ನೀಡಬೇಕು. ವಾರ್ಷಿಕವಾಗಿ ಬೋನಸ್ ನೀಡಬೇಕು. ವಾರದ ರಜೆ ನೀಡಬೇಕು. ವಲಸೆ ಕಾರ್ಮಿಕರನ್ನು ಗುರುತಿಸಬೇಕು. ಅನಾರೋಗ್ಯ ಅಥವಾ ಸಾಂದರ್ಭಿಕ ರಜೆ ಬೇಕಾದ ಸಂದರ್ಭದಲ್ಲಿ ವೇತನ ಸಹಿತ ರಜೆ ನೀಡಬೇಕು ಎಂದು ಒತ್ತಾಯಿಸಿದರು.

ಗೃಹ ಕಾರ್ಮಿಕರಿಗೆ ವೇತನ ಹೆಚ್ಚಳ ಮಾಡಬೇಕು. ದೂರು ಮತ್ತು ಕುಂದುಕೊರತೆ ಪರಿಹಾರ ಕಾರ್ಯವಿಧಾನ ಅಳವಡಿಸಿಕೊಳ್ಳಬೇಕು. ಕಳ್ಳಸಾಗಣೆ ತಡೆಗಟ್ಟಬೇಕು. ನೋಟಿಸ್ ನೀಡದೇ ಕೆಲಸದಿಂದ ತೆಗೆಯಬಾರದು. ಕೆಲಸದಿಂದ ತೆಗೆದರೆ ಪರಿಹಾರ ನೀಡಬೇಕು. ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡಬೇಕು. ಕನಿಷ್ಠ ವಯಸ್ಸು ನಿಗದಿಪಡಿಸಬೇಕು. ಕಾರ್ಮಿಕ ಇಲಾಖೆಯಲ್ಲಿ ಎಲ್ಲ ಮನೆಕೆಲಸದವರ ಮಾಹಿತಿ ಇರಬೇಕು ಎಂದು ಒತ್ತಾಯಿಸಿದರು.

ಮನೆಕೆಲಸದವರಲ್ಲಿ ಶೇ 90ಕ್ಕೂ ಅಧಿಕ ಮಂದಿ ಮಹಿಳೆಯರೇ ಇದ್ದು, ಅವರಿಗೆ ಜೀವನ ಭದ್ರತೆ ನೀಡಲು ಕಾನೂನು ರೂಪಿಸಲು ಸುಪ್ರೀಂಕೋರ್ಟ್ ಇತ್ತೀಚೆಗೆ ಆದೇಶ ನೀಡಿದ್ದು, ಸರ್ಕಾರ ಅದನ್ನು ಪಾಲನೆ ಮಾಡಬೇಕು ಎಂದರು.

ಒಕ್ಕೂಟದ ಸದಸ್ಯರಾದ ಶಶಿಕಲಾ, ಪ್ರೀಯಾ, ಪ್ರೇಮಾ, ರೋಸ್ ಮೇರಿ, ಮಹೇಶ್ ಸುದ್ದಿಗೋಷ್ಠಿಯಲ್ಲಿದ್ದರು.

19ಕ್ಕೆ ಸಂಪುಟ ಸಭೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿ ಗಿರಿಧಾಮದ ಮಯೂರ ಸಭಾಂಗಣದಲ್ಲಿ ಜೂನ್ 19 ರಂದು ಮಧ್ಯಾಹ್ನ 12ಕ್ಕೆ ರಾಜ್ಯ ಸಚಿವ ಸಂಪುಟದ 13ನೇ ಸಭೆ ನಡೆಯಲಿದೆ. 'ಅಗತ್ಯ ಸಿದ್ಧತೆ ಕೈಗೊಳ್ಳಲು ಎಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಶಿವಮೊಗ್ಗ ಡಿಸಿಸಿ ಬ್ಯಾಂಕ್‌ಗೆ ವಂಚನೆ ಪ್ರಕರಣ • ಇ.ಡಿ ಕ್ರಮ

₹13.91 ಕೋಟಿಯ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ



ಮಂಜುನಾಥಗೌಡ

ಬೆಂಗಳೂರು: ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ (ಡಿಸಿಸಿ) ನಕಲಿ ಚಿನ್ನಾಭರಣ ಅಡವಿಟ್ಟು ₹62.77 ಕೋಟಿ ಸಾಲ ಪಡೆದಿದ್ದ ಪ್ರಕರಣದಲ್ಲಿ, ಬ್ಯಾಂಕ್‌ನ ಅಧ್ಯಕ್ಷ ಆರ್. ಎಂ.ಮಂಜುನಾಥ ಗೌಡ ಅವರಿಗೆ ಸೇರಿದ ₹13.91 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಇ.ಡಿ, '2014ರಲ್ಲಿ ಮಂಜುನಾಥಗೌಡ ಅವರು ಬ್ಯಾಂಕ್‌ನ ಅಧ್ಯಕ್ಷರಾಗಿದ್ದಾಗ ಈ ಅಕ್ರಮ ನಡೆದಿತ್ತು. ಅವರ ಆಣತಿಯಂತೆ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕರಾಗಿದ್ದ ಬಿ.ಶೋಭಾ ಅವರು ಎಲ್ಲ ಅಕ್ರಮ ವರ್ಗಾವಣೆಗಳನ್ನು ನಡೆಸಿದ್ದರು' ಎಂದು ತಿಳಿಸಿದೆ.

'ಇದೇ ಏಪ್ರಿಲ್‌ನಲ್ಲಿ ಪ್ರಕರಣದ ಸಂಬಂಧ ಮಂಜುನಾಥಗೌಡ ಅವರ ಮನೆ, ಆಪ್ತರ ಮನೆ ಮತ್ತು ಶಿವಮೊಗ್ಗ ಡಿಸಿಸಿ ಕೇಂದ್ರ ಬ್ಯಾಂಕ್, ನಗರ ಶಾಖಾ ಬ್ಯಾಂಕ್‌ನಲ್ಲಿ ಶೋಧ ಕಾರ್ಯ ನಡೆಸಲಾಗಿತ್ತು. ಅಕ್ರಮದಿಂದ ಗಳಿಸಿದ ಹಣದಿಂದ ಮಂಜುನಾಥಗೌಡ ಅವರು ಹಲವು ಚರಾಸ್ತಿ ಮತ್ತು ಸ್ಥಿರಾಸ್ತಿ ಖರೀದಿಸಿದ್ದಾರೆ ಎಂಬುದನ್ನು ಸೂಚಿಸುವ ಸಾಕ್ಷ್ಯಗಳು ಲಭ್ಯವಾಗಿದ್ದವು' ಎಂದು ತಿಳಿಸಿದೆ.

'ಶೋಧ ಕಾರ್ಯದ ವೇಳೆ ಡಿಜಿಟಲ್ ಸಾಕ್ಷ್ಯಗಳು, 2.50 ಕೆ.ಜಿ. ಚಿನ್ನವನ್ನು ವಶಕ್ಕೆ ಪಡೆಯಲಾಗಿತ್ತು. ಮಂಜುನಾಥ ಅವರ ಪತ್ನಿ ಅವರ ಹೆಸರಿನಲ್ಲಿ ಇರುವ ಆಸ್ತಿಯನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಪ್ರಕರಣದ ಸಂಬಂಧ ತನಿಖೆ ಮುಂದುವರಿದಿದೆ' ಎಂದು ಇ.ಡಿ ತಿಳಿಸಿದೆ.

ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆಗಿರುವ ಮಂಜುನಾಥಗೌಡ ಈಗ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಭೋವಿ ನಿಗಮದ ಪ್ರಕರಣ: ಪ್ರಾಸಿಕ್ಯೂಷನ್ ದೂರು ದಾಖಲು



ನಾಗರಾಜಪ್ಪ

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ₹88.9 ಕೋಟಿ ಅಕ್ರಮ ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ನಿಗಮದ ಹಿಂದಿನ ಪ್ರಧಾನ ವ್ಯವಸ್ಥಾಪಕ ಬಿ.ಕೆ.ನಾಗರಾಜಪ್ಪ ಮತ್ತು ಹಿಂದಿನ ವ್ಯವಸ್ಥಾಪಕ ನಿರ್ದೇಶಕಿ ಆರ್. ಲೀಲಾವತಿ ವಿರುದ್ಧ ಇ.ಡಿಯು ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ ದಲ್ಲಿ ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.

'ಬಿ.ಕೆ.ನಾಗರಾಜಪ್ಪ ಮತ್ತು ಆರ್.ಲೀಲಾವತಿ ಅವರು ತಾವು ಅಧಿಕಾರದಲ್ಲಿದ್ದಾಗ ಫಲಾನುಭವಿಗಳ ಹೆಸರಿನಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ತಮ್ಮ ಆಪ್ತರು ಮತ್ತು ಸಂಬಂಧಿಗಳ ಖಾತೆಗಳಿಗೆ ಕೋಟ್ಯಂತರ ರೂಪಾಯಿ ವರ್ಗಾಯಿಸಿಕೊಂಡಿದ್ದರು' ಎಂದು ನ್ಯಾಯಾಲಯಕ್ಕೆ ವಿವರ ಸಲ್ಲಿಸಿದೆ.

'ನಾಗರಾಜಪ್ಪ ಅವರ ಪಾಲುದಾರಿಕೆ ಇರುವ 'ನ್ಯೂ ಡ್ರೀಮ್ ಎಂಟರ್‌ಪ್ರೈಸಸ್', 'ಆದಿತ್ಯಾ ಕಂಪನಿ', 'ಅನ್ನಿಕಾ ಎಂಟರ್‌ಪ್ರೈಸಸ್', 'ಹರ್ನಿತಾ ಕ್ರಿಯೇಷನ್ಸ್' ಮತ್ತು 'ಸೋಮೇಶ್ವರ ಎಂಟರ್‌ಪ್ರೈಸಸ್' ಎಂಬ ಕಂಪನಿಗಳಿಗೆ ನಿಗಮದ ಹಣವನ್ನು ವರ್ಗಾವಣೆ ಮಾಡಿಕೊಳ್ಳಲಾಗಿದೆ. ಆ ಹಣವನ್ನು ನಾಗರಾಜಪ್ಪ ಮತ್ತು ಇತರರು ಬಳಸಿಕೊಂಡಿದ್ದಾರೆ' ಎಂದು ವಿವರಿಸಿದೆ.

'ಅಕ್ರಮದ ಹಣದಿಂದ ನಾಗರಾಜಪ್ಪ ಚರಾಸ್ತಿ, ಮತ್ತು ಸ್ಥಿರಾಸ್ತಿ ಖರೀದಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ₹27.27 ಕೋಟಿ ಮೌಲ್ಯದ ಸ್ಥಿರಾಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ' ಎಂದು ಇ.ಡಿ ನ್ಯಾಯಾಲಯಕ್ಕೆ ಮಾಹಿತಿ ನೀಡಿದೆ.

ಒಬ್ಬಂಟಿ ಹೋರಾಟ: ಬಾಲ್ಯ ವಿವಾಹ ತಪ್ಪಿಸಿಕೊಂಡ ಬಾಲೆ

ಒಂದನೇ ಪುಟದಿಂದ...

10-15 ಜನ ಹಿಡಿದಿದ್ದರೂ ದಿಟ್ಟತನ ಪ್ರದರ್ಶಿಸಿ ತಾಳಿ ಕಟ್ಟಿಸಿಕೊಳ್ಳುವುದರಿಂದ ಪಾರಾಗಿರುವ ಬಾಲಕಿಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ತಾಳಿ ಕಟ್ಟಿಸುವ ಪ್ರಯತ್ನಕ್ಕೆ ಪ್ರತಿರೋಧ ವ್ಯಕ್ತಪಡಿಸಿದ ಬಾಲಕಿ ಅಳುತ್ತಾ ಮನೆಯಿಂದ ಹೊರಗೆ ಓಡಿ ಬಂದಿದ್ದಳು. ವರ ತಾಳಿಯನ್ನು ಕೈಯಲ್ಲಿ ಹಿಡಿದುಕೊಂಡೇ ಬಾಲಕಿಯನ್ನು ಹಿಂಬಾಲಿಸಿದ್ದ. ಬಾಲಕಿಯ ತಾಯಿ, ಸಂಬಂಧಿಕರು ಆಕೆಯನ್ನು ಹಿಡಿದು ಕೆಳಗೆ ಬೀಳಿಸಿದ್ದರು. ಒಂದು ಹಂತದಲ್ಲಿ ಆಕೆಯ ತಾಯಿ ಬಾಲಕಿಯ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ್ದರು. ಸಂಬಂಧಿಕರೆಲ್ಲರೂ ಬಡಿದಿದ್ದರು. ಬಾಲಕಿಯ ರಕ್ಷಣೆಗೆ ಬಂದ ಅಕ್ಕಪಕ್ಕದ ಮನೆಯವರ ಮೇಲೂ ಮುಗಿಬಿದ್ದಿದ್ದರು. ನೆಲದ ಮೇಲೆ ಬಿದ್ದ ಬಾಲಕಿಗೆ ತಾಳಿ ಕಟ್ಟುವಂತೆ ವರನಿಗೆ ತಾಕೀತು ಮಾಡಿದ್ದರು. ಈ ದೃಶ್ಯಗಳು ವಿಡಿಯೊದಲ್ಲಿವೆ.

ಹಲವರು ಬಿಗಿಯಾಗಿ ಹಿಡಿದಿದ್ದರೂ ಬಾಲಕಿ ಪ್ರತಿರೋಧ ಮುಂದುವರಿಸಿದ್ದಳು. 'ಕಾಪಾಡಿ, ಉಸಿರು ಕಟ್ಟುತ್ತಿದೆ ಪ್ರಾಣ ಉಳಿಸಿ' ಎಂದು ಬೇಡಿದ್ದಳು. ಇಷ್ಟಾದರೂ ಬಿಡದ ಸಂಬಂಧಿಕರು ತಾಳಿ ಕಟ್ಟಿಸಲು ಮುಂದಾಗಿದ್ದರು. ಅರ್ಧ ಗಂಟೆಗೂ ಹೆಚ್ಚು ಹೊತ್ತು ಹೋರಾಟ ಮಾಡುವ ಬಾಲಕಿ ಕಡೆಗೂ ಸಂಭವನೀಯ 'ವಿವಾಹ ಬಂಧನ'ದಿಂದ ಮುಕ್ತವಾಗಿದ್ದಳು. ಗ್ರಾಮದ ಕೆಲವರು ಘಟನೆಯ ವಿಡಿಯೊ ಮಾಡಿಕೊಂಡು ಚಳ್ಳಕೆರೆ ಪೊಲೀಸರಿಗೆ ಕಳುಹಿಸಿದ್ದರು. ಅಂದೇ ಸಂಜೆ ಸ್ಥಳಕ್ಕೆ ಧಾವಿಸಿರುವ ಪೊಲೀಸರು ಬಾಲಕಿಯನ್ನು ರಕ್ಷಿಸಿ ನಗರದ ಬಾಲಮಂದಿರಕ್ಕೆ ಸೇರಿಸಿದ್ದಾರೆ.

'ಓದು ಹಾಗೂ ಕ್ರೀಡಾ ಚಟುವಟಿಕೆ ಗಳಲ್ಲಿ ಮುಂದಿದ್ದ ಬಾಲಕಿಗೆ ಇಷ್ಟು ಬೇಗ ಮದುವೆ ಬೇಕಿರಲಿಲ್ಲ. ಪಾಲಕರು ರಸಹ್ಯವಾಗಿ ಮದುವೆ ಮಾಡಲು ಯೋಜನೆ ರೂಪಿಸಿದ್ದರು. ಇದರ ವಿರುದ್ಧ ಏಕಾಂಗಿಯಾಗಿ ಹೋರಾಡಿದ್ದಾಳೆ' ಎಂದು ಪೊಲೀಸ್ ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಬಾಲ್ಯ ವಿವಾಹ ನಡೆಯದ್ದರಿಂದ ಯಾರ ವಿರುದ್ಧವೂ ಪೊಲೀಸರು ಎಫ್‌ಐಆರ್ ದಾಖಲು ಮಾಡಿಲ್ಲ. ಪಾಲಕರನ್ನು ಠಾಣೆಗೆ ಕರೆಸಿ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ. ಬಾಲಕಿ ಮೇಲೆ ದೈಹಿಕ ಹಲ್ಲೆ ಮಾಡಿರುವ ಕಾರಣ ಪಾಲಕರು, ವರ ಹಾಗೂ ಸಂಬಂಧಿಕರ ವಿರುದ್ಧ ಪ್ರಕರಣ ದಾಖಲು ಮಾಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.



ತ್ಯಾಗ ಬಲಿದಾನಗಳ ಸ್ಮರಣೆಯ ಹಬ್ಬ

● ಮಹಮ್ಮದ್ ನೂಮಾನ್


ಇಂದು ಬಕ್ರೀದ್

ನಾಲ್ಕು ಸಾವಿರ ವರ್ಷಗಳಿಗೂ ಹಿಂದೆ ಜೀವಿಸಿದ್ದ ಪ್ರವಾದಿ ಇಬ್ರಾಹಿಂ ಅವರ ತ್ಯಾಗವನ್ನು ನೆನಪಿಸುವ ಹಬ್ಬವೇ ಬಕ್ರೀದ್ ಅಥವಾ ಈದ್–ಉಲ್–ಅದಾ. ಇಸ್ಲಾಮಿಕ್ ಕ್ಯಾಲೆಂಡರಿನ 'ದುಲ್ ಹಜ್ಜ್' ತಿಂಗಳ 10ರಂದು ಬಕ್ರೀದ್ ಆಚರಿಸಲಾಗುತ್ತದೆ. ಪ್ರವಾದಿ ಇಬ್ರಾಹಿಂ ಅವರು, ಕೊನೆಯ ಪ್ರವಾದಿ ಮುಹಮ್ಮದ್ ಅವರಿಗಿಂತ ಎರಡೂವರೆ ಸಾವಿರ ವರ್ಷಗಳ ಹಿಂದೆ ಹುಟ್ಟಿದ್ದರು.

ಇಬ್ರಾಹಿಂ ಮತ್ತು ಅವರ ಪುತ್ರ ಇಸ್ಮಾಯಿಲ್ ಅವರ ಜೀವನ, ತತ್ವಗಳು, ದೈವನಿಷ್ಠೆ ಮತ್ತು ತ್ಯಾಗದ ಗುಣಗಳೊಂದಿಗೆ ಈ ಹಬ್ಬ ಬೆಸೆದುಕೊಂಡಿದೆ. ಪ್ರವಾದಿಯಾದ ಬಳಿಕ ಇಬ್ರಾಹಿಂ ಅವರು ಧರ್ಮ ಪ್ರಚಾರಕ್ಕಿಳಿಯುತ್ತಾರೆ. ಈ ವೇಳೆ ದೇವರು ಅವರನ್ನು ಹಲವಾರು ಪರೀಕ್ಷೆಗಳಿಗೆ ಒಳಪಡಿಸುತ್ತಾರೆ.

ಸಂತಾನಭಾಗ್ಯ ಇಲ್ಲದೆ ಕೊರಗುತ್ತಿದ್ದ ಇಬ್ರಾಹಿಂ ಮತ್ತು ಹಾಜರಾ ದಂಪತಿಗೆ ವೃದ್ಧಾಪ್ಯದಲ್ಲಿ ಮಗ ಇಸ್ಮಾಯಿಲ್ ಜನಿಸುವರು. ಇಸ್ಮಾಯಿಲ್ ಅವರಿಗೆ 13 ವರ್ಷ ಆಗಿದ್ದಾಗ ಅವರನ್ನು ಬಲಿ ನೀಡುವಂತೆ ದೇವರು ಇಬ್ರಾಹಿಂ ಅವರಿಗೆ ಆಜ್ಞಾಪಿಸುವರು. ಅಲ್ಲಾಹನ ಆದೇಶದಂತೆ ಇಬ್ರಾಹಿಂ, ತಮ್ಮ ಪುತ್ರ ಇಸ್ಮಾಯಿಲ್ ಅವರನ್ನು ಬಲಿಯರ್ಪಿಸಲು ಮುಂದಾಗುವರು. ಮಗನನ್ನು ಬಲಿ ನೀಡಲು ಸಿದ್ಧವಾಗಿದ್ದ ಇಬ್ರಾಹಿಂ ಅವರ ಭಕ್ತಿಯನ್ನು ಅಲ್ಲಾಹನು ಮೆಚ್ಚಿ ಪುತ್ರನ ಬದಲು ಒಂದು ಮೇಕೆಯನ್ನು ಬಲಿ ಅರ್ಪಿಸುವಂತೆ ಸೂಚಿಸುತ್ತಾನೆ.

ಇಬ್ರಾಹಿಂ ಅವರ ತ್ಯಾಗವನ್ನು ನೆನಪಿಸಲು ಹಬ್ಬದ ದಿನ ಜಾನುವಾರು ಬಲಿಯನ್ನು ಅರ್ಪಿಸಲಾಗುತ್ತದೆ. ಆರ್ಥಿಕವಾಗಿ ಸುಸ್ಥಿರರಾಗಿರುವ ಎಲ್ಲರೂ ಪ್ರಾಣಿಬಲಿ ನೀಡಬೇಕು. ಅದರ ಮಾಂಸವನ್ನು ಸ್ವತಃ ಬಳಸಿಕೊಳ್ಳುವುದರ ಜತೆಯಲ್ಲೇ ಸಂಬಂಧಿಕರು ಹಾಗೂ ಬಡವರಿಗೂ ಹಂಚಬೇಕು. 'ಕುರ್ಬಾನಿ (ಪ್ರಾಣಿಬಲಿ) ನೀಡುವ ಸಾಮರ್ಥ್ಯವಿದ್ದೂ, ನೀಡದವರು ಹಬ್ಬದ ಪ್ರಾರ್ಥನೆಗಾಗಿ ಈದ್ಗಾಗೆ ಬರುವ ಅಗತ್ಯವಿಲ್ಲ' ಎಂದು ಪ್ರವಾದಿ ಮುಹಮ್ಮದ್ ಅವರು ಹೇಳಿದ್ದಾರೆ.



ಮಕ್ಕಾದಲ್ಲಿರುವ ಪವಿತ್ರ ಕಅಬಾ ಭವನದ ಬಳಿ ನೆರೆದಿರುವ ಹಜ್ ಯಾತ್ರಿಕರು — ಎಎಫ್‌ಪಿ ಚಿತ್ರ

ಇಸ್ಲಾಮ್‌ನ ಐದು ಕಡ್ಡಾಯ ಆರಾಧನೆಗಳಲ್ಲಿ ಒಂದಾಗಿರುವ 'ಹಜ್' ಇದೇ ಅವಧಿಯಲ್ಲಿ ನಡೆಯುತ್ತದೆ. ಸೌದಿ ಅರೇಬಿಯಾದ ಮಕ್ಕಾದಲ್ಲಿನ ಪವಿತ್ರ ಹಜ್ ಯಾತ್ರೆಯಲ್ಲಿ ಈ ಬಾರಿ ಲಕ್ಷಾಂತರ ಮಂದಿ ಪಾಲ್ಗೊಂಡಿದ್ದಾರೆ. ಆರೋಗ್ಯ ಮತ್ತು ಆರ್ಥಿಕವಾಗಿ ಸುಸ್ಥಿರರಾಗಿರುವ ವ್ಯಕ್ತಿ ಜೀವನದಲ್ಲೊಮ್ಮೆ ಹಜ್ ಯಾತ್ರೆ ಕೈಗೊಳ್ಳುವುದು ಕಡ್ಡಾಯ ಎಂದು ಇಸ್ಲಾಂ ಹೇಳುತ್ತದೆ.

ಮಕ್ಕಾದಲ್ಲಿರುವ ಪವಿತ್ರ ಕಅಬಾ ಭವನದ ಪ್ರದಕ್ಷಿಣೆ ಹಾಕುವುದು, ಸಫಾ–ಮರ್ವಾ ಬೆಟ್ಟಗಳ ನಡುವೆ ನಡೆಯುವುದು, ಮಿನಾದಲ್ಲಿ ತಂಗುವುದು, ಅರಫಾ ಮೈದಾನಕ್ಕೆ ತೆರಳುವುದು, ಜಮ್ರಾದಲ್ಲಿ ಕಲ್ಲೆಸೆಯುವುದು, ಪ್ರಾಣಿ ಬಲಿ ನೀಡುವುದು – ಹೀಗೆ ಹಜ್‌ನಲ್ಲಿ ಹಲವು ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸಲಾಗುತ್ತದೆ. ಬಕ್ರೀದ್‌ನ ಹಿಂದಿನ ದಿನವನ್ನು 'ಅರಫಾ ದಿನ' ಎಂದು ಕರೆಯುವರು. ಹಜ್‌ಗೆ ತೆರಳಿದ ಲಕ್ಷಾಂತರ ಮಂದಿ ಅಂದು ಅರಫಾ ಮೈದಾನದಲ್ಲಿ ಒಗ್ಗೂಡುವರು.

ಈದ್ ದಿನದಂದು ಬೆಳಿಗ್ಗೆ ಈದ್ಗಾಗಳು ಮತ್ತು ಮಸೀದಿಗಳಲ್ಲಿ ಸಾಮೂಹಿಕ ಈದ್ ನಮಾಜ್ ನಡೆಯುತ್ತದೆ. ಮಕ್ಕಳು, ಹಿರಿಯರು ಹೊಸ ಉಡುಗೆಯನ್ನು ತೊಟ್ಟು ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವರು. ನಮಾಜ್‌ಗೂ ಮುನ್ನ ಕೆಲ ಹೊತ್ತು 'ತಕ್ಬೀರ್' ಅನ್ನು ಮೊಳಗಿಸಲಾಗುತ್ತದೆ. ನಮಾಜ್ ಬಳಿಕ ಪರಸ್ಪರ ಶುಭಾಶಯ ತಿಳಿಸಿ, ಗೆಳೆಯರ ಮತ್ತು ಸಂಬಂಧಿಕರ ಮನೆಗೆ ಭೇಟಿ ನೀಡುವರು. ಮನೆಗಳಲ್ಲಿ ಹಬ್ಬದ ಊಟ, ವಿಶೇಷ ಖಾದ್ಯಗಳನ್ನು ತಯಾರಿಸುವರು. ಗೆಳೆಯರು, ಬಂಧುಗಳನ್ನು ಆಹ್ವಾನಿಸಿ ಜೊತೆಯಾಗಿ ಊಟ ಮಾಡಿ, ಸಂಭ್ರಮ ಹಂಚಿಕೊಳ್ಳುವರು. ಹಬ್ಬದ ದಿನ ದಾನವಾಗಿ ದೊರೆಯುವ ಮಾಂಸ, ಹಣ, ದಿನಸಿ ಸಾಮಗ್ರಿಗಳ ಮೂಲಕ ಬಡಕುಟುಂಬಗಳೂ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ.

ಮಾನವೀಯ ಮೌಲ್ಯಗಳು, ಸೋದರತ್ವ ಬೆಳೆಸಿಕೊಳ್ಳುವುದು, ದೇವನಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಾಗಿರಬೇಕು ಎಂಬ ಸಂದೇಶವನ್ನು ಬಕ್ರೀದ್ ಸಾರುತ್ತದೆ. ❖

'ಬ್ರಿಕ್ಸ್' ಸಂಸದೀಯ ವೇದಿಕೆ ಖಂಡನೆ

ಪಹಲ್ಗಾಮ್ ದಾಳಿ: ಭಯೋತ್ಪಾದನೆ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ನಿರ್ಧಾರ

ನವದೆಹಲಿ (ಪಿಟಿಐ): ಚೀನಾ ಮತ್ತು ಇರಾನ್ ಅನ್ನು ಒಳಗೊಂಡಿರುವ 'ಬ್ರಿಕ್ಸ್' ಸಂಸದೀಯ ವೇದಿಕೆಯು ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಖಂಡಿಸಿದೆ ಮತ್ತು ಭಯೋತ್ಪಾದನೆಯನ್ನು ವಿರುದ್ಧ ಒಗ್ಗಟ್ಟಾಗಿ ಹೋರಾಡಲು ನಿರ್ಧರಿಸಿದೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ನೇತೃತ್ವದ ಭಾರತೀಯ ಸಂಸದೀಯ ನಿಯೋಗವು ಬ್ರೆಸಿಲಿಯಾದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಭಾಗಿಯಾಗಿದೆ. ಭಯೋತ್ಪಾದಕ ಸಂಘಟನೆಗಳಿಗೆ ಹಣಕಾಸಿನ ನೆರವನ್ನು ಕಡಿತಗೊಳಿಸುವುದು, ಗುಪ್ತಚರ ಮಾಹಿತಿಯನ್ನು ಹಂಚಿಕೊಳ್ಳುವುದು, ಆಧುನಿಕ ತಂತ್ರಜ್ಞಾನಗಳ ದುರ್ಬಳಕೆಯನ್ನು ನಿಯಂತ್ರಿಸುವುದು, ಕಾನೂನು ಪ್ರಕ್ರಿಯೆಗೆ ಸಹಕರಿಸುವುದು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಭಾರತದ ನಿಯೋಗವು ಬಲವಾಗಿ ಪ್ರತಿಪಾದಿಸಿದೆ.

ಹಲವು ಸುತ್ತಿನ ಮಾತುಕತೆಯ ಬಳಿಕ ಸದಸ್ಯ ರಾಷ್ಟ್ರಗಳು ಪಹಲ್ಗಾಮ್ ದಾಳಿಯನ್ನು ಖಂಡಿಸಿದವು ಮತ್ತು ಭಯೋತ್ಪಾದನೆ ನಿಗ್ರಹದ ಅಗತ್ಯತೆ ಬಗ್ಗೆ ಒತ್ತಿ ಹೇಳಿದವು.

ಸಭೆಯಲ್ಲಿ ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಇರಾನ್ ಮತ್ತು ಸಂಯುಕ್ತ ಅರಬ್ ಸಂಸ್ಥಾನದ ಪ್ರತಿನಿಧಿಗಳು ಭಾಗಿಯಾಗಿದ್ದರು.



ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ರಾಜ್ಯಸಭಾ ಉಪಸಭಾಪತಿ ಹರಿವಂಶ್ ನಾರಾಯಣ್ ಸಿಂಗ್ ಅವರು ಬ್ರೆಜಿಲ್‌ನಲ್ಲಿ ನಡೆದ 'ಬ್ರಿಕ್ಸ್' ಸಂಸದೀಯ ವೇದಿಕೆಯ ಸಭೆಯಲ್ಲಿ ಭಾಗಿಯಾಗಿದ್ದರು — ಪಿಟಿಐ ಚಿತ್ರ

'ನಿಯೋಗಗಳು ಸಾಧಿಸಿದ್ದೇನು?'

ಕೇಂದ್ರ ಸರ್ಕಾರದ ವಿದೇಶಾಂಗ ನೀತಿಯು 'ಭಾರಿ ವೈಫಲ್ಯ' ಕಂಡಿದೆ ಎಂದು ಕಾಂಗ್ರೆಸ್ ಶುಕ್ರವಾರ ಟೀಕಿಸಿದೆ.

'ಸರ್ವಪಕ್ಷಗಳ ನಿಯೋಗಗಳನ್ನು ವಿವಿಧ ದೇಶಗಳಿಗೆ ಕಳುಹಿಸುವ ಮೂಲಕ ಸರ್ಕಾರ ಸಾಧಿಸಿದ್ದಾದರು ಏನು? ಈ ನಡೆಯಿಂದ ದೇಶಕ್ಕಾಗಿರುವ ಲಾಭವೇನು' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

'ಮೋದಿ ನೇತೃತ್ವದ ಸರ್ಕಾರ ಅನುಸರಿಸುತ್ತಿರುವ 'ವಿಫಲ ವಿದೇಶಾಂಗ ನೀತಿ' ಫಲವಾಗಿ ಜಾಗತಿಕ ಮಟ್ಟದಲ್ಲಿ ಭಾರತ ಅವಮಾನಕ್ಕೆ ಒಳಗಾಗಿದೆ' ಎಂದೂ ಆರೋಪಿಸಿದೆ.

'ಜಿ–7 ಶೃಂಗಸಭೆಯಲ್ಲಿ ಪಾಲ್ಗೊಳ್ಳುವಂತೆ ಭಾರತಕ್ಕೆ ಕೆನಡಾ ಆಹ್ವಾನ ನೀಡಿಲ್ಲ. ಭಾರತ ಮತ್ತು ಪಾಕಿಸ್ತಾನ ನಡುವೆ ಏರ್ಪಟ್ಟ ಕದನ ವಿರಾಮದ ಶ್ರೇಯವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೆಗೆದುಕೊಳ್ಳುತ್ತಿದ್ದಾರೆ. ವಿಶ್ವ ಮಟ್ಟದಲ್ಲಿ ಭಾರತ ಏಕಾಂಗಿಯಾಗಿದೆ. ನಮ್ಮ ಮಿತ್ರ ದೇಶಗಳು ಕೂಡ ನಮ್ಮಿಂದ ದೂರವಾಗುತ್ತಿವೆ' ಎಂದು ಪಕ್ಷದ ವಕ್ತಾರೆ ಸುಪ್ರಿಯಾ ಶ್ರೀನೇತ್ ಹೇಳಿದ್ದಾರೆ.

ರಾಜೇಶ್ ಸೋನಿ ಬಂಧನ

ಅಹಮದಾಬಾದ್ (ಪಿಟಿಐ): 'ಆಪರೇಷನ್ ಸಿಂಧೂರ'ದ ಬಗ್ಗೆ ವಿವಾದಾತ್ಮಕ ಹೇಳಿಕೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಆರೋಪದಡಿ ಗುಜರಾತ್ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ರಾಜೇಶ್ ಸೋನಿ ಅವರನ್ನು ಶುಕ್ರವಾರ ಬಂಧಿಸಲಾಗಿದೆ.

ಗುರುವಾರ ಎಫ್‌ಐಆರ್ ದಾಖಲಾಗಿದ್ದು, ರಾಜ್ಯ ಸಿಐಡಿಯ ಸೈಬರ್ ಅಪರಾಧ ಕೋಶದ ಅಧಿಕಾರಿಗಳು ಸೋನಿ ಅವರನ್ನು ಬಂಧಿಸಿದರು.

'ಭಾರತೀಯ ಸೇನಾಪಡೆಯು ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಪ್ರದೇಶದೊಳಗೆ ನುಗ್ಗಿ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿದ 'ಆಪರೇಷನ್ ಸಿಂಧೂರ' ಬಗ್ಗೆ ವಿವಾದಾತ್ಮಕ ವಿಷಯಗಳನ್ನು ಅಪ್‌ಲೋಡ್ ಮಾಡಿದ ಆರೋಪ ಸೋನಿ ಮೇಲಿದೆ' ಎಂದು ಸಿಐಡಿ– ಸೈಬರ್ ಅಪರಾಧ ವಿಭಾಗದ ಎಸ್‌ಪಿ ಭರತ್‌ಸಿನ್ಹ ಟಾಂಕ್ ತಿಳಿಸಿದ್ದಾರೆ.

ಶಾಲೆ ಹೆಸರನ್ನು ಉರ್ದುವಿನಲ್ಲಿ ಬರೆಸಿದ್ದ ಮುಖ್ಯ ಶಿಕ್ಷಕಿ ಅಮಾನತು

ಬಿಜ್ನೋರ್ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ಸರ್ಕಾರಿ ಶಾಲೆಯೊಂದರ ಹೆಸರನ್ನು ಹಿಂದಿಯ ಜೊತೆ ಉರ್ದು ಭಾಷೆಯಲ್ಲಿಯೂ ಬರೆದಿರುವ ವಿಡಿಯೊವೊಂದು ವೈರಲ್ ಆದ ಬೆನ್ನಲ್ಲೇ, ಶಾಲೆಯ ಮುಖ್ಯ ಶಿಕ್ಷಕಿಯನ್ನು ಅಮಾನತುಗೊಳಿಸಲಾಗಿದೆ.

'ಸಹನ್‌ಪುರ ಪ್ರಾಥಮಿಕ ಶಾಲೆಯ ಹೆಸರನ್ನು ಶಾಲೆಯ ಒಳಗೆ ಮತ್ತು ಹೊರಗಿನ ಗೋಡೆಯಲ್ಲಿ ಉರ್ದು ಭಾಷೆಯಲ್ಲಿಯೂ ಬರೆದಿರುವ ವಿಚಾರ ಗಮನಕ್ಕೆ ಬಂದಿದೆ. ಇದು ಭಾಷಾ ನಿಯಮಗಳ ಉಲ್ಲಂಘನೆಯಾಗಿದೆ' ಎಂದು ಜಿಲ್ಲಾ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

'ಮುಖ್ಯ ಶಿಕ್ಷಕಿ ರಫತ್ ಖಾನ್ ಅವರನ್ನು ಅಮಾನತುಗೊಳಿಸಲಾಗಿದೆ. ಘಟನೆಯ ಬಗ್ಗೆ ತನಿಖೆ ಆರಂಭಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ವಿಡಿಯೊ ಹಳೆಯದಾಗಿದ್ದು, ಶಾಲೆ ಆರಂಭವಾಗುವ ಮುನ್ನವೇ ಉರ್ದು ಭಾಷೆಯಲ್ಲಿದ್ದ ಹೆಸರನ್ನು ಅಳಿಸಿಹಾಕಲಾಗಿದೆ' ಎಂದು ರಫತ್ ಅವರು ತಿಳಿಸಿದ್ದಾರೆ.

'ಅಪರಾಧದ ರಾಜಧಾನಿಯಾಗಿ ಬಿಹಾರ'


ರಾಜಗೀರ್ (ಬಿಹಾರ) (ಪಿಟಿಐ): 'ಬಿಹಾರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಿಕೊಳ್ಳದ ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಸರ್ಕಾರದಿಂದಾಗಿ ರಾಜ್ಯವು ದೇಶದ ಅಪರಾಧದ ರಾಜಧಾನಿಯಾಗಿ ಪರಿವರ್ತನೆಗೊಂಡಿದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಆರೋಪಿಸಿದರು.

ಇಲ್ಲಿ ನಡೆದ 'ಸಂವಿಧಾನ ಸುರಕ್ಷಾ ಸಮ್ಮೇಳನ'ದಲ್ಲಿ ಮಾತನಾಡಿದ ಅವರು, 'ಒಂದು ಕಾಲದಲ್ಲಿ ಶಾಂತಿ ಮತ್ತು ನ್ಯಾಯದ ಭೂಮಿಯಾಗಿದ್ದ ಬಿಹಾರ, ಈಗ ಭಾರತದ ಅಪರಾಧದ ರಾಜಧಾನಿಯಾಗಿ ಮಾರ್ಪಟ್ಟಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿ ವಿರುದ್ಧ ಟೀಕೆ

'ಭಾರತ– ಪಾಕಿಸ್ತಾನ ನಡುವಿನ ಸೇನಾ ಸಂಘರ್ಷ ಶಮನಕ್ಕೆ ಸಂಬಂಧಿಸಿದಂತೆ ಎರಡೂ ದೇಶಗಳ ನಡುವೆ ಶಾಂತಿ ಸ್ಥಾಪನೆಗೆ ತಾನು ಮಧ್ಯವರ್ತಿಯಾಗಿ ಕೆಲಸ ಮಾಡಿದ್ದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚೆಗೆ 11 ಬಾರಿ ಹೇಳಿದ್ದಾರೆ' ಎಂದು ರಾಹುಲ್ ಗಾಂಧಿ ಅವರು ತಿಳಿಸಿದರು.

'ಈ ಬಗ್ಗೆ ಪ್ರಧಾನಿ ಮೋದಿ ಅವರು ಕನಿಷ್ಠ ಪ್ರತಿಭಟನಾ ಹೇಳಿಕೆಯನ್ನೂ ನೀಡಿಲ್ಲ. ಬದಲಿಗೆ ಮೌನಿಯಾಗಿದ್ದಾರೆ. ಈ ವಿಷಯದಲ್ಲಿ ಅವರಿಗೆ ಹೇಳುವುದು ಏನೂ ಇಲ್ಲ ಎಂಬುದು ನನಗೆ ಗೊತ್ತಿದೆ. ಟ್ರಂಪ್ ಅವರಿಂದ ಒಂದು ಕರೆ ಬಂದ ಕೂಡಲೇ ಮೋದಿ ಅವರು ಶರಣಾಗಿದ್ದಾರೆ' ಎಂದು ಅವರು ಟೀಕಿಸಿದರು.



ರಾಹುಲ್ ಗಾಂಧಿ

'ಹೀಗೆ ಪ್ರಧಾನಿ ನರೇಂದ್ರ ಮೋದಿ ಅವರು ಶರಣಾಗಿದ್ದಾರೆ' ಎಂದು ಹೇಳಿದ ಅವರು 'ನರೇಂದರ್ ಸರೆಂಡರ್' ಹೇಳಿಕೆಯನ್ನು ಪುನರುಚ್ಚರಿಸಿದರು.

ಹಿಂದುಳಿದ ವರ್ಗಗಳು, ದಲಿತ ಅಥವಾ ಬುಡಕಟ್ಟು ಸಮುದಾಯಗಳ ಯಾವುದೇ ಅಧಿಕಾರಿಯಿಂದ ಪ್ರಶ್ನಾವಳಿಯನ್ನು ಅಂತಿಮಗೊಳಿಸದೇ, ಕೇಂದ್ರ ಸರ್ಕಾರವು ಜಾತಿ ಜನಗಣತಿಯನ್ನು ಸರಿಯಾಗಿ ನಡೆಸುತ್ತದೆಯೇ ಎಂದು ಸಂಶಯ ವ್ಯಕ್ತಪಡಿಸಿದರು.

'ಮೀಸಲಾತಿಯಲ್ಲಿ ಶೇ 50ರ ಮಿತಿ ತೆಗೆಯುತ್ತೇವೆ': 'ನಾನು ಜಾತಿ ಜನಗಣತಿಗಾಗಿ ಹೋರಾಡುತ್ತಿದ್ದೇನೆ. ಸಂವಿಧಾನವನ್ನು ಉಳಿಸಲು ಮತ್ತು ಒಟ್ಟಾರೆ ಸುಧಾರಣೆಗೆ ಇದು ಅತ್ಯಗತ್ಯ. ಕಾಂಗ್ರೆಸ್ ಎಲ್ಲೆಲ್ಲಿ ಸರ್ಕಾರ ರಚಿಸುತ್ತದೆಯೋ ಅಲ್ಲೆಲ್ಲ ಮೀಸಲಾತಿಯ ಮೇಲಿನ ಶೇಕಡ 50ರ ಮಿತಿಯನ್ನು ತೆಗೆಯುತ್ತೇವೆ. ಅದು ಬಿಹಾರದಿಂದಲೇ ಪ್ರಾರಂಭವಾಗಲಿದೆ' ಎಂದು ತಿಳಿಸಿದರು.



ಜನರನ್ನು ಹೆಲಿಕಾಪ್ಟರ್‌ನಲ್ಲಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಯಿತು — ಪಿಟಿಐ ಚಿತ್ರ

ಸಿಕ್ಕಿಂ: 44 ಪ್ರವಾಸಿಗರ ರಕ್ಷಣೆ

ಗ್ಯಾಂಗ್ಟಕ್ (ಪಿಟಿಐ): ಭೂ ಕುಸಿತದಿಂದಾಗಿ ಸಿಕ್ಕಿಂನ ಛಟೇನ್‌ನಲ್ಲಿ ಸಿಲುಕಿದ್ದ 44 ಪ್ರವಾಸಿಗರನ್ನು ಶುಕ್ರವಾರ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

44 ಜನರನ್ನು ಹೆಲಿಕಾಪ್ಟರ್ ಮೂಲಕ ಪಕ್ಯೋಂಗ್‌ನ ವಿಮಾನ ನಿಲ್ದಾಣಕ್ಕೆ ಕರೆತಂದು ಅಲ್ಲಿಂದ ಬಸ್ ಮೂಲಕ ಗ್ಯಾಂಗ್ಟಕ್‌ಗೆ ಕರೆತರಲಾಯಿತು. ಅವರಲ್ಲಿ 17 ಮಂದಿ ಸ್ಥಳೀಯ ನಿವಾಸಿಗಳು. ಅಲ್ಲಿ ಸಿಲುಕಿದ್ದ ಎಲ್ಲ ಪ್ರವಾಸಿಗರು ಹೊರಬಂದಂತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಛಟೇನ್‌ನಲ್ಲಿ ಒಟ್ಟು 64 ಮಂದಿ ಸಿಲುಕಿದ್ದಾರೆ ಎಂದು ರಾಜ್ಯ ಸರ್ಕಾರವು ಈ ಹಿಂದೆ ತಿಳಿಸಿತ್ತು. ಸ್ಥಳೀಯ ನಿವಾಸಿಗಳನ್ನು ಕರೆತರಲು ವ್ಯವಸ್ಥೆ ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.


VIBEZ
ESTATES
We build dreams, relationships, and legacies.
price starts from
₹79 LAKHS onwards
If you're seeking a spiritual villa near
Bilva Dhara
DHARMASTHALA
Project by VIBEZ ESTATES offers a compelling opportunity as we celebrate this milestone we remain committed to building more than just property
CELEBRATING
15 yrs of
EXCELLENCE
Here's to
GREENER
TOMORROW
8152883388
www.vibezestates.com/bilvadhara


MBApro BY THE KINGDOM COLLEGE
preparing for life !
JOB ON THE DAY OF ADMISSION
MBApro
HOW ABOUT A MBA THAT OFFERS YOU
• MBA degree
• Placement on the day of Admission (Future secured)
• 2 yrs paid practical work experience
• Learn directly from real entrepreneurs
• Meet your employer on day of admission
[Offer for first 100 admissions | T&C apply]
• Orientation + Admission + Employment on the same day.
MEGA LAUNCH ON 15TH JULY 2025
DEEPAK, THE INSPIRATION
FOUNDER, THE KINGDOM COLLEGE
* Terms & Conditions apply
(MBApro is an evening / weekend program)
SCAN HERE
ENTRY ONLY BY REGISTRATION
+91 89042 75033
STARTING SALARY 5L/ANNUM
STIPEND OF 10K/MONTH
#1008, JAYANNA CIRCLE, IDEAL HOMES
TWP, RR NAGAR, BENGALURU - 98

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call:9964627255

ANJANAPURA 10TH Block BDA Site For Sale 30×40 East No.1384 Price. 9.000/- Negotiable. Contact: 9845298419

Banashankari

AVAILABLE_BDA Sites Banashankari 6th_Stage,7th Block 50x80,East 8th Blk,40x60, East 5th Blk 40x60,East 40'_Road:- 9902764626/ 9513332646

BANASHANKARI 6TH Stage, 9th Block, #33/A, 40x60 S/F, 100_Feet Parallel, 2.60Cr._Negotiable. OWNER: 9799099699, 9740075563.

AVAILABLE BSK 6th Stage 50x80 100ft Road NF, 50x80 60ft Road EF 7th Block Contact: 9845062822/ 8660751654

SITE FOR SALE BANASHANKARI 6TH STAGE 2ND BLOCK 20x30 EAST FACING 40FT Road CONTACT: 9535575774

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

SITE SALE BDA Banashankari 5th Stage Near NPS SCHOOL 30X40 North 40ft Road: 8618385836/ 9241082155

Devanahalli

DC CONVERSION DTCP Approved A KATHA 20x40 site 7,00,000/-. Gated Community Ready Registration. DEVANAHALLI 9663884211

DEVANAHALLI TO Doddabalapura Main Road E-Katha Bank Loan Property 3100 Sqft. Sale 5250/- PSft: 9342552428

Kempegowda Layout

SITE FOR SALE KEMPEGOWDA LAYOUT 50/80, East facing 4 Site's in a Same Row 7th block 300 feet PRR Road Close to Challaghatta Metro Station Commercial Property Owner Meeting: 8884709409/ 7899570235

KEMPEGOWDA LAYOUT 50x80,Site #4233,West-facing 3rd Block"L"sector 300feet-road and 40x60 Site #547,East-facing 1st Block "K"sector 40feet-road. Contact:9845143613

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

NADAPRABHU KEMPEGOWDA LAYOUT 1st Block 30X40 WEST FACING SITE FOR SALE. Contact: 6366610999

HSR Layout

HSR LAYOUT RELIABLE LAKE DEW 40x70 South East corner Plot for Sale. Contact Owner- 9845067070

J P Nagar

JPNAGAR 2ND Phase 30x42, North Facing, Price 30000/- 30x51, With House. Price 5.50Cr, Call: 9845704509

Magadi Road

3000 SFT East Facing site for sale at Syndicate Bank Layout Govindarajnagar Magadi Road. Contact Rajendra:- 9449604358.

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

FOR RENTAL
GODOWN / SHOWROOM
AVAILABLE SPACE
5000 SFT
MUDDINAPALYA
(Close to Nagarbhavi)
60 feet Road Facing
9845178264

ನಿವೇಶನಗಳು ಮಾರಾಟಕ್ಕಿವೆ
LAND OWNER SHARE
ಕೆಹೆಚ್‌ಬಿ ಸೂರ್ಯ ಸಿಟಿ
ಎಲೆಕ್ಟ್ರಾನಿಕ್ ಸಿಟಿ ಹತ್ತಿರ ಮತ್ತು ಬನ್ನೇರುಘಟ್ಟ ರಸ್ತೆ
ನೋಂದಣಿ ಮತ್ತು ನಿರ್ಮಾಣಕ್ಕೆ ಸಿದ್ಧವಾಗಿದೆ
ಎಸ್‌ಬಿಐ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ
ಸಂಪರ್ಕಿಸಿ: **7411554412**

ತಾರಕನ್ಸ್
ಕಾರ್ಮೆಲ್ ಮಂತ್ರ
ಅಭಿವೃದ್ಧಿ ಮಾಡಿದ ಪ್ರೀಮಿಯಂ ಪ್ಲಾಟ್ಸ್
16.8 ಲಕ್ಷಗಳಿಂದ ಪ್ರಾರಂಭ
1200 ಚದರ ಅಡಿಗಳು
ಎಂಪಿಎ ಅನುಮೋದಿಸಿದ
ಬ್ಯಾಂಕಿನಿಂದ ಸಾಲಗಳು ದೊರೆಯುತ್ತವೆ.
ಮಾಲೂರು, ಮಾಸ್ತಿ ರಸ್ತೆ
ಸರ್ಜಾಪುರ & ವೈಟ್‌ಫೀಲ್ಡ್ ಹತ್ತಿರ
ಎಸ್.ಟಿ.ಆರ್.ಆರ್. ಸಮೀಪ, ಬೆಂಗಳೂರು ಮತ್ತು ಚೆನ್ನೈ ರಾಷ್ಟ್ರೀಯ ಹೆದ್ದಾರಿ ಹತ್ತಿರ
Call Us Now **9035 589 596**

DS MARCOM Properties and Promoter Presents
DS PROPERTIES AND PROMOTER
CRS Enclave
SITES FOR SALE
BMRDA Approved 'A' KHATA
NPA Approved Individual sites for sale Ready for Registration and Constructions
Bank Loan Available upto 80% Nationalised Bank
@ Nelamangala Near Nelamangala Railway Station
9611166681, 9606342643
web:dsmarcom.com Email: info@dsmarcom.com

Rajajinagar

SALE 15X35, West Rajajinagar 2nd stage A block, Good Residential location, Near Rameshwaram cafe. 9845527196.

Ramanagar

RESIDENTIAL CONVERTED RCUDA Approved (Semi-Commercial) Site For Sale in Ramanagar 10000Sqft 400Meters from highway 40 FeetRoad, 2000/P.Sft Owner- 9900115519

Srinagar

SITE FOR Sale 30x50 west Facing BDA Property.Clear title @ Srinagar.Near Srinagar Bus stop Contact :7892586674/9343742082

Vishweshwariah Layout

"COMMERCIAL SITE for_sale 33x65 North_facing Upkar_Layout near 41_RTO_Office 60`feet_Road Direct_Owner. 9663356556"

50X80 NORTH Facing Commercial 60 Feet Road Muddinapalya Main Road Vishweshwaraiah Layout 7th Block: 9980409820

30X40 BDA Site Vishveshwaraiah Lyt 8750, 40x60 BDA Site Sale 7000 Near Amma School: 9844845864

"VISVESHWARAIAH LAYOUT: A).30x40_SF_1st`Block, B).40x60 WF 6th`Block, C).50x80`SF`6th Block with 7500`Sqft Building. 9845500019/ 7019314962"

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BDA-SITE FOR-SALE 30x40 East Facing at Sir.M Vishveshwaraiya Layout 1st_& 3rd Block Good Location Call:7676900174 6363496142

Mysore

KHB ALLOTTED 30x40 Site at Kenchalgudu, Mysore City 46 Lakhs Clear Documents Owner Contact: 9606866368

Ramanagara

SITE MEASURING 1859 Sq ft for SaleBMICAPA ApprovedBosch welfare Association layoutNear Manchanabele DamGenuine buyersContact owner 9845656926/9845595706.

Andrahalli

SITE FOR SALE DC Conversion 30x40 N/F Andralli Main Road Price Rs.75L Negotiable Contact: 8095449249

Flat

Old Airport Road

GOLDEN ENCLAVE 2BHK Flat`Sale 5th_Floor, East`Entrance 1720.Sqft. Pool`Facing 1_Covered Parking Old_Airport Road. Call:Owner 9822928189 9845022810 info@deepstone.in

Kanakapura Road

SALE LUXURY 2/3_BHK Apartment Starts from 8599/-sft at Doddakalasandra, Near_Forum Mall. Contact:7204020888 7204030888

Frazer Town

FULLY RENOVATED 3 BHK, 1610 sq.ft. for sale in Mamta manor, Frazer Town. Contact 9620990404.

House

Indiranagar

PROPERTY FOR SALEDEFENCE COLONY INDIRANAGAR BLR 8000, 7000 sq ft. Contact : 9448056996

Magadi Road

ANDRAHALLI 'D' GROUP LAYOUT- Ground: Parking, 1BHK. First: 2BHK spacious for Rent. Third & Fourth: Duplex house. Owner- 9845067070

Jayanagar

JAYANAGAR 3RD Block East 40x60 & Model House street 33x33 South old houses suraj Realtors: 9845232711.

Commerical

Seshadripuram

SHALIMAR GALAXY Sheshdripuram 675sft_Office Space For Sale 110 Lacs or_Rent 2nd_Floor Sunil: 9845201710

General

South

5 BHK Bungalow @ BSK 2nd Stage, 30x40 Independent House @ ISRO Layout. Luxury 2, 3 & 4 BHK Apartments for SALE @ BSK. Mob: 9741445209/ 9739150900.

Industrial & Factory

Mysore Road

"4730 SQFT West facing with shed`& Power for-sale New`Timber Yard Layout, Mysore Road. 9902973903/ 8197225837"

Residential/ Commercial

HSR Layout

BDA SINGASANDRA 40x60 Plot Sale. 14800/- per sft whatsapp owner 918978282072

RENTAL PROPERTIES

Accommodation Available

Commercial

Commercial Space Available for Rent
Location: Next to Radisson Atria, Palace Road, Bengaluru
Size: 45,000 sq ft
Unlock the potential of your business in this prime location, perfect for office space, retail, or various commercial ventures.
Key Features:
- Sleek, modern design
- High visibility and easy accessibility
- Generous parking facilities
- Close proximity to essential amenities

Seize this unique opportunity to establish your business in a thriving area!
For inquiries and to schedule a viewing, Please Call:
9900932138

AVAILABLE 3 Floors COMMERCIAL each 2000 sft for Rent for office, showroom in HSR 6 Sector Main Road. Call 9880022644

PLUG-&-PLAY OFFICE Space 45+65 Seater GF+FF Near BDA Complex, BANASHANKARI 2nd Stage. Call-9901453477

Accommodation Wanted

House

WANTED 4 Bedroom House for Lease/ Rent around RMV II Stage, Sanjay Nagar. Contact:- 9606949809.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

ಶರಣ್ಯ ಫಾರ್ಮ್ಸ್
Sharanya Farms
Create your own Sunshine

ನಿಮ್ಮ ಕನಸಿನ ತೋಟದ ಮನೆ ನನಸು ಮಾಡುವುದೇ ನಮ್ಮ ಆದ್ಯತೆ

Marketing Partner
MS REALITIES
A TRADITION OF TRUST

ಫಾರ್ಮ್ ಲ್ಯಾಂಡ್ ಖರೀದಿಸಿ - ನಿರ್ವಹಣೆ ನಮ್ಮದು, ಲಾಭ ನಿಮ್ಮದು

Resort: Club House, Restaurant, Cottages

5 minutes drive to Bangalore-Mysore Road

Sharanya Hillview Farms
Phase- II
51 acre fully gated community

ಶ್ರೀಗಂಧದ ಮರದೊಂದಿಗೆ ನಿಮ್ಮ ಹಣವನ್ನು ಬೆಳೆಸಿ

"Experience Luxury Amidst Nature" - Dive into our ready Swimming Pool while anticipating upcoming Resort Amenities



*Actual Pictures of farmhouse

*T&C Apply

Pre launch offer will end on this week hurry up get free Bali trip (4N/5D)

ಒಂದು ಹೂಡಿಕೆಯಿಂದ ನಾಲ್ಕು ಲಾಭಗಳು!
1) ಫಾರಂ ಲ್ಯಾಂಡ್ ಖರೀದಿಸಿ ನಿಮಗೂ ಮತ್ತು ನಿಮ್ಮ ಕುಟುಂಬದವರಿಗೆ ರೆಸಾರ್ಟ್ ಸೌಲಭ್ಯ ಉಚಿತವಾಗಿ ಪಡೆಯಿರಿ.
2) ಇಲ್ಲಿನ ಫಲವತ್ತಾದ ಭೂಮಿಯಲ್ಲಿ ಶ್ರೀಗಂಧ ಮರಗಳ ಅಧಿಕ ಲಾಭ ಪಡೆಯಿರಿ.
3) ನಿಮ್ಮ ಫಾರಂ ಹೌಸ್ ಅನ್ನು ಬಾಡಿಗೆಗೆ ನೀಡುವುದರ ಮೂಲಕ ಪ್ರತಿ ತಿಂಗಳು ಆದಾಯ ಪಡೆಯಿರಿ.
4) ಇಂದಿನ ನಿಮ್ಮ ಹೂಡಿಕೆಯ ಮೇಲೆ ಮುಂದಿನ ದಿನಗಳಲ್ಲಿ ದುಪ್ಪಟ್ಟು ಲಾಭ ಪಡೆಯಿರಿ ಹಾಗೂ ಒಂದು ಹೂಡಿಕೆಯಿಂದ ಇನ್ನು ಅನೇಕ ಲಾಭಗಳನ್ನು ಪಡೆಯಿರಿ.

www.sharanyafarms.com
ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ:
70 26 26 22 33

ಷೇರುಪೇಟೆ ವಹಿವಾಟು


746



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,750
ಇಂದಿನ ಅಂತ್ಯ	25,003
▲	252
ದಿನದ ಗರಿಷ್ಠ	25,029

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1365 (1365)
ಸೋಯಾ (ರಿಫೈನ್ಡ್)	₹1170 (1175)
ಸೂರ್ಯಕಾಂತ (ರಿಫೈನ್ಡ್)	₹1330 (1330)
ಪಾಮೋಲಿನ್	₹1145 (1145)

ವಿನಿಮಯ ದರ

$ ಡಾಲರ್	85.68
£ ಪೌಂಡ್	115.88
€ ಯುರೊ	97.78
¥ ಯೆನ್ (100ಕ್ಕೆ)	59

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹28000
ಎಸಿ	₹15400
ಆರ್‌ಪಿ	₹20500
ಆರ್‌ಸಿ	₹10830



ಯಳಂದೂರು ತಾಲ್ಲೂಕಿನಲ್ಲಿ ಈರುಳ್ಳಿ ಕೊಯ್ಲಿನಲ್ಲಿ ನಿರತರಾದ ಶ್ರಮಿಕರು

ಸಾಂಬಾರ್ ಈರುಳ್ಳಿಗೆ ಬಂಪರ್ ಧಾರಣೆ

● ನಾ.ಮಂಜುನಾಥಸ್ವಾಮಿ

ಯಳಂದೂರು: ಖಾರ, ಸುವಾಸನೆ ಹಾಗೂ ವಿಶಿಷ್ಟ ರುಚಿಗೆ ಹೆಸರಾಗಿರುವ ಸಣ್ಣ ಈರುಳ್ಳಿ ಕೊಯ್ಲಿಗೆ ಬಂದಿದ್ದು, ಉತ್ತಮ ಇಳುವರಿ ಜೊತೆಗೆ ಉತ್ತಮ ಧಾರಣೆಯೂ ಸಿಗುತ್ತಿದೆ. ಇದು ರೈತರಲ್ಲಿ ಸಂತಸ ಮೂಡಿಸಿದೆ.

ಕಳೆದ ಬಾರಿ ನಷ್ಟ ಅನುಭವಿಸಿದ್ದರಿಂದ, ಪ್ರಸಕ್ತ ವರ್ಷ ಈರುಳ್ಳಿ ನಾಟಿಗೆ ಹೆಚ್ಚಿನ ರೈತರು ಹಿಂಜರಿದಿದ್ದರು. ಕೆಲವರಷ್ಟೇ ಬಿತ್ತನೆ ಮಾಡಿದ್ದರು. ಬಹುತೇಕರು ಗುಣಮಟ್ಟದ ಈರುಳ್ಳಿ ಬೆಳೆದಿದ್ದು, ಕಟಾವು ಮಾಡಿದ ಈರುಳ್ಳಿ ತಾಕಿನ ಬಳಿಗೇ ಬಂದು ವ್ಯಾಪಾರಿಗಳು ಖರೀದಿಸುತ್ತಿದ್ದಾರೆ. ಬೆಲೆ ಸ್ಥಿರವಾಗಿ ಒಂದೆರಡು ತಿಂಗಳು ಮುಂದುವರಿದರೆ ಹೆಚ್ಚಿನ ಲಾಭ ದೊರೆಯಲಿದೆ.

‘ಬೇಸಿಗೆ ಹಂಗಾಮಿನಲ್ಲಿ ಒಂದೂವರೆ ಎಕರೆಯಲ್ಲಿ ಈರುಳ್ಳಿ ನಾಟಿ ಮಾಡಿದ್ದೆವು. ಆರಂಭದಲ್ಲಿ ಉಷ್ಣಾಂಶ ಹೆಚ್ಚಿತ್ತು. ಒಂದೆರಡು ಬಾರಿ ಮಳೆಯಾಗಿದ್ದೂ ಬೆಳೆಗೆ ಪೂರಕವಾಯಿತು. ಈಗ ಹೆಚ್ಚಿನ ಬೇಡಿಕೆ ಇದೆ’ ಎನ್ನುತ್ತಾರೆ ಹೊನ್ನೂರು ಹೊರವಲಯದ ಬೆಳೆಗಾರ ರವಿ.

‘1 ಎಕರೆಗೆ ₹50 ಸಾವಿರ ಖರ್ಚಾಗಿದ್ದು, 60 ಕ್ವಿಂಟಲ್ ಇಳುವರಿ ಸಿಗಬಹುದು. ಕ್ವಿಂಟಲ್‌ಗೆ ₹5,000 ದರವಿರುವುದರಿಂದ ಉತ್ತಮ ಲಾಭ ದೊರೆಯುವ ನಿರೀಕ್ಷೆ ಇದೆ’ ಎಂದರು.

‘ಮುಂಗಾರು ಹಂಗಾಮಿನಲ್ಲೂ ಈರುಳ್ಳಿ ನಾಟಿ ಮಾಡಲು ರೈತರು ಸಿದ್ಧತೆ ನಡೆಸಿದ್ದಾರೆ. ಕೆಲವು ವ್ಯಾಪಾರಿಗಳು ಗುಣಮಟ್ಟದ ನಾಟಿ ಈರುಳ್ಳಿ ಖರೀದಿಸಿ ಸಂಗ್ರಹಿಸುತ್ತಿದ್ದು, ಬಿತ್ತನೆ ಬೀಜವಾಗಿ ಮಾರುತ್ತಾರೆ. ಹಾಗಾಗಿ ಬೇಡಿಕೆ ಹೆಚ್ಚಿದೆ’ ಎಂದು ದಲ್ಲಾಳಿಗಳಾದ ಮಹದೇವ ಮತ್ತು ನಂಜುಂಡ ಹೇಳಿದರು.

‘ತಮಿಳುನಾಡು ಮತ್ತು ಕೇರಳದಲ್ಲಿ ಈರುಳ್ಳಿ ಆವಕ ಕಡಿಮೆಯಾಗಿರುವುದರಿಂದ ಧಾರಣೆ ಹೆಚ್ಚಾಗಿದೆ’ ಎಂದು ಬೆಳೆಗಾರ ಕಟ್ಟೆ ಗಣಿಗನೂರು ರಂಗಸ್ವಾಮಿ ಹೇಳಿದರು.

ರಿಯಾಲ್ಟಿ, ಬ್ಯಾಂಕ್, ಆಟೊ ವಲಯಗಳ ಷೇರು ಖರೀದಿ ಹೆಚ್ಚಳ


ರೆಪೊ ಇಳಿಕೆ ಬಲ, ಸೆನ್ಸೆಕ್ಸ್ ಜಿಗಿತ

ಮುಂಬೈ (ಪಿಟಿಐ): ಆರ್‌ಬಿಐ ರೆಪೊ ದರದಲ್ಲಿ ಶೇಕಡ 0.50ರಷ್ಟು ಕಡಿತ ಮಾಡಿದ್ದು ಶುಕ್ರವಾರದ ವಹಿವಾಟಿನಲ್ಲಿ ದೇಶದ ಷೇರು ಸೂಚ್ಯಂಕಗಳ ಏರಿಕೆಗೆ ಕಾರಣವಾಗಿ ಒದಗಿಬಂತು.

ರೆಪೊ ದರದ ಏರಿಳಿತಕ್ಕೆ ಸ್ಪಂದಿಸುವ ರಿಯಾಲ್ಟಿ, ಬ್ಯಾಂಕ್, ಆಟೊ ವಲಯಗಳ ಷೇರು ಖರೀದಿ ಹೆಚ್ಚಳವು ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ ಹಲವು ಸವಾಲುಗಳು ಇರುವ ಈ ಹೊತ್ತಿನಲ್ಲಿ ಆರ್‌ಬಿಐ ತಾಳಿರುವ ನಿಲುವು ಆರ್ಥಿಕ ಬೆಳವಣಿಗೆಗೆ ಹಾಗೂ ಹೂಡಿಕೆಗೆ ಪೂರಕವಾಗಿ ಇದೆ ಎಂದು ಕೂಡ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 746 ಅಂಶ ಹೆಚ್ಚಳವಾಗಿ, 82,188ಕ್ಕೆ ವಹಿವಾಟು ಕೊನೆಗೊಂಡಿತು. ದಿನದ ವಹಿವಾಟಿನ ವೇಳೆ 857 ಅಂಶದವರೆಗೂ ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ



ಸೂಚ್ಯಂಕ ನಿಫ್ಟಿ 252 ಅಂಶ ಹೆಚ್ಚಳವಾಗಿ, 25,003ಕ್ಕೆ ವಹಿವಾಟು ಅಂತ್ಯಗೊಂಡಿತು.

ರಿಯಾಲ್ಟಿ ಸೂಚ್ಯಂಕವು ಶೇ 4.74ರಷ್ಟು, ಹಣಕಾಸು ಸೇವಾ ವಲಯದ ಸೂಚ್ಯಂಕವು ಶೇ 1.79ರಷ್ಟು, ಲೋಹ ವಲಯದ ಸೂಚ್ಯಂಕವು ಶೇ 1.56ರಷ್ಟು, ಆಟೊ ವಲಯದ ಸೂಚ್ಯಂಕವು ಶೇ 1.5ರಷ್ಟು ಏರಿಕೆ ದಾಖಲಿಸಿದೆ.

ಬಜಾಜ್ ಫೈನಾನ್ಸ್, ಎಕ್ಸಿಸ್ ಬ್ಯಾಂಕ್, ಮಾರುತಿ ಸುಜುಕಿ, ಇಂಡಸ್‌ಇಂಡ್ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಎಟರ್ನಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಸ್ಟೀಲ್, ಕೋಟಕ್ ಮಹೀಂದ್ರ ಬ್ಯಾಂಕ್, ಟೈಟನ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎನ್‌ಟಿಪಿಸಿ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಭಾರ್ತಿ ಏರ್‌ಟೆಲ್ ಮತ್ತು ಸನ್ ಫಾರ್ಮಾ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಗುರುವಾರದ ವಹಿವಾಟಿನಲ್ಲಿ ₹208 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

‘ಆರ್‌ಬಿಐ ತೀರ್ಮಾನ ಪ್ರಕಟವಾಗುವ ಮೊದಲು ಮಾರುಕಟ್ಟೆಯಲ್ಲಿ ಎಚ್ಚರಿಕೆಯ ವಹಿವಾಟು ಇತ್ತು. ಆದರೆ ರೆಪೊ ದರ ಇಳಿಕೆಯ ತೀರ್ಮಾನ ಪ್ರಕಟವಾದ ನಂತರ ತೇಜಿ ವಹಿವಾಟು ನಡೆಯಿತು’ ಎಂದು ತಜ್ಞರು ಹೇಳಿದ್ದಾರೆ.

ಬೆಳ್ಳಿ ದರ ₹3 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ದರವು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.



ಬೆಳ್ಳಿ ದರವು ಕೆ.ಜಿಗೆ ₹3 ಸಾವಿರ ಹೆಚ್ಚಳವಾಗಿ, ₹1,07,100ದಂತೆ ಮಾರಾಟವಾಗಿದೆ. ಕಳೆದ ಡಿಸೆಂಬರ್ 31ರಿಂದ ಇಲ್ಲಿಯವರೆಗೆ ಬೆಳ್ಳಿ ದರವು ಕೆ.ಜಿ.ಗೆ ₹17,400 (ಶೇ 19.4) ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹99,690 ಇದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ₹99,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದೇಶೀಯ ಮಾರುಕಟ್ಟೆಯಲ್ಲಿ ಬೆಳ್ಳಿಗೆ ಬೇಡಿಕೆ ಹೆಚ್ಚಳವಾಗಿದೆ. ಅಲ್ಲದೇ ಜಾಗತಿಕ ಮಾರುಕಟ್ಟೆಯಲ್ಲೂ ದರ ಏರಿಕೆಯಾಗಿದೆ. ಹೀಗಾಗಿ, ದೇಶದಲ್ಲಿ ಬೆಳ್ಳಿ ಬೆಲೆ ಹೆಚ್ಚಳವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹220-500
ದ್ವಿತಳಿ (ಬಿ.ವಿ)	₹346-692

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ದಾವಣಗೆರೆ	₹15000-15000

ಇಂಟರ್‌ನೆಟ್ ಸೇವೆ ಆರಂಭಿಸಲು ಸ್ಟಾರ್‌ಲಿಂಕ್‌ಗೆ ಪರವಾನಗಿ

ನವದೆಹಲಿ (ಪಿಟಿಐ): ದೇಶದಲ್ಲಿ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆ ಆರಂಭಿಸಲು ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಕಂಪನಿಗೆ ಕೇಂದ್ರ ದೂರಸಂಪರ್ಕ ಇಲಾಖೆ (ಡಿಒಟಿ) ಶುಕ್ರವಾರ ಪರವಾನಗಿ ನೀಡಿದೆ.



ಈ ಅನುಮತಿಯಿಂದಾಗಿ ದೇಶದಲ್ಲಿ ಶೀಘ್ರವೇ ಈ ಸೇವೆ ಶುರುವಾಗುವ ನಿರೀಕ್ಷೆ ಇದೆ. ಕಳೆದ ತಿಂಗಳು ಇಲಾಖೆಯು ಒಪ್ಪಂದ ಪತ್ರವನ್ನು (ಎಲ್‌ಒಐ) ನೀಡಿತ್ತು.

ಸೇವೆಗಳನ್ನು ಆರಂಭಿಸಲು ಸ್ಟಾರ್‌ಲಿಂಕ್ ಭದ್ರತಾ ಮಾನದಂಡಗಳನ್ನು ಪಾಲಿಸಿದೆ ಎಂದು ಇಲಾಖೆ ತಿಳಿಸಿದೆ.

ಈಗಾಗಲೇ ಯುಟೆಲ್‌ಸ್ಯಾಟ್ ಒನ್‌ವೆಬ್ ಮತ್ತು ಜಿಯೊ ಸ್ಯಾಟ್‌ಲೈಟ್ ಕಮ್ಯುನಿಕೇಷನ್ ಈ ಪರವಾನಗಿಯನ್ನು ಪಡೆದಿವೆ. ಸ್ಟಾರ್‌ಲಿಂಕ್ ಈ ಪರವಾನಗಿ ಪಡೆದ ಮೂರನೇ ಕಂಪನಿಯಾಗಿದ್ದು, ಅಮೆಜಾನ್‌ನ ಕೈಪರ್ ಅನುಮತಿಗಾಗಿ ಕಾಯುತ್ತಿದೆ.

ವಾಣಿಜ್ಯ ಉಪಗ್ರಹ ಸಂವಹನದ ತರಂಗಾಂತರದ ಬೆಲೆ, ನಿಯಮ ಮತ್ತು ನಿಬಂಧನೆಗಳ ಕುರಿತು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಸರ್ಕಾರಕ್ಕೆ ಈಚೆಗಷ್ಟೇ ಶಿಫಾರಸು ಸಲ್ಲಿಸಿದೆ. ಹೀಗಾಗಿ ಸೇವೆಗಳನ್ನು ಆರಂಭಿಸಲು ಸ್ಟಾರ್‌ಲಿಂಕ್ ಅನುಮತಿ ಪಡೆದಿದ್ದರೂ, ಕಾಯಬೇಕಿದೆ.

ರೇಡಿಯೊ ತರಂಗಾಂತರದ ಆವರ್ತನಗಳ ಹಂಚಿಕೆಯ ನಂತರ ಸೇವೆಗಳನ್ನು ಆರಂಭಿಸಬಹುದಾಗಿದೆ.

ದೇಶದಲ್ಲಿ ಉಪಗ್ರಹ ಆಧರಿತ ಇಂಟರ್‌ನೆಟ್ ಸೇವೆಯನ್ನು ಒದಗಿಸಲು ಈಗಾಗಲೇ ರಿಲಯನ್ಸ್ ಜಿಯೊ ಮತ್ತು ಭಾರ್ತಿ ಏರ್‌ಟೆಲ್ ಒಪ್ಪಂದ ಮಾಡಿಕೊಂಡಿವೆ.

ಸುದ್ದಿ 2 ನಿಮಿಷ

ಬಾಕಿ ಪಾವತಿಸದ ಚೋಕ್ಸಿ; ಆಸ್ತಿ ಮುಟ್ಟುಗೋಲಿಗೆ ಸೆಬಿ ಸೂಚನೆ

ನವದೆಹಲಿ (ಪಿಟಿಐ): ವಜ್ರದ ಉದ್ಯಮಿ ಹಾಗೂ ಗೀತಾಂಜಲಿ ಜೆಮ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮೆಹುಲ್ ಚೋಕ್ಸಿಗೆ ಸೇರಿದ ಬ್ಯಾಂಕ್ ಖಾತೆಗಳು, ಷೇರುಗಳು, ಮ್ಯೂಚುವಲ್ ಫಂಡ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಆದೇಶಿಸಿದೆ.

ಕಂಪನಿಯ ಷೇರುಗಳ ಮಾರಾಟದಲ್ಲಿ ನಿಯಮ ಉಲ್ಲಂಘಿಸಿದ್ದಕ್ಕಾಗಿ ಚೋಕ್ಸಿಗೆ 2022ರಲ್ಲಿ ಸೆಬಿ ₹1.5 ಕೋಟಿ ದಂಡ ವಿಧಿಸಿತ್ತು. ಆದರೆ, ಚೋಕ್ಸಿ ಅದನ್ನು ಪಾವತಿಸುವಲ್ಲಿ ವಿಫಲರಾಗಿದ್ದರು. ಪ್ರಸಕ್ತ ವರ್ಷದ ಮೇ 15ರಂದು ಸೆಬಿ ನೋಟಿಸ್ ಜಾರಿಗೊಳಿಸಿ, 15 ದಿನದೊಳಗೆ ₹1.5 ಕೋಟಿ ದಂಡ ಮತ್ತು ₹60 ಲಕ್ಷ ಬಡ್ಡಿ ಸೇರಿ ಒಟ್ಟು ₹2.1 ಕೋಟಿ ಪಾವತಿಸಬೇಕು ಎಂದು ಹೇಳಿತ್ತು.

‘ಪಾವತಿ ಮಾಡದೆ ಇದ್ದಲ್ಲಿ ನಿಮಗೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡುವ ಮೂಲಕ ಮೊತ್ತವನ್ನು ವಸೂಲಿ ಮಾಡಲಾಗುವುದು’ ಎಂದು ತಿಳಿಸಿತ್ತು.

ಬಾಕಿ ಮೊತ್ತವನ್ನು ಪಾವತಿಸಲು ಚೋಕ್ಸಿ ಮತ್ತೆ ವಿಫಲರಾಗಿದ್ದಾರೆ. ಹೀಗಾಗಿ ಸೆಬಿ, ಚೋಕ್ಸಿಗೆ ಸೇರಿದ ಬ್ಯಾಂಕ್ ಖಾತೆಗಳು, ಮ್ಯೂಚುವಲ್ ಫಂಡ್‌ಗಳು, ಲಾಕರ್‌ನಿಂದ ಬಾಕಿಯನ್ನು ವಸೂಲು ಮಾಡಿಕೊಳ್ಳುವಂತೆ ಬ್ಯಾಂಕ್‌ಗಳಿಗೆ, ಡೆಪೊಸಿಟರಿಗಳಿಗೆ ಸೂಚಿಸಿದೆ.

ಭಾರತ–ಪಾಕ್ ಸಂಘರ್ಷ: ನಗಣ್ಯ ಪರಿಣಾಮ-ಮಲ್ಹೋತ್ರಾ

ಮುಂಬೈ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವು ದೇಶದ ಆರ್ಥಿಕತೆಯ ಮೇಲೆ ನಗಣ್ಯ ಪರಿಣಾಮ ಬೀರಿದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ 26 ನಾಗರಿಕರು ಮೃತಪಟ್ಟಿದ್ದರು. ಇದಕ್ಕೆ ಪ್ರತಿಯಾಗಿ ಮೇ 7ರಂದು ಭಾರತವು ಪಾಕಿಸ್ತಾನದಲ್ಲಿನ ಭಯೋತ್ಪಾದಕರ ಮೂಲಸೌಕರ್ಯ ಕೇಂದ್ರಗಳ ಮೇಲೆ ದಾಳಿ ನಡೆಸಿತ್ತು.

ಈ ಸಂಘರ್ಷದಿಂದಾಗಿ ಪೂರೈಕೆ ಸರಪಳಿಯಲ್ಲಿ ಅಡಚಣೆ ಉಂಟಾಗಿಲ್ಲ. ಹೀಗಾಗಿ, ದೇಶದ ಆರ್ಥಿಕ ಚಟುವಟಿಕೆ, ಪ್ರಗತಿ, ಹಣದುಬ್ಬರದ ಮೇಲೆ ಪರಿಣಾಮ ಬೀರಿಲ್ಲ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟಾ	
ಚಾಲಿ	39189-43098
ಚಿಪ್ಪು	25669-30099
ಕೋಕ	7019-19999
ಫ್ಯಾಕ್ಟರಿ	6099-26129
ಹೊಸಚಾಲಿ	35100-43099
ಪುತ್ತೂರು	
ಕೋಕ	20000-31500
ಹೊಸತು	26000-49500
ಶಿವಮೊಗ್ಗ	
ಬೆಟ್ಟೆ	51009-58172
ಗೊರಬಲು	17300-31300
ರಾಶಿ	46569-58899
ಸರಕು	63009-99998
ಸಿದ್ದಾಪುರ	
ಬಿಳಿಗೋಟು	25089-31609
ಚಾಲಿ	34099-41099
ಕೋಕ	16699-27339
ಹಳೆಚಾಲಿ	38099-39599
ರಾಶಿ	41499-46599
ತಟ್ಟಿಬೆಟ್ಟೆ	27099-33099
ಶಿರಸಿ	
ಬೆಟ್ಟೆ	26699-40699
ಬಿಳಿಗೋಟು	18699-31601
ಚಾಲಿ	35829-42599
ಕೆಂಪುಗೋಟು	17679-24699
ರಾಶಿ	41208-46899
ಯಲ್ಲಾಪುರ	
ಬಿಳಿಗೋಟು	16800-33950
ಚಾಲಿ	34023-42699
ಕೋಕ	8899-17299
ಕೆಂಪುಗೋಟು	16099-25499
ರಾಶಿ	40000-55695
ತಟ್ಟಿಬೆಟ್ಟೆ	26701-38299

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)



ಆರ್‌ಎಸ್‌ಎಸ್-4	₹193.50
ಆರ್‌ಎಸ್‌ಎಸ್-5	₹188.50
ಗುಡ್ ಲಾಟ್	₹178.50

ಮುಂಬೈ ಧಾರಣೆ (ಶೇಂಗಾ)

06-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1375 (1375)
ಒಂದು ವಾರದ ಡೆಲಿವರಿ	1370 (1370)
ಪಾಮ್ ವಾರದ ಡೆಲಿವರಿ	1143 (1143)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1250)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ರೆಪೊ ಇಳಿಕೆ: ಸಾಲ ಅಗ್ಗ

ಒಂದನೇ ಪುಟದಿಂದ...

ಇದೇ ಸಂದರ್ಭದಲ್ಲಿ ಆರ್‌ಬಿಐ ತನ್ನ ಹಣಕಾಸಿನ ನಿಲುವನ್ನು ಬದಲಾಯಿಸಿದ್ದು, ‘ಹೊಂದಾಣಿಕೆಯ’ ನಿಲುವಿನ ಬದಲು ‘ತಟಸ್ಥ’ ನಿಲುವು ತಳೆದಿದೆ. ಅಂದರೆ, ಮುಂದಿನ ದಿನಗಳಲ್ಲಿ ಲಭ್ಯವಾಗುವ ದತ್ತಾಂಶ ಆಧರಿಸಿ ರೆಪೊ ದರವನ್ನು ಹೆಚ್ಚಿಸುವ ಅಥವಾ ತಗ್ಗಿಸುವ ತೀರ್ಮಾನವನ್ನು ಆರ್‌ಬಿಐ ತೆಗೆದುಕೊಳ್ಳಲಿದೆ. ಆದರೆ, ರೆಪೊ ದರವನ್ನು ಇನ್ನಷ್ಟು ಕಡಿಮೆ ಮಾಡಲು ಹೆಚ್ಚಿನ ಅವಕಾಶ ಇರಲಿಕ್ಕಿಲ್ಲ ಎಂದು ಮಲ್ಹೋತ್ರಾ ಹೇಳಿದ್ದಾರೆ.

ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ರೆಪೊ ದರದಲ್ಲಿನ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸುತ್ತವೆ ಎಂಬುದು ಆರ್‌ಬಿಐನ ನಿರೀಕ್ಷೆ ಎಂದು ಮಲ್ಹೋತ್ರಾ ಹೇಳಿದ್ದಾರೆ.

‘ಆರ್ಥಿಕ ಬೆಳವಣಿಗೆ ದರವನ್ನು ಹೆಚ್ಚಿನ ಮಟ್ಟಕ್ಕೆ ಒಯ್ಯುವ ಉದ್ದೇಶದ ನಡೆಯಾಗಿ ಇಂದಿನ ತೀರ್ಮಾನವನ್ನು ಕಾಣಬೇಕಿದೆ’ ಎಂದು ಅವರು ಹೇಳಿದ್ದಾರೆ. ಆರ್ಥಿಕ ಬೆಳವಣಿಗೆ ದರವು ಶೇ 7ರಿಂದ ಶೇ 8ರಷ್ಟು ಆಗಬೇಕು ಎಂಬ ಮಹತ್ವಾಕಾಂಕ್ಷೆ ಇರುವುದಾಗಿಯೂ ಅವರು ಹೇಳಿದ್ದಾರೆ.

ಮಾರ್ಚ್‌ಗೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆ ದರವು ನಾಲ್ಕು ವರ್ಷಗಳ ಕನಿಷ್ಠ ಮಟ್ಟವಾದ ಶೇ 6.5ಕ್ಕೆ ತಗ್ಗಿದೆ.

ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 3.16ಕ್ಕೆ ಇಳಿಕೆ ಆಗಿದೆ. ಇದು 2019ರ ಜುಲೈ ನಂತರದ ಅತ್ಯಂತ ಕನಿಷ್ಠ ಪ್ರಮಾಣ. ಈ ಆರ್ಥಿಕ ವರ್ಷದಲ್ಲಿ ಹಣದುಬ್ಬರ ಪ್ರಮಾಣ ಕಡಿಮೆ ಇರುವ ಅಂದಾಜು ಮಾಡಿರುವ ಆರ್‌ಬಿಐ, ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಿದೆ.

ಚಿನ್ನದ ಮೇಲೆ ಹೆಚ್ಚು ಸಾಲ

ಮುಂಬೈ (ಪಿಟಿಐ): ಚಿನ್ನವನ್ನು ಅಡಮಾನವಾಗಿ ಇರಿಸಿಕೊಂಡು ನೀಡುವ ಸಾಲದ ಪ್ರಮಾಣವನ್ನು (ಎಲ್‌ಟಿವಿ) ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶೇಕಡ 85ಕ್ಕೆ ಹೆಚ್ಚಿಸಲಿದೆ.

₹2.5 ಲಕ್ಷದವರೆಗಿನ ಸಾಲಗಳಿಗೆ ಇದು ಅನ್ವಯವಾಗಲಿದೆ. ಈಗಿರುವ ನಿಯಮಗಳ ಪ್ರಕಾರ ಅಡಮಾನವಾಗಿ ಇರಿಸಿದ ಚಿನ್ನದ ಶೇ 75ರಷ್ಟು ಮೌಲ್ಯವನ್ನು ಸಾಲದ ರೂಪದಲ್ಲಿ ನೀಡಲಾಗುತ್ತಿದೆ. ಪ್ರಮಾಣವನ್ನು ಹೆಚ್ಚು ಮಾಡಿರುವುದರ ಜೊತೆಗೆ ಒಂದಿಷ್ಟು ಷರತ್ತುಗಳು ಕೂಡ ಇರಲಿವೆ. ಸಾಲದ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಸೇರಿಸಿ ಎಲ್‌ಟಿವಿ ಲೆಕ್ಕ ಹಾಕಲಾಗುತ್ತದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದ್ದಾರೆ. ಈಗ ಎಲ್‌ಟಿವಿ ಲೆಕ್ಕಹಾಕುವಾಗ ಅಸಲನ್ನು ಮಾತ್ರ ಪರಿಗಣಿಸಲಾಗುತ್ತಿದೆ.



‘ಎಲ್‌ಟಿವಿ ಇದುವರೆಗೆ ಶೇ 75 ಆಗಿತ್ತು. ಇದನ್ನು ₹2.5 ಲಕ್ಷದವರೆಗಿನ ಸಣ್ಣ ಸಾಲಗಳಿಗೆ ನಾವು ಶೇ 85ಕ್ಕೆ ಹೆಚ್ಚು ಮಾಡುತ್ತಿದ್ದೇವೆ’ ಎಂದು ಮಲ್ಹೋತ್ರಾ ಹೇಳಿದ್ದಾರೆ. ಚಿನ್ನವನ್ನು ಆಧಾರವಾಗಿ ಇರಿಸಿಕೊಂಡು ನೀಡುವ ಸಾಲಗಳಿಗೆ ಸಂಬಂಧಿಸಿದ ನಿಯಮಗಳಲ್ಲಿ ಇದನ್ನು ಸೇರಿಸಲಾಗುತ್ತದೆ ಎಂದಿದ್ದಾರೆ.

ಸರ್ಕಾರಿ ಸ್ವಾಮ್ಯದ ಹಣಕಾಸು ಸಂಸ್ಥೆಗಳು ಎಲ್‌ಟಿವಿ ಲೆಕ್ಕ ಹಾಕುವಾಗ ಅಸಲು ಮತ್ತು ಬಡ್ಡಿಯನ್ನು ಸೇರಿಸುತ್ತಿವೆ. ಆದರೆ ಕೆಲವು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಸಣ್ಣ ಬ್ಯಾಂಕ್‌ಗಳು ಎಲ್‌ಟಿವಿ ಮೊತ್ತವನ್ನು ಶೇ 88ರವರೆಗೂ ಹಿಗ್ಗಿಸುತ್ತಿವೆ ಎಂದು ಮಲ್ಹೋತ್ರಾ ತಿಳಿಸಿದ್ದಾರೆ. ಚಿನ್ನವನ್ನು ಆಧರಿಸಿದ ಸಾಲಕ್ಕೆ ಸಂಬಂಧಿಸಿದ ಹೊಸ ನಿಯಮಗಳು, ಚಿನ್ನದ ಮಾಲೀಕತ್ವದ ಬಗ್ಗೆಯೂ ಕೆಲವು ಸ್ಪಷ್ಟನೆಗಳನ್ನು ನೀಡಲಿವೆ. ಸಾಲ ಪಡೆಯುವ ವ್ಯಕ್ತಿಗೆ ಚಿನ್ನ ಖರೀದಿಸಿದ ರಸೀದಿಗಳನ್ನು ಒದಗಿಸಲು ಸಾಧ್ಯವಾಗದೆ ಇದ್ದರೆ, ಅವರಿಗೆ ಸ್ವಯಂ–ಘೋಷಣೆ ಸಲ್ಲಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ ಎಂದು ಹೇಳಿದ್ದಾರೆ.

ಚಿನ್ನವನ್ನು ಅಡಮಾನವಾಗಿ ಇರಿಸಿ ₹2.5 ಲಕ್ಷದವರೆಗೆ ಸಾಲ ಪಡೆಯುವುದಿದ್ದರೆ, ಸಾಲ ಪಡೆಯುವವರ ಅರ್ಹತೆಯನ್ನು ನಿರ್ಣಯಿಸುವ ಪ್ರಕ್ರಿಯೆಯು ಇಲ್ಲವಾಗಲಿದೆ.

ಗ್ರಾಹಕರಿಗೆ ಅನುಕೂಲ

ರೆಪೊ ದರ ಇಳಿಕೆಯ ಪ್ರಯೋಜನವನ್ನು ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಪೂರ್ತಿಯಾಗಿ ವರ್ಗಾಯಿಸಿದರೆ, ಗೃಹ, ವಾಹನ ಮತ್ತು ವೈಯಕ್ತಿಕ ಸಾಲದ ಮರುಪಾವತಿ ಕಂತುಗಳು ತುಸು ಕಡಿಮೆ ಆಗಲಿವೆ.

ಆದರೆ, ಎಲ್ಲ ಸಂದರ್ಭಗಳಲ್ಲಿಯೂ ಕಂತುಗಳ ಮೊತ್ತವು ಕಡಿಮೆ ಆಗಬೇಕು ಎಂದೇನೂ ಇಲ್ಲ. ರೆಪೊ ದರವು ತಗ್ಗಿದಾಗ ಕೆಲವು ಬ್ಯಾಂಕ್‌ಗಳು ಗ್ರಾಹಕರಿಗೆ ಎರಡು ಆಯ್ಕೆಗಳನ್ನು ನೀಡುತ್ತವೆ. ಇಎಂಐ (ಕಂತು) ಮೊತ್ತವನ್ನು ಕಡಿಮೆ ಮಾಡಿಕೊಳ್ಳುವುದು ಒಂದು ಆಯ್ಕೆ. ಇಎಂಐ ಮೊತ್ತವನ್ನು ಹಾಗೆಯೇ ಇರಿಸಿಕೊಂಡು, ಕಂತುಗಳ ಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳುವುದು ಇನ್ನೊಂದು ಆಯ್ಕೆ.

ಗ್ರಾಹಕರು ತಮಗೆ ಅನುಕೂಲ ಆಗುವುದನ್ನು ಆಯ್ಕೆ ಮಾಡಿಕೊಳ್ಳಬಹುದು. ಮೊದಲ ಆಯ್ಕೆಯ ಮೊರೆ ಹೋದವರಿಗೆ ಇಎಂಐ ಮೊತ್ತ ಇಳಿಕೆ ಆಗುತ್ತದೆ. ಎರಡನೆಯ ಆಯ್ಕೆಯನ್ನು ಒಪ್ಪಿದವರಿಗೆ ಇಎಂಐ ಮೊತ್ತ ಹಾಗೆಯೇ ಉಳಿದರೂ, ಅವರ ಸಾಲವು ತುಸು ಬೇಗನೆ ಮರುಪಾವತಿ ಆಗುತ್ತದೆ.

ನಿರೀಕ್ಷೆ ಏನು?

- ಗೃಹ ಸಾಲ ತುಸು ಅಗ್ಗವಾಗುವುದರಿಂದ ಮನೆಗಳ ಖರೀದಿ ಹೆಚ್ಚಬಹುದು, ಮನೆ ನಿರ್ಮಾಣ ಚಟುವಟಿಕೆ ಜಾಸ್ತಿ ಆಗಬಹುದು. ಅಲ್ಲದೆ, ಮಧ್ಯಮ ಹಾಗೂ ಪ್ರೀಮಿಯಂ ವರ್ಗದ ಮನೆಗಳಿಗೆ ಬೇಡಿಕೆ ಜಾಸ್ತಿ ಆಗಬಹುದು.
- ಸಾಲವು ತುಸು ಅಗ್ಗವಾಗಲಿರುವ ಕಾರಣಕ್ಕೆ, ಬಂಡವಾಳ ವೆಚ್ಚವನ್ನು ಹೆಚ್ಚಿಸುವುದಕ್ಕೆ ಉದ್ಯಮ ವಲಯಕ್ಕೆ ಒಂದು ಸ್ಪಷ್ಟ ಸಂದೇಶ ನೀಡಿದಂತೆ ಆಗಿದೆ.
- ವೈಯಕ್ತಿಕ ಆದಾಯ ತೆರಿಗೆ ಮಿತಿಯನ್ನು ಬಜೆಟ್‌ನಲ್ಲಿ ಹೆಚ್ಚಿಸಲಾಗಿದ್ದು, ಅದು ಜಾರಿಗೆ ಬಂದಿದೆ. ಈ ಕ್ರಮವು ನಗರ ಪ್ರದೇಶಗಳಲ್ಲಿ ಬೇಡಿಕೆಯನ್ನು ಹೆಚ್ಚಿಸಿದೆ ಎಂಬ ಅಂದಾಜು ಇದೆ. ಈಗ ರೆಪೊ ದರ ಇಳಿಕೆಯ ಕ್ರಮವು ಬೇಡಿಕೆ ಹೆಚ್ಚಿಸುವುದಕ್ಕೆ ಇನ್ನಷ್ಟು ಉತ್ತೇಜನ ನೀಡಲಿದೆ ಎಂಬುದು ತಜ್ಞರ ಲೆಕ್ಕಾಚಾರ.

ರೆಪೊ ಇಳಿಕೆಗೆ ಆರ್‌ಬಿಐ ನೀಡಿದ ಕಾರಣಗಳು

- ಹಣದುಬ್ಬರ ಪ್ರಮಾಣವು ಕಳೆದ ಆರು ತಿಂಗಳಲ್ಲಿ ಗಮನಾರ್ಹವಾಗಿ ತಗ್ಗಿದೆ. ಅದು ಈಗ ನಿಗದಿತ ಮಟ್ಟದ ಒಳಗೆಯೇ ಇದೆ. ಹಣದುಬ್ಬರ ಪ್ರಮಾಣವು 2025–26ರಲ್ಲಿ ಶೇ 3.7ರಷ್ಟು ಇರುವ ಅಂದಾಜು ಇದೆ.
- ಆರ್ಥಿಕ ಬೆಳವಣಿಗೆಯು ಗುರಿಗಿಂತ ಕಡಿಮೆ ಮಟ್ಟದಲ್ಲಿದೆ. ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ ಹೆಚ್ಚಾಗಿದೆ. ಹೀಗಾಗಿ ದೇಶದಲ್ಲಿ ಬೇಡಿಕೆಯನ್ನು ಹೆಚ್ಚಿಸುವ ಕ್ರಮ ಕೈಗೊಳ್ಳಬೇಕಾಗುತ್ತದೆ.

ಸಿಆರ್‌ಆರ್ ಇಳಿಕೆ, ಹೆಚ್ಚು ನಗದು

ಮುಂಬೈ (ಪಿಟಿಐ): ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ಶೇಕಡ 1ರಷ್ಟು ಕಡಿಮೆ ಮಾಡಲು ಆರ್‌ಬಿಐ ತೀರ್ಮಾನಿಸಿರುವ ಪರಿಣಾಮವಾಗಿ ಅರ್ಥ ವ್ಯವಸ್ಥೆಯ ಉತ್ಪಾದಕ ವಲಯಗಳಿಗೆ ಸಾಲವಾಗಿ ನೀಡಲು ಬ್ಯಾಂಕ್‌ಗಳಿಗೆ ₹2.5 ಲಕ್ಷ ಕೋಟಿ ನಗದು ಲಭ್ಯವಾಗಲಿದೆ.


ಈ ವರ್ಷದ ನವೆಂಬರ್ 29ಕ್ಕೆ ಕೊನೆಗೊಳ್ಳುವಂತೆ ನಾಲ್ಕು ಸಮಾನ ಹಂತಗಳಲ್ಲಿ ಸಿಆರ್‌ಆರ್ ಪ್ರಮಾಣವು ಶೇ 3ಕ್ಕೆ ಇಳಿಕೆ ಆಗಲಿದೆ. ಅಂದರೆ, ವಾಣಿಜ್ಯ ಬ್ಯಾಂಕ್‌ಗಳು ಆರ್‌ಬಿಐನಲ್ಲಿ ಇರಿಸಬೇಕಿರುವ ನಗದು ಪ್ರಮಾಣವು ಶೇ 3ಕ್ಕೆ ತಗ್ಗಲಿದೆ. ಹೀಗಾಗಿ ಈ ಬ್ಯಾಂಕ್‌ಗಳಿಗೆ ಸಾಲ ನೀಡಲು ಹೆಚ್ಚು ಹಣ ಸಿಗಲಿದೆ.


ಸಿಆರ್‌ಆರ್ ಪ್ರಮಾಣವನ್ನು ಇದೇ ರೀತಿ ಶೇ 1ರಷ್ಟು ಪ್ರಮಾಣದಲ್ಲಿ 2020ರ ಮಾರ್ಚ್ 27ರಂದು ತಗ್ಗಿಸಲಾಗಿತ್ತು.

‘ಸಿಆರ್‌ಆರ್ ಇಳಿಕೆ ಮಾಡುವುದರಿಂದಾಗಿ ಅಂದಾಜು ₹2.5 ಲಕ್ಷ ಕೋಟಿ ಹಣವು ಈ ವರ್ಷದ ಡಿಸೆಂಬರ್ ವೇಳೆಗೆ ಬ್ಯಾಂಕಿಂಗ್ ವ್ಯವಸ್ಥೆಗೆ ಸಿಗಲಿದೆ’ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಶುಕ್ರವಾರ ತಿಳಿಸಿದ್ದಾರೆ.

ಸಾಲ ನೀಡಲು ಹೆಚ್ಚಿನ ಹಣ ಲಭ್ಯವಾಗುವುದರಿಂದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ಸಿಗಲಿದೆ.









ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವ ರಾಜೀನಾಮೆಗೆ ವಿಪಕ್ಷಗಳ ಆಗ್ರಹ

ಸಾವಿಗೆ ಸಿದ್ದರಾಮಯ್ಯ ಕಾರಣ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ ಉಂಟಾಗಿ 11 ಮಂದಿ ಸಾಯುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಕಾರಣ. ವಿಜಯೋತ್ಸವ ಬೇಡ ಎಂದು ಪೊಲೀಸರು ಹೇಳಿದ್ದರೂ ಕಾರ್ಯಕ್ರಮ ನಡೆಸಲೇಬೇಕು ಎಂದು ಸಿದ್ದರಾಮಯ್ಯ ತಾಕೀತು ಮಾಡಿದ್ದರು. ಮುಖ್ಯಮಂತ್ರಿ ಸ್ಥಾನಕ್ಕೆ ಅವರು ರಾಜೀನಾಮೆ ನೀಡಬೇಕು' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

ಬಿಜೆಪಿ ನಾಯಕರ ಜತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ವಿಜಯೋತ್ಸವ ಆಚರಣೆಗೆ ಅನುಮತಿ ನೀಡಿ ಎಂದು ಆರ್‌ಸಿಬಿಯವರು ಸಲ್ಲಿಸಿದ್ದ ಮನವಿಯನ್ನು ಕಬ್ಬನ್ ಪಾರ್ಕ್ ಪೊಲೀಸರು ತಿರಸ್ಕರಿಸಿದ್ದರು. ಕಾರ್ಯಕ್ರಮ ಆಯೋಜಿಸಬೇಡಿ ಎಂದು ಹೇಳಿದ್ದರು' ಎಂದರು.

'ಇವರ ತಪ್ಪನ್ನು ಮುಚ್ಚಿಹಾಕಿಕೊಳ್ಳಲು ಪೊಲೀಸ್ ಅಧಿಕಾರಿಗಳನ್ನು ಬಲಿಕೊಟ್ಟಿದ್ದಾರೆ' ಎಂದರು.

'ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಜೂನ್ 4ರ ಬೆಳಿಗ್ಗೆ 7ರ ವೇಳೆಗೆ ಪೊಲೀಸ್ ಕಮಿಷನರ್‌ಗೆ ಕರೆ ಮಾಡಿ, ಮೆರವಣಿಗೆ ನಡೆಸಲು ಹಾಗೂ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ನೀಡಿ ಎಂದು ಒತ್ತಡ ಹೇರಿದ್ದಾರೆ. ಅನುಮತಿ ನೀಡಲು ಕಮಿಷನರ್ ಅವರು ಆಗಲೂ ನಿರಾಕರಿಸಿದ್ದರು' ಎಂದು ಕುಮಾರಸ್ವಾಮಿ ವಿವರಿಸಿದರು.

'ಆರ್‌ಸಿಬಿ ಪ್ರಮುಖರೊಂದಿಗೆ ಮುಖ್ಯಮಂತ್ರಿಯ ಮನೆಗೆ ಹೋದ ಗೋವಿಂದರಾಜು, ಅಲ್ಲಿಗೆ ಕಮಿಷನರ್ ಅವರನ್ನು ಕರೆಸಿಕೊಂಡರು. ಸಿದ್ದರಾಮಯ್ಯ ಅವರು ಕಮಿಷನರ್‌ಗೆ, 'ನಾನು ರಾಜ್ಯದ ಮುಖ್ಯಮಂತ್ರಿ ಹೇಳುತ್ತಿದ್ದೇನೆ. ಕಾರ್ಯಕ್ರಮ ನಡೆಸಲು ಬಿಡಿ' ಎಂದು ತಾಕೀತು ಮಾಡಿದರು. ಕಾರ್ಯಕ್ರಮ ಮತ್ತು ನಂತರ ನಡೆದ ದುರಂತಕ್ಕೆಲ್ಲಾ ಸಿದ್ದರಾಮಯ್ಯನವರೇ ಹೊಣೆ' ಎಂದು ಆರೋಪಿಸಿದರು.

'ವಿಧಾನಸೌಧದಲ್ಲಿ ಇಂಥದ್ದೊಂದು ಕಾರ್ಯಕ್ರಮ ನಡೆದರೆ ಅದರ ಶ್ರೇಯ ಮುಖ್ಯಮಂತ್ರಿಗೆ ಹೋಗುತ್ತದೆ. ಬದಲಿಗೆ ನನಗೇ ಸಿಗಲಿ ಎಂದು ಡಿ.ಕೆ.ಶಿವಕುಮಾರ್ ಕನಕಪುರದ ನ್ಯಾಯಾಲಯದಿಂದ ಓಡಿ ಬಂದರು. ಆರ್‌ಸಿಬಿ ತಂಡವನ್ನು ತಾವೇ ಸ್ವಾಗತಿಸಿ, ಹೋಟೆಲ್‌ಗೂ ತಾವೇ ಕರೆದುಕೊಂಡು ಬಿಟ್ಟುಬಂದರು. ವಿಧಾನಸೌಧಕ್ಕೂ ಕರೆದುಕೊಂಡು ಬಂದರು. ಅಲ್ಲಿ ಸನ್ಮಾನದ ಬದಲಿಗೆ ಆಟಗಾರರಿಗೆ ಅವಮಾನ ಮಾಡಿದರು. ತಾವು ಮತ್ತು ತಮ್ಮ ಮಕ್ಕಳು, ಮೊಮ್ಮಕ್ಕಳ ಫೋಟೊಶೂಟ್ ನಡೆಸಿದರು. ಜನರು ಸಾಯುತ್ತಿದ್ದಾಗಲೂ ರಾಜ್ಯದ ಉಪ ಮುಖ್ಯಮಂತ್ರಿ ಟ್ರೋಫಿಗೆ ಮುತ್ತಿಡುತ್ತಿದ್ದರು' ಎಂದರು.

'ವಿಧಾನಸೌಧದಲ್ಲಿ ಕಾರ್ಯಕ್ರಮ ಆಯೋಜಿಸಲು ಒತ್ತಡ ತಂದ ರಾಜಕೀಯ ಕಾರ್ಯದರ್ಶಿಯನ್ನು ಮೊದಲು ಆ ಹುದ್ದೆಯಿಂದ ಕಿತ್ತುಹಾಕಬೇಕು. ನೈತಿಕತೆ ಇದ್ದದ್ದೇ ಆದರೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಮನೆಗೆ ಹೋಗಬೇಕು. ಇಲ್ಲವೇ ಕಾಂಗ್ರೆಸ್ ಹೈಕಮಾಂಡ್ ಈ ಮೂವರನ್ನೂ ಕಿತ್ತೊಗೆಯಬೇಕು' ಎಂದರು.

'ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರದ್ದೇ ತಪ್ಪು ಎಂಬುದರ ಬಗ್ಗೆ ಜಾಗೃತಿ ಮೂಡಿಸಲು ಜೆಡಿಎಸ್ ಮತ್ತು ಬಿಜೆಪಿ ನಾಯಕರು ಒಟ್ಟಿಗೇ ಜನರ ಬಳಿಗೆ ಹೋಗುತ್ತೇವೆ. ಕಾನೂನು ಹೋರಾಟವನ್ನೂ ನಡೆಸುತ್ತೇವೆ. ಈ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನ ಕರೆಯಲಿ ಎಂದು ಮನವಿ ಸಲ್ಲಿಸುವ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದರು.



ಜಂಟಿ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಮಾತನಾಡಿದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌. ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಇದ್ದಾರೆ ಪ್ರಜಾವಾಣಿ ಚಿತ್ರ

ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶ. ಆಮೇಲೆ ಕುನ್ಹಾ ರಿಂದ ಮತ್ತು ಸಿಐಡಿಯಿಂದಲೂ ತನಿಖೆಯಂತೆ. ಯಾವುದೂ ಬೇಡ. ಸುಪ್ರಿಂ ಕೋರ್ಟ್ ಸಿಜೆಐ ಅವರಿಂದ ತನಿಖೆಯಾಗಬೇಕು

ಆರ್.ಅಶೋಕ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಸಿದ್ದರಾಮಯ್ಯ, ಶಿವಕುಮಾರ್, ಪರಮೇಶ್ವರ ನಿಜವಾದ ಆರೋಪಿಗಳು. ಈ ಮೂವರನ್ನು ಕ್ರಮವಾಗಿ ಎ1, ಎ2, ಎ3 ಆಗಿಸಿ ಎಫ್‌ಐಆರ್ ದಾಖಲಿಸಬೇಕು

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ


'ಮೊಮ್ಮಗನ ಜತೆ ದೋಸೆ ತಿನ್ನುತ್ತಿದ್ದ ಸಿ.ಎಂ'

'ಆರ್‌ಸಿಬಿ ವಿಜಯೋತ್ಸವದ ವೇಳೆ ಕ್ರಿಕೆಟ್ ಅಭಿಮಾನಿಗಳು ಸತ್ತಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮೊಮ್ಮಗನ ಜತೆಗೆ ಜನಾರ್ದನ ಹೋಟೆಲ್‌ಗೆ ಹೋಗಿ ದೋಸೆ, ಬಾದಷಹ ತಿನ್ನುತ್ತಿದ್ದರು' ಎಂದು ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಆಗ ಸುದ್ದಿಗಾರರು, 'ಜನಾರ್ದನ ಹೋಟೆಲ್‌ನಲ್ಲಿ ಇದ್ದಾಗ ಕಾಲ್ತುಳಿತ ಮತ್ತು ಸಾವಿನ ಬಗ್ಗೆ ನನಗೆ ಮಾಹಿತಿಯೇ ಇರಲಿಲ್ಲ ಎಂದು ಮುಖ್ಯಮಂತ್ರಿ ಹೇಳಿದ್ದಾರೆ' ಎಂದು ಪ್ರಸ್ತಾಪಿಸಿದರು.

ಅದಕ್ಕೆ ಕುಮಾರಸ್ವಾಮಿ ಅವರು, '3.10ರ ವೇಳೆಗೆ ಒಬ್ಬರು ಸತ್ತಿದ್ದಾರೆ ಎಂಬ ಮಾಹಿತಿ ನನಗೇ ದೊರೆತಿತ್ತು. ಅವರಿಗೆ ಮಾಹಿತಿ ಇರಲಿಲ್ಲ ಎಂಬುದು ನಿಜವೇ ಆಗಿದ್ದರೆ, ಇವರೆಂತಹ ಮುಖ್ಯಮಂತ್ರಿ' ಎಂದು ಪ್ರಶ್ನಿಸಿದರು.

'ಗುಪ್ತಚರ ಇಲಾಖೆ ಸಿದ್ದರಾಮಯ್ಯನವರೇ ನಿರ್ವಹಿಸುತ್ತಿದ್ದಾರೆ. ಹೀಗಿದ್ದೂ ಅವರಿಗೆ ಇಂತಹ ಮಹತ್ವದ ಮಾಹಿತಿ ಗೊತ್ತಾಗಿಲ್ಲ ಎಂದಾದರೆ ಒಂದೋ ಗುಪ್ತಚರ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ಇಲ್ಲವೇ ಆಡಳಿತದ ಮೇಲೆ ಸಿದ್ದರಾಮಯ್ಯನವರಿಗೆ ಹಿಡಿತವೇ ಇಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿರುವಾಗ ಇಂತಹದ್ದನ್ನು ನಾನು ನಿರೀಕ್ಷಿಸಿರಲಿಲ್ಲ' ಎಂದು ಅವರು ಹೇಳಿದರು.



ಕಾಂಗ್ರೆಸ್–ಬಿಜೆಪಿ ವಾಕ್ಸಮರ

ಪಹಲ್ಗಾಮ್ ಘಟನೆಯಲ್ಲೂ ಅಮಾಯಕರು ಸತ್ತಿರಲಿಲ್ಲವೆ? ಅದೂ ಕೇಂದ್ರ ಸರ್ಕಾರದ ವೈಫಲ್ಯವಲ್ಲವೆ? ಪ್ರಧಾನಿ ನರೇಂದ್ರ ಮೋದಿ ಅವರಿಂದ ಯಾಕೆ ರಾಜೀನಾಮೆ ಕೇಳಲಿಲ್ಲ? ದುರಂತದಲ್ಲೂ ರಾಜಕೀಯ ಮಾಡುವುದು ಬಿಜೆಪಿಯ ಕೆಟ್ಟ ಚಾಳಿ. ಕಾಲ್ತುಳಿತದ ದುರಂತವನ್ನು ಪಹಲ್ಗಾಮ್ ಘಟನೆಗೆ ಹೋಲಿಸಲಾರೆ. 'ಆಪರೇಷನ್ ಸಿಂಧೂರ' ಯಾಕೆ ನಿಲ್ಲಿಸಿದರು ಎಂಬ ಪ್ರಶ್ನೆಗೆ ಬಿಜೆಪಿಯವರು ಇಲ್ಲಿಯವರೆಗೆ ಉತ್ತರ ಕೊಟ್ಟಿದ್ದಾರಾ?

ಮಧು ಬಂಗಾರಪ್ಪ, ಶಿಕ್ಷಣ ಸಚಿವ

ರಾಜ್ಯದಲ್ಲಿ ಏನೇ ಆದರೂ ಅದಕ್ಕೆ ಡಿ.ಕೆ. ಶಿವಕುಮಾರ್ ಮಾತ್ರ ಕಾರಣ. ವಿರೋಧ ಪಕ್ಷದವರಿಗೆ ಅವರನ್ನು ಟಾರ್ಗೆಟ್ ಮಾಡುವುದನ್ನು ಬಿಟ್ಟರೆ ಬೇರೇನೂ ಗೊತ್ತಿಲ್ಲ. ಎಚ್‌.ಡಿ. ಕುಮಾರಸ್ವಾಮಿ ಡ್ರಾಮಾ ಮಾಸ್ಟರ್. ಯಾವ ಸಂದರ್ಭದಲ್ಲಿ ಯಾವ ಡ್ರಾಮಾ ಮಾಡಬೇಕು, ವಿಷಯಗಳನ್ನು ಯಾವ ರೀತಿ ತಿರುಚಬೇಕು ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿದೆ. ನಟ ರಾ.ರಾಜಕುಮಾರ್ ನಿಧನರಾದಾಗಲೂ ಅವಘಡ ಸಂಭವಿಸಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಎಚ್‌ಡಿಕೆ ರಾಜೀನಾಮೆ ಕೊಟ್ಟಿದ್ರಾ?

ಡಿ.ಕೆ. ಸುರೇಶ್, ಮಾಜಿ ಸಂಸದ

ಪೊಲೀಸ್ ಅಧಿಕಾರಿಗಳನ್ನು ಬಲಿಪಶು ಮಾಡಿಲ್ಲ. ಆದರೆ, ಅನುಮತಿ ಇಲ್ಲದೆ ಕಾರ್ಯಕ್ರಮಕ್ಕೆ ಅವಕಾಶ ನೀಡಿರುವುದಕ್ಕೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಸರ್ಕಾರವೇ ನೇರ ಹೊಣೆ ಅಲ್ಲ. ಉತ್ತರ ಪ್ರದೇಶದಲ್ಲಿ ನಡೆದ ಕುಂಭಮೇಳದ ಕಾಲ್ತುಳಿತದಲ್ಲಿ ಪ್ರವಾಸಿಗರು ಸತ್ತರು. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರು, ಸೈನಿಕರೂ ಸತ್ತರು. ಅದಕ್ಕೆಲ್ಲ ಕೇಂದ್ರ ಸರ್ಕಾರವೇ ಹೊಣೆಯೇ?

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಕಾಲ್ತುಳಿತ ದುರ್ಘಟನೆಗೆ ಸಂಬಂಧಿಸಿ ಬೆಂಗಳೂರು ಪೊಲೀಸ್ ಕಮಿಷನರ್ ದಯಾನಂದ್ ಅವರ ಅಮಾನತು ನಿರ್ಧಾರವನ್ನು ಯಾವ ಆಧಾರದಲ್ಲಿ ತೆಗೆದುಕೊಳ್ಳಲಾಗಿದೆ ಎಂದು ತಿಳಿದಿಲ್ಲ. ಅವರು ಉತ್ತಮ ಅಧಿಕಾರಿ, ಭ್ರಷ್ಟಾಚಾರ ವಿರೋಧಿ.

ಬಿ.ಕೆ ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

ಘಟನೆ ಗೊತ್ತಾದ ತಕ್ಷಣ ಸಿದ್ದರಾಮಯ್ಯ ಆಸ್ಪತ್ರೆಗೆ ಹೋದರು. ಡಿ.ಕೆ. ಶಿವಕುಮಾರ್ ನೆರವಿಗೆ ಧಾವಿಸಿದರು. ಶಿವಕುಮಾರ್ ಅವರು ಭಾವುಕರಾಗಿ ಕಣ್ಣೀರು ಹಾಕಿದ್ದನ್ನೂ ಗೇಲಿ ಮಾಡುವ ಬಿಜೆಪಿಯವರ ನಡೆ ನಾಚಿಕೆಗೇಡು. ಈ ವಿಷಯವನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು

ಎಚ್‌.ಕೆ.ಪಾಟೀಲ, ಪ್ರವಾಸೋದ್ಯಮ ಸಚಿವ

ಮೃತಪಟ್ಟ ಆರ್‌ಸಿಬಿ ಅಭಿಮಾನಿಗಳ ಕುಟುಂಬಗಳಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಮತ್ತು ಆರ್‌ಸಿಬಿ ತಂಡದ ಆಡಳಿತ ಮಂಡಳಿ ತಲಾ ₹1 ಕೋಟಿ ಪರಿಹಾರ ನೀಡಬೇಕು.

ಲಕ್ಷ್ಮೀ ಹೆಬ್ಬಾಳಕರ, ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಆರ್‌ಸಿಬಿ ಆಟಗಾರರೊಂದಿಗೆ ಫೋಟೊ ತೆಗೆಸಿಕೊಂಡರೆ, ವಿಜಯದಲ್ಲಿ ತಮ್ಮ ಪಾಲು ಸಿಗುತ್ತದೆಂಬ ಜನಪ್ರಿಯತೆಯ ಭ್ರಮೆಯೇ ಕಾಲ್ತುಳಿತದ ಅನಾಹುತಕ್ಕೆ ಕಾರಣ.ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಆರ್‌ಸಿಬಿ ಕ್ರಿಕೆಟ್ ತಂಡದ ಸಂಭ್ರಮಾಚರಣೆ ವೇಳೆ ನಡೆದ ದುರಂತಕ್ಕೆ ಮುಖ್ಯಮಂತ್ರಿ ಮತ್ತು ಸಚಿವರ ಸೆಲ್ಫಿ–ರೀಲ್ಸ್ ಹುಚ್ಚು ಅಲ್ಲದೇ ಸರ್ಕಾರದ ವೈಫಲ್ಯವೂ ಕಾರಣ. ಪ್ರಚಾರಪ್ರಿಯತೆ ಮತ್ತು ನಿರ್ಲಕ್ಷ್ಯದಿಂದ ಅವಘಡ ನಡೆದಿದೆ' ಎಂದು

ಬಿ. ಶ್ರೀರಾಮುಲು, ಮಾಜಿ ಸಚಿವ

ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ದುರಂತಕ್ಕೆ ಸಿಎಂ, ಡಿಸಿಎಂ, ಗೃಹ ಸಚಿವರ ಬೇಜವಾಬ್ದಾರಿ ಕಾರಣ. ತಮ್ಮ ತಪ್ಪು ಮುಚ್ಚಿಕೊಳ್ಳಲು ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಬಿ.ಎಲ್‌.ಸಂತೋಷ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

'ಎಚ್‌ಡಿಕೆ ಅವಧಿಯಲ್ಲೂ ಆಗಿತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಕಾಲ್ತುಳಿತ ಮೊದಲ ಪ್ರಕರಣ ನಡೆದಿದ್ದೇ ಎಚ್‌.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಎಂದು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ನಟ ರಾಜ ಕುಮಾರ್ ಅವರ ಸಾವಿನ ಸಮಯದಲ್ಲಿ ಅಂದಿನ ಸಮ್ಮಿಶ್ರ ಸರ್ಕಾರದ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯದಿಂದ ಹಲವರು ಪ್ರಾಣ ಕಳೆದುಕೊಂಡಿದ್ದರು. ಎಂಟು ಜನರ ಹತ್ಯೆಯಾಯಿತು. ಲಾಠಿಚಾರ್ಜ್, ಗೋಲಿಬಾರ್ ನಡೆಯಿತು. ಪೊಲೀಸ್ ಕಾನ್‌ಸ್ಟೆಬಲ್ ಹತ್ಯೆಯಾಯಿತು. ಆದರೂ, ಯಾವ ಅಧಿಕಾರಿಯ ಮೇಲೂ ಕ್ರಮ ತೆಗೆದುಕೊಳ್ಳಲಿಲ್ಲ. ಜನರ ಪ್ರಶ್ನೆಗಳಿಗೆ ಉತ್ತರ ನೀಡಲಿಲ್ಲ. ಕ್ಷಮೆ ಕೇಳಲಿಲ್ಲ. 'ಸುಮಾರು 6-7 ಲಕ್ಷ ಜನ ಸೇರಬಹುದು ಎಂದು ಅಂದಾಜಿಸಿರಲಿಲ್ಲ' ಎನ್ನುವ ಮೂಲಕ ಕುಮಾರಸ್ವಾಮಿ ಪಲಾಯನ ಮಾಡಿದ್ದರು' ಎಂದು ದೂರಿದರು.

'ಎಸ್‌.ಎಂ. ಕೃಷ್ಣ ಅವರ ಅವಧಿಯಲ್ಲಿ ರಾಜಕುಮಾರ್ ಅವರ ಅಪಹರಣವಾದಾಗ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಂಡರು' ಎಂದರು.

'ರಾಜ್ ಕುಟುಂಬ ಮಾಹಿತಿ ನೀಡಿರಲಿಲ್ಲ'

'ರಾಜ್‌ಕುಮಾರ್ ಅವರು ನಿಧನರಾದಾಗ, ಅವರ ಕುಟುಂಬದವರು ಸರ್ಕಾರಕ್ಕೆ ಮಾಹಿತಿ ನೀಡಿರಲಿಲ್ಲ. ಬದಲಿಗೆ ಆಸ್ಪತ್ರೆಯಲ್ಲೇ ಆ ವಿಚಾರವನ್ನು ಘೋಷಿಸಿಬಿಟ್ಟರು' ಎಂದು ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

'ದೊಡ್ಡ ವ್ಯಕ್ತಿಗಳು ಮೃತಪಟ್ಟಾಗ, ಎಲ್ಲ ಸಿದ್ಧತೆ ಮಾಡಿಕೊಂಡು ಆ ವಿಷಯವನ್ನು ಬಹಿರಂಗಪಡಿಸುವುದು ವಾಡಿಕೆ. ಸಿದ್ಧತೆ ಮಾಡಿಕೊಳ್ಳಬೇಕು ಮತ್ತು ಗೊಂದಲ ಉಂಟಾಗಬಾರದು ಎಂದೇ ಗೋಪ್ಯತೆ ಕಾಪಾಡಿಕೊಳ್ಳಲಾಗುತ್ತದೆ. ಆದರೆ ರಾಜ್‌ಕುಮಾರ್ ಕುಟುಂಬದವರು ಆ ಗೋಪ್ಯತೆ ಕಾಪಾಡಲಿಲ್ಲ' ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಅಂಬರೀಷ್ ಅವರು ಮೃತಪಟ್ಟಾಗ ನಾನೇ ಮುಖ್ಯಮಂತ್ರಿಯಾಗಿದ್ದೆ. ಆಗ ಗಲಾಟೆ ಆಗಿತ್ತೇ? ಪುನೀತ್ ರಾಜ್‌ಕುಮಾರ್ ಮೃತಪಟ್ಟಾಗ ಬಿಜೆಪಿ ಅಧಿಕಾರದಲ್ಲಿ ಇತ್ತು. ಆಗ ಗಲಾಟೆ ಆಗಿತ್ತೇ' ಎಂದು ಪ್ರಶ್ನಿಸಿದರು.

ಕಣ್ಣೀರು ಕಥನಗಳ ಚರ್ಚೆಗೆ ಆಹ್ವಾನ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಬೆಂಗಳೂರು: 'ಬೇರೆಯವರು ಯಾವಾಗ ಕಣ್ಣೀರು ಹಾಕಿದ್ದಾರೆ. ಎಷ್ಟು ಕುಟುಂಬಗಳಿಗೆ ಕಣ್ಣೀರು ಹಾಕಿಸಿದ್ದಾರೆ, ಎಷ್ಟು ಕುಟುಂಬಗಳ ಕಣ್ಣೀರು ಒರೆಸಿದ್ದಾರೆ ಎಂದು ಬಹಿರಂಗ ಚರ್ಚೆ ಮಾಡೋಣ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಸವಾಲು ಹಾಕಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಲ್ತುಳಿತದಲ್ಲಿ ಮೃತರಾದವರ ನೆನೆದು ನಾನು ಭಾವುಕನಾಗಿದ್ದಕ್ಕೆ ಕಣ್ಣಲ್ಲಿ ನೀರು ಬಂತು. ಅದನ್ನೂ ಟೀಕೆ ಮಾಡಿದ್ದಾರೆ, ಪರವಾಗಿಲ್ಲ. ಇವರು ಯಾವ, ಯಾವ ಸಂದರ್ಭದಲ್ಲಿ, ಎಲ್ಲೆಲ್ಲಿ ಕಣ್ಣೀರಾಕಿದ್ದಾರೆ? ಅವು ಏನಾದವು? ಎಷ್ಟು ಕುಟುಂಬಗಳು ಕಣ್ಣೀರು ಹಾಕಿದ್ದವು? ಇವರು ಎಷ್ಟು ಕುಟುಂಬಗಳ ಕಣ್ಣೀರು ಒರೆಸಿದ್ದಾರೆ? ಈ ಎಲ್ಲಾ ವಿಚಾರಗಳನ್ನು ಅಧಿವೇಶನದಲ್ಲಿ ಚರ್ಚೆ ಮಾಡಲಿ' ಎಂದರು.

ದುರಂತದ ಹೊಣೆ ಹೊತ್ತು ರಾಜೀನಾಮೆ ನೀಡುವಂತೆ ವಿರೋಧ ಪಕ್ಷಗಳು ಕೇಳುತ್ತಿವೆ. ಅವರ ಆಸೆ ಈಡೇರಿಸೋಣ

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

'ನನಗೆ ಯಾವುದೇ ಇಮೇಜ್‌ನ ಅಗತ್ಯವಿಲ್ಲ. ಆರ್‌ಸಿಬಿ ಗೆದ್ದ ಖುಷಿಯಲ್ಲಿ ಯುವ ಅಭಿಮಾನಿಗಳು ಸಂಭ್ರಮಾಚರಣೆ ಮಾಡಲು ಬಯಸಿದ್ದಕ್ಕೆ ಬಿಜೆಪಿ, ಜೆಡಿಎಸ್ ನಾಯಕರು ಏನೆಲ್ಲಾ ಹೇಳಿಕೆ ನೀಡಿದ್ದರು. ನಂತರ ಹೇಗೆ ಉಲ್ಟಾ ಹೊಡೆದರು ಎನ್ನುವುದನ್ನು ಬಹಿರಂಗಪಡಿಸಲಿ. ಹೆಣದ ಮೇಲೆ ಮಾಡುವ ಹೀನ ರಾಜಕಾರಣ' ಎಂದು ಟೀಕಿಸಿದರು.

'ಕೆಎಸ್‌ಸಿಎ ಕಾರ್ಯಕ್ರಮ ಆಯೋಜನೆ ಮಾಡಿತ್ತು. ಪರಿಸ್ಥಿತಿ ಗಂಭೀರವಾಗುತ್ತಿದೆ. 10 ನಿಮಿಷದಲ್ಲಿ ಕಾರ್ಯಕ್ರಮ ಮುಗಿಸಬೇಕು ಎಂದು ಅಧಿಕಾರಿಗಳು ಕೇಳಿಕೊಂಡರು. ಹಾಗಾಗಿ, ಕ್ರೀಡಾಂಗಣಕ್ಕೆ ಹೋಗಿದ್ದೆ. ಪೊಲೀಸ್ ಅಧಿಕಾರಿಗಳು ಬಹಿರಂಗ ಮೆರವಣಿಗೆಗೆ ಅವಕಾಶ ಬೇಡ ಎಂದಿದ್ದರಿಂದ ಅವರ ಜತೆ ಚರ್ಚೆ ಮಾಡಿದೆ. ಮಧ್ಯಾಹ್ನ 3.30ರ ವೇಳೆಗೆ ಅಭಿಮಾನಿ ಮೃತಪಟ್ಟಿದ್ದರು ಎಂಬ ಮಾಹಿತಿ ಇರಲಿಲ್ಲ' ಎಂದರು.

'ಕುಮಾರಸ್ವಾಮಿಗೆ ನನ್ನ ಮೇಲೆ ಲವ್'

'ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ನನ್ನನ್ನು ಕಂಡರೆ ಬಹಳ ಪ್ರೀತಿ. ಅದಕ್ಕಾಗಿಯೇ ನನ್ನ ರಾಜೀನಾಮೆ ಕೇಳುತ್ತಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ನನ್ನ ಹಾಗೂ ಸರ್ಕಾರದ ವಿರುದ್ಧ ಜಂಟಿ ಹೋರಾಟ ಮಾಡುವುದಾಗಿ ಬಿಜೆಪಿ–ಜೆಡಿಎಸ್ ಹೇಳಿವೆ. ಅವರು ಲೋಕಸಭಾ ಚುನಾವಣೆಯ ನಂತರ ಜಂಟಿಯಾಗಿಯೇ ಇದ್ದಾರೆ. ಇನ್ನೂ 10 ಜನರನ್ನು ಹೆಚ್ಚಿಗೆ ಸೇರಿಸಿಕೊಂಡು ಹೋರಾಟ ಮಾಡಲಿ. ತೆರೆಮರೆಯಲ್ಲಿ ಯಾರು ಏನು ಮಾಡುತ್ತಿದ್ದಾರೆ ಎಂಬುದು ನಮಗೂ ಗೊತ್ತಿದೆ' ಎಂದರು.

'ಬಿಜೆಪಿ ರಾಜಕೀಯ ಮಾಡುತ್ತಿದೆ'



ಸಿದ್ದರಾಮಯ್ಯ

'ಕಾಲ್ತುಳಿತದ ಪ್ರಕರಣದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ ಮತ್ತು ರಾಜಕೀಯಕ್ಕಾಗಿ ಅವರು ಮಾತನಾಡುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೂರಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳನ್ನು ಬಲಿಪಶು ಮಾಡಲಾಗಿದೆ' ಎಂಬ ವಿರೋಧ ಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಈ ವಿಚಾರದಲ್ಲಿ ನಾನು ರಾಜಕೀಯ ಮಾಡುವುದಿಲ್ಲ. ಮೇಲ್ನೋಟಕ್ಕೆ ಯಾರು ಜವಾಬ್ದಾರರು ಇದ್ದಾರೆ, ಯಾರು ಲೋಪ ಎಸಗಿದ್ದಾರೆ ಅಂತಹವರ ಮೇಲೆ ಮಾತ್ರ ಕ್ರಮ ಕೈಗೊಂಡಿದ್ದೇವೆ' ಎಂದರು.

ಬಲವಂತದ ಕ್ರಮ ಬೇಡ: ಹೈಕೋರ್ಟ್‌ನಿಂದ ಮಧ್ಯಂತರ ಆದೇಶ

ಕೆಎಸ್‌ಸಿಎ ಪದಾಧಿಕಾರಿಗಳಿಗೆ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ, 'ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ' (ಕೆಎಸ್‌ಸಿಎ) ಪದಾಧಿಕಾರಿಗಳ ವಿರುದ್ಧ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂದು ಸರ್ಕಾರಕ್ಕೆ ಆದೇಶಿಸಿರುವ ಹೈಕೋರ್ಟ್, ಈ ಮೂಲಕ ಮೂವರು ಅರ್ಜಿದಾರ ಪದಾಧಿಕಾರಿಗಳಿಗೆ ಬಂಧನದಿಂದ ಮಧ್ಯಂತರ ರಕ್ಷಣೆ ಒದಗಿಸಿದೆ.

'ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ, ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ (67), ಕಾರ್ಯದರ್ಶಿ ಎ.ಶಂಕರ್ (66) ಮತ್ತು ಖಜಾಂಚಿ ಇ.ಎಸ್‌.ಜಯರಾಂ (59) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್‌.ಆರ್‌.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.



'ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಕುನ್ಹಾ ಆಯೋಗದಿಂದ ವಿಚಾರಣೆ ಹಾಗೂ ಪ್ರತ್ಯೇಕ ಮ್ಯಾಜಿಸ್ಟ್ರೀರಿಯಲ್ ತನಿಖೆ ನಡೆಯುತ್ತಿದೆ. ಸಂಸ್ಥೆಗಳ ವಿರುದ್ಧದ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿದೆ. ಹಾಗಾಗಿ, ಅರ್ಜಿದಾರರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸುವ ಅಗತ್ಯ ಕಾಣುತ್ತಿಲ್ಲ. ಆದ್ದರಿಂದ, ಅರ್ಜಿದಾರರ ವಿರುದ್ಧ ಬಲವಂತದ ಕ್ರಮಕ್ಕೆ ಮುಂದಾಗದೆ ತನಿಖೆ ನಡೆಯಲಿ' ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲರಾದ ಅಶೋಕ ಹಾರನಹಳ್ಳಿ ಮತ್ತು ಎಂ.ಎಸ್‌. ಶ್ಯಾಮಸುಂದರ್, 'ಆರ್‌ಸಿಬಿ ಫ್ರಾಂಚೈಸಿ ಪದಾಧಿಕಾರಿಗಳು, ಕಾರ್ಯಕ್ರಮ ಆಯೋಜನೆಯ ಜವಾಬ್ದಾರಿ ಹೊತ್ತಿದ್ದ ಡಿಎನ್‌ಎ ಸಂಸ್ಥೆ ಸೇರಿದಂತೆ ಒಂದೇ ಆರೋಪಕ್ಕೆ ಸಂಬಂಧಿಸಿ ಮೂರು ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗಿದೆ. ಇವರೆಲ್ಲರನ್ನೂ ಬಂಧಿಸುವಂತೆ ಮುಖ್ಯಮಂತ್ರಿ ನಿರ್ದೇಶಿಸಿದ್ದಾರೆ. ಇದು ಅರ್ಜಿದಾರರ ಸಾಂವಿಧಾನಿಕ ಹಕ್ಕುಗಳಿಗೆ ಚ್ಯುತಿ ಉಂಟು ಮಾಡಲಿದೆ' ಎಂದರು.

'ಅರ್ಜಿದಾರರು ವಿಚಾರಣಾ ನ್ಯಾಯಾಲಯದ ವ್ಯಾಪ್ತಿ ತೊರೆಯುವಂತಿಲ್ಲ. ತನಿಖೆಗೆ ಸಹಕರಿಸಬೇಕು' ಎಂಬ ಷರತ್ತನ್ನು ವಿಧಿಸಿದ ನ್ಯಾಯಪೀಠ, ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಲಾಗಿದೆ.

ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ಮತ್ತು ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್‌.ಜಗದೀಶ್ ಹಾಜರಿದ್ದರು.

ನಿಖಿಲ್ ಅರ್ಜಿ ವಿಚಾರಣೆ ಮುಂದೂಡಿಕೆ

ಸದ್ಯ ಬಂಧನದಲ್ಲಿರುವ ಆರ್‌ಸಿಬಿ ಫ್ರಾಂಚೈಸಿ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ ಅವರ ಬಂಧನವನ್ನು ಪ್ರಶ್ನಿಸಿ ಅವರ ಪರವಾಗಿ ಅವರ ಪತ್ನಿ ಮಾಳವಿಕಾ ನಾಯಕ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನೂ ನ್ಯಾ.ಕೃಷ್ಣಕುಮಾರ್ ಅವರಿದ್ದ ಪೀಠ ಇದೇ ವೇಳೆ ವಿಚಾರಣೆ ನಡೆಸಿತು.

ನಿಖಿಲ್ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲರಾದ ಸಂದೇಶ್ ಜೆ.ಚೌಟ ಮತ್ತು ಸಿ.ಕೆ.ನಂದಕುಮಾರ್, 'ಸೋಸಲೆ ಮತ್ತು ಇತರರ ಬಂಧನವು ಅಕ್ರಮವಾಗುತ್ತದೆ' ಎಂದು ಆಕ್ಷೇಪಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠವು ಈ ಅರ್ಜಿಯ ವಿಚಾರಣೆಯನ್ನು ಇದೇ 9ಕ್ಕೆ ಮುಂದೂಡಿತು.

'ಉಸಿರುಗಟ್ಟಿ ಸಾವು'

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ನಡೆದ ಕಾಲ್ತುಳಿತ ದುರಂತದಲ್ಲಿ 11 ಜನರು ಉಸಿರುಗಟ್ಟಿಯೇ ಸಾವಿಗೀಡಾಗಿದ್ದಾರೆ. ಕೆಲವರ ದೇಹದಲ್ಲಿ ಮೂಳೆಗಳು ಮುರಿದಿವೆ ಎಂಬ ವಿಚಾರ ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿಯಿಂದ ಗೊತ್ತಾಗಿದೆ.

ಬೌರಿಂಗ್ ಮತ್ತು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹಗಳನ್ನು ಬುಧವಾರ ರಾತ್ರಿಯೇ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಎಲ್ಲರ ಅಂತ್ಯಕ್ರಿಯೆಗಳು ಗುರುವಾರ ನೆರವೇರಿತ್ತು.

ಗಾಯಾಳುಗಳ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ವೈದೇಹಿ, ಬೌರಿಂಗ್, ಮಣಿಪಾಲ್ ಹಾಗೂ ಸ್ಪರ್ಶ್ ಆಸ್ಪತ್ರೆಯಲ್ಲಿ ಕೆಲವರು ಇನ್ನೂ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಐದಕ್ಕೂ ಹೆಚ್ಚು ಮಂದಿ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.



ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಸಂಭವಿಸಿದ ದುರಂತಕ್ಕೆ ರಾಜ್ಯ ಸರ್ಕಾರವೇ ಹೊಣೆಯೆಂದು ಆರೋಪಿಸಿ ಶಾಸಕ ಮಹೇಶ ಟೆಂಗಿನಕಾಯಿ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಹುಬ್ಬಳ್ಳಿಯಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಗೋವಿಂದರಾಜು ವಿಕೆಟ್ ಪತನ

ಒಂದನೇ ಪುಟದಿಂದ...

'ಕರ್ನಾಟಕ ಒಲಿಂಪಿಕ್ಸ್ ಅಸೋಸಿಯೇಷನ್‌ನ ಅಧ್ಯಕ್ಷರೂ ಆಗಿರುವ ಗೋವಿಂದರಾಜು ಅವರೇ ದುರಂತಕ್ಕೆ ಕಾರಣರಾಗಿದ್ದು, ಅವರನ್ನು ಕೆಳಗಿಳಿಸಬೇಕು ಮತ್ತು ಅವರನ್ನು ದೂರ ಇಡಬೇಕು ಎಂದು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಲವು ಸಚಿವರಿಂದ ಪ್ರಬಲ ಒತ್ತಡ ಬಂದ ಕಾರಣ ಮುಖ್ಯಮಂತ್ರಿ ಈ ತೀರ್ಮಾನ ತೆಗೆದುಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ವಿಧಾನಸೌಧದ ಮೆಟ್ಟಿಲುಗಳಲ್ಲಿ ಕಾರ್ಯಕ್ರಮ ಆಯೋಜಿಸಬೇಕು ಮತ್ತು ಜನ ಸೇರಿಸಬೇಕು ಎಂಬ ಸಲಹೆ ಕೊಟ್ಟವರೇ ಗೋವಿಂದರಾಜು. ಇದು ದುರಂತಕ್ಕೆ ಕಾರಣವಾಗಿದೆ. ಇಷ್ಟೆಲ್ಲ ಆದ ಬಳಿಕವೂ ಅವರು, ಸಂಪುಟ ಸಭೆ ಬಳಿಕ ನಡೆದ ವಿಶೇಷ ಸಭೆಗೆ ಬಂದಿದ್ದಾರೆ. ಅವರನ್ನು ಹೊರಗೆ ಕಳಿಸಿ ಎಂದು ಕೆಲವು ಸಚಿವರು ತರಾಟೆಗೆ ತೆಗೆದುಕೊಂಡರು. ಬಳಿಕ ಗೋವಿಂದರಾಜು ಅವರು ಸಭೆಯಿಂದ ಹೊರ ನಡೆದಿದ್ದರು' ಎಂದು ಮೂಲಗಳು ಹೇಳಿವೆ.

ಸಚಿವರ ಅಸಮಾಧಾನವನ್ನು ಗಂಭೀರವಾಗಿ ತೆಗೆದುಕೊಂಡ ಸಿದ್ದರಾಮಯ್ಯ ಅವರು, ಗೋವಿಂದ ರಾಜು ಅವರನ್ನು ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ಕೈಬಿಡುವ ತೀರ್ಮಾನ ತೆಗೆದುಕೊಂಡರು ಎಂದು ಗೊತ್ತಾಗಿದೆ.

ಈ ಮಧ್ಯೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ, '11 ಜನರ ಸಾವಿಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಅವರೇ ಕಾರಣ. ಎರಡು–ಮೂರು ಕಡೆ ವಿಜಯೋತ್ಸವ ಮಾಡಲು ಸಾಧ್ಯವಿಲ್ಲ. ಭದ್ರತೆ ಕೊಡುವುದು ಕಷ್ಟ ಆಗುತ್ತದೆ ಎಂದು ಪೊಲೀಸರು ಪರಿಪರಿಯಾಗಿ ಹೇಳಿದರೂ ಕೇಳದೇ ವಿಜಯೋತ್ಸವ ಆಗಲೇಬೇಕು ಎಂದು ಗೋವಿಂದರಾಜು ಪಟ್ಟು ಹಿಡಿದರು. ಪೊಲೀಸರಿಗೆ ಧಮ್ಕಿಯನ್ನೂ ಹಾಕಿದರು. ಇದರಿಂದ ದುರಂತ ಸಂಭವಿಸಿದೆ' ಎಂದು ದೂರಿದ್ದರು.

ನಿಂಬಾಳ್ಕರ್ ಎತ್ತಂಗಡಿ: ಐಪಿಎಸ್ ಅಧಿಕಾರಿ ಹೇಮಂತ್ ಎಂ. ನಿಂಬಾಳ್ಕರ್ ಅವರನ್ನು ಗುಪ್ತಚರ ವಿಭಾಗದ ಎಡಿಜಿಪಿ ಹುದ್ದೆಯಿಂದ ಎತ್ತಂಗಡಿ ಮಾಡಲಾಗಿದ್ದು, ಆ ಹುದ್ದೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿದ್ದ ಎಸ್‌.ರವಿ ಅವರನ್ನು ವರ್ಗಾವಣೆ ಮಾಡಲಾಗಿದೆ.

ನಿಂಬಾಳ್ಕರ್ ಅವರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರ ಹುದ್ದೆಯಲ್ಲಿ ಮುಂದುವರಿಸಲಾಗಿದೆ. ವಿಧಾನಸೌಧ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಆಯೋಜಿಸಿದರೆ ಎದುರಾಗಬಹುದಾದ ಸಮಸ್ಯೆಗಳು, ಕೈಗೊಳ್ಳಬೇಕಾದ ಭದ್ರತಾ ಕ್ರಮಗಳು, ವಿಶೇಷ ಅತಿಥಿಗಳ ಭದ್ರತೆ ಕುರಿತು ಸರ್ಕಾರ ಹಾಗೂ ಗೃಹ ಇಲಾಖೆಗೆ ಮಾಹಿತಿ ನೀಡುವ ಹೊಣೆ ಗುಪ್ತಚರ ವಿಭಾಗದ್ದಾಗಿರುತ್ತದೆ. ಅದರಲ್ಲಿ, ನಿಂಬಾಳ್ಕರ್ ಎಡವಿದ್ದ ಕಾರಣಕ್ಕೆ ಅವರಿಂದ ಗುಪ್ತದಳ ವಿಭಾಗದ ಹೊಣೆಯನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

'ಗುಪ್ತದಳದ ವೈಫಲ್ಯದ ಕಾರಣದಿಂದಲೇ ಕಾಲ್ತುಳಿತ ಸಂಭವಿಸಿದ್ದು ಅವರನ್ನೂ ಅಮಾನತು ಮಾಡಬೇಕು' ಎಂದು ವಿರೋಧ ಪಕ್ಷಗಳು ಆಗ್ರಹಿಸಿದ್ದವು.

ಖರ್ಚು ₹15 ಕೋಟಿ?

ಒಂದನೇ ಪುಟದಿಂದ...

ಅಲ್ಲದೇ, ಗಣ್ಯರಿಗೆ ಪಾಸ್ ನೀಡಬೇಕು ಎಂದೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಅಧಿಕಾರಿಗಳಿಗೆ ಸೂಚಿಸಲಾಯಿತು. ಯಾರಿಗೆಲ್ಲ ಮತ್ತು ಎಷ್ಟು ಪಾಸ್‌ಗಳನ್ನು ನೀಡಬೇಕು ಎಂಬ ಮಾಹಿತಿ ಇಲ್ಲದೇ ಡಿಪಿಎಆರ್ ಅಧಿಕಾರಿಗಳ ಮೇಲೆ ವಿಪರೀತ ಒತ್ತಡ ಸೃಷ್ಟಿಯಾಯಿತು. ಸಚಿವರು ಮತ್ತು ಹಿರಿಯ ಅಧಿಕಾರಿಗಳ ಮಕ್ಕಳು ಮತ್ತು ಕುಟುಂಬದ ಸದಸ್ಯರಿಗಷ್ಟೇ ಪಾಸ್ ನೀಡುವ ವ್ಯವಸ್ಥೆ ಆಯಿತು. ವಿಧಾನಸೌಧ ಕಟ್ಟಡಕ್ಕೆ ಅಳವಡಿಸಿರುವ ವಿದ್ಯುತ್ ಅಲಂಕಾರದ ದೀಪಗಳನ್ನು ರಾತ್ರಿ ಬೆಳಗಿಸುವ ಆಲೋಚನೆ ಇತ್ತು. ಕೆಎಸ್‌ಸಿಎ ಆವರಣದಲ್ಲಿ ದುರಂತದ ವಿಚಾರ ಗೊತ್ತಾಗುತ್ತಿದ್ದಂತೆಯೇ ಅದನ್ನು ಕೈಬಿಡಲಾಯಿತು.

ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ: ಜಾಲತಾಣದಲ್ಲಿ ಆಕ್ರೋಶ

ಅಮಾನತು ಹಿಂಪಡೆಯಲು ಒತ್ತಾಯ

ಪ್ರಜಾವಾಣಿ ವಾರ್ತೆ



ಬಿ.ದಯಾನಂದ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಿಂದ ಉಂಟಾದ ಸಾವು–ನೋವಿಗೆ ಸಂಬಂಧಿಸಿದಂತೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಸೇರಿ ಐವರು ಅಧಿಕಾರಿಗಳನ್ನು ಅಮಾನತು ಮಾಡಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತಿದೆ.

'ತಮ್ಮ ವೈಫಲ್ಯ ಮರೆಮಾಚಲು ಅಧಿಕಾರಿಗಳನ್ನು ಅಮಾನತು ಮಾಡಿರುವ ಕ್ರಮ ಸರಿಯಲ್ಲ' ಎಂದು ಸಾರ್ವಜನಿಕರು ಜಾಲತಾಣಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ದಯಾನಂದ ಅವರ ಅಮಾನತು ಆದೇಶ ಹಿಂಪಡೆಯುವಂತೆ ಒತ್ತಾಯ ಕೇಳಿ ಬರುತ್ತಿದೆ. ಕಮಿಷನರ್ ಆಗಿದ್ದಾಗ ಅವರ ದಕ್ಷತೆ, ಸಮಯ ಪ್ರಜ್ಞೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಸಾರ್ವಜನಿಕರು, ದಯಾನಂದ ಅವರನ್ನು ಬೆಂಬಲಿಸಿ ಪೋಸ್ಟ್ ಮಾಡುತ್ತಿದ್ದಾರೆ. 'I Stand with B Dayanand IPS' ಎಂಬರ್ಥದ ಪೋಸ್ಟ್‌ಗಳು ಹರಿದಾಡುತ್ತಿವೆ.

ಬಿಜೆಪಿ ಮುಖಂಡರೂ ಆಗಿರುವ, ಮಾಜಿ ಪೊಲೀಸ್ ಕಮಿಷನರ್ ಭಾಸ್ಕರ್ ರಾವ್, 'ದಯಾನಂದ ಅವರ ಅಮಾನತು ಕರ್ನಾಟಕ ಪೊಲೀಸ್ ಇತಿಹಾಸದಲ್ಲಿ ಕರಾಳ ಅಧ್ಯಾಯ. ಕಾಲ್ತುಳಿತದಿಂದ ಸಿದ್ದರಾಮಯ್ಯ ಅವರು ಭಯಬೀತರಾಗಿದ್ದಾರೆ. ಕಾಲ್ತುಳಿತಕ್ಕೆ ಕಾರಣ ಪ್ರತಿಯೊಬ್ಬರಿಗೂ ಗೊತ್ತಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಇದಕ್ಕೆ ನೇರ ಹೊಣೆ' ಎಂದು ಆರೋಪಿಸಿದ್ದಾರೆ.

'ಸತ್ಯ ಹೇಳಿದ್ದಕ್ಕೆ ಬಹುಮಾನ ರೂಪದಲ್ಲಿ ಅಮಾನತು ಮಾಡಿದ್ದಾರೆ. ದಯಾನಂದ ಮತ್ತು ಅವರ ತಂಡದವರು ಬೆಂಗಳೂರು ನಗರವನ್ನು ಸುರಕ್ಷಿತವಾಗಿಡಲು ಇಡೀ ರಾತ್ರಿ ಶ್ರಮಿಸಿದ್ದರು. ಯಾವುದೇ ಮುಖ್ಯಮಂತ್ರಿ ಇಷ್ಟು ಅಸಹಾಯಕರಾಗಿರಲಿಲ್ಲ. ಸರ್ಕಾರವು ತನ್ನ ಕೈಗಳ ಮೇಲೆ ರಕ್ತವನ್ನು ಮೆತ್ತಿಕೊಂಡಿದೆ. ಇದೀಗ ಮಿದುಳನ್ನು ಕೂಡ ಸರ್ಕಾರ ಕಳೆದುಕೊಂಡಿದೆ. ಸರ್ಕಾರ ಈಗ ವಿಪತ್ತಿನಲ್ಲಿದೆ' ಎಂದು 'ಎಕ್ಸ್' ಖಾತೆಯಲ್ಲಿ ಕಿಡಿಕಾರಿದ್ದಾರೆ.


'ಕಾಲ್ತುಳಿತ ಪ್ರಕರಣ ಸಂಬಂಧ ರಾಜ್ಯ ಸರ್ಕಾರ ನ್ಯಾಯಾಂಗ ಹಾಗೂ ಸಿಐಡಿ ತನಿಖೆಗೂ ಆದೇಶಿಸಿದೆ. ಇವೆಲ್ಲದರ ನಡುವೆ ತನ್ನ ವೈಫಲ್ಯವನ್ನು ಮರೆಮಾಚಿಕೊಳ್ಳುವ ಪ್ರಯತ್ನ ಮಾಡಿರುವ ರಾಜ್ಯ ಸರ್ಕಾರ ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ ನೀಡಿದೆ. ಪೊಲೀಸ್ ಅಧಿಕಾರಿ ಗಳನ್ನು ಅಮಾನತು ಮಾಡಿರುವ ಸರ್ಕಾರದ ಈ ಕ್ರಮ ಸರಿಯಲ್ಲ. ಇದು ಬೇಜವಾಬ್ದಾರಿ ಸರ್ಕಾರ' ಎಂದು ನಿವೃತ್ತ ಪೊಲೀಸ್ ಕಮಿಷನರ್ ಜ್ಯೋತಿ ಪ್ರಕಾಶ್ ಮಿರ್ಜಿ ಆಕ್ರೋಶ ಹೊರ ಹಾಕಿದ್ದಾರೆ.

'ವಿಜಯೋತ್ಸವ ಕಾರ್ಯಕ್ರಮದ ಆಯೋಜನೆ ರಾಜಕೀಯ ತೀರ್ಮಾನ. ಇದನ್ನು ಯಾರು ಮಾಡಿದ್ದಾರೋ ಅವರ ಮೇಲೆ ಕ್ರಮ ಆಗಲಿ. ಅದಕ್ಕೆ ಪೊಲೀಸ್ ಅಧಿಕಾರಿಗಳು ಯಾಕೆ ಬಲಿ ಆಗಬೇಕು. ದಯಾನಂದ್ ಅವರ ಅಮಾನತು ಆದೇಶ ವಾಪಸ್ ಪಡೆಯಿರಿ' ಎಂದು ಕನ್ನಡಪರ ಹೋರಾಟಗಾರ ರೂಪೇಶ್ ರಾಜಣ್ಣ ಆಗ್ರಹಿಸಿದ್ದಾರೆ.

ಅಧಿಕಾರಿಗಳ ನಿಯೋಜನೆ

ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದಂತೆ ನಗರ ಪೊಲೀಸ್ ಕಮಿಷನರ್ ದಯಾನಂದ ಸೇರಿ ಐವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿತ್ತು. ತೆರವಾಗಿದ್ದ ಸ್ಥಾನಗಳಿಗೆ ಅಧಿಕಾರಿಗಳನ್ನು ನೇಮಿಸಲಾಗಿದೆ.

ಪಶ್ಚಿಮ ವಿಭಾಗ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಸ್ ಕುಮಾರ್ ವಿಕಾಸ್ ಅವರ ಜಾಗಕ್ಕೆ ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಚಂದ್ರಗುಪ್ತ ಅವರನ್ನು ಪ್ರಭಾರಿಯಾಗಿ ನಿಯೋಜಿಸಿದೆ. ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಟೆಕ್ಕಣ್ಣನವರ ಹುದ್ದೆಯನ್ನು ಸಿಸಿಬಿ ಡಿಸಿಪಿ ಅಕ್ಷಯ್ ಎಂ. ಹಕಾಯ್ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ. ಕಬ್ಬನ್ ಪಾರ್ಕ್ ಉಪವಿಭಾಗಕ್ಕೆ ಎಸಿಪಿ ರಾಮಚಂದ್ರ ಹಾಗೂ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಇನ್‌ಸ್ಪೆಕ್ಟರ್ ದೇವೇಂದ್ರಪ್ಪ ಅವರನ್ನು ವರ್ಗಾವಣೆ ಮಾಡಿ ಸೀಮಂತ್ ಕುಮಾರ್ ಸಿಂಗ್ ಆದೇಶಿಸಿದ್ದಾರೆ.



ಜೂನ್ 26ಕ್ಕೆ ಎಕ್ಸ್ ಆ್ಯಂಡ್ ವೈ ತೆರೆಗೆ

'ರಾಮಾ ರಾಮಾ ರೇ' ಖ್ಯಾತಿಯ ಸತ್ಯ ಪ್ರಕಾಶ್ ನಿರ್ದೇಶನದ, ಬೃಂದಾ ಆಚಾರ್ಯ ನಟನೆಯ 'ಎಕ್ಸ್ ಆ್ಯಂಡ್ ವೈ' ಟೀಸರ್ ಬಿಡುಗಡೆಯಾಗಿದೆ. ಸಿನಿಮಾ ಜೂನ್ 26ಕ್ಕೆ ರಿಲೀಸ್ ಆಗಲಿದೆ ಎಂದು ಚಿತ್ರತಂಡ ಘೋಷಿಸಿದೆ.


ವಿನೋದ್ ಪ್ರಭಾಕರ್

ನಟನೆಯ ಸಾಮರ್ಥ್ಯ ಪ್ರದರ್ಶಿಸಿದ ವಿನೋದ್, ಶ್ರುತಿ

ನಾವು ನೋಡಿದ ಸಿನಿಮಾ

ಮಾದೇವ

- **ನಿರ್ಮಾಣ: ಆರ್ ಕೇಶವ(ದೇವಸಂದ್ರ)**
- **ನಿರ್ದೇಶನ: ನವೀನ್ ರೆಡ್ಡಿ ಬಿ.**
- **ತಾರಾಗಣ: ವಿನೋದ್ ಪ್ರಭಾಕರ್, ಸೋನಲ್ ಮೊಂತೆರೋ, ಶ್ರೀನಗರ ಕಿಟ್ಟಿ, ಶ್ರುತಿ, ಮಾಲಾಶ್ರೀ, ಅಚ್ಯುತ್ ಕುಮಾರ್ ಮತ್ತಿತರರು.**

ನಟ ವಿನೋದ್ ಪ್ರಭಾಕರ್ ಎಂದರೆ ಕೇವಲ ಫೈಟ್ಸ್, ನಟಿ ಶ್ರುತಿ ಎಂದರೆ ಕಣ್ಣೀರು ಎಂಬುವುದು ಬದಲಾಗುವುದಕ್ಕೆ 'ಮಾದೇವ' ದಾರಿ ಮಾಡಿಕೊಟ್ಟಿದೆ. ತಮ್ಮೊಳಗಿನ ನಟನೆಯ ಸಾಮರ್ಥ್ಯವನ್ನು ಇವರಿಬ್ಬರೂ ಈ ಸಿನಿಮಾದಲ್ಲಿ ಪ್ರದರ್ಶಿಸಿದ್ದು, ಸಾಮಾನ್ಯವಾಗಿ ಕೇಳಿಬರುವ 'ಭಿನ್ನ ಪಾತ್ರ' ಎಂಬ ಮಾತಿಗೆ ಸಾಕ್ಷಿಯಾಗಿದೆ. ಕಥೆಯನ್ನು ಕಟ್ಟುತ್ತಾ ನಿರ್ದೇಶಕರು ಸಿದ್ಧಸೂತ್ರಕ್ಕೆ ಅಂಟಿಕೊಂಡಾಗ ಚಿತ್ರಕಥೆ ಎಳೆದಂತೆ ಭಾಸವಾದರೂ ಅದನ್ನು 'ಮಾದೇವ'ನ ಪಾತ್ರ ಮತ್ತೆ ಹಳಿಗೆ ತಂದು ನಿಲ್ಲಿಸುತ್ತದೆ.

ಅನನುಕ್ರಮಣಿಕೆ(non linear) ಮಾದರಿಯ ಚಿತ್ರಕಥೆಯಲ್ಲಿ 'ಮಾದೇವ'ನ ಪಾತ್ರವನ್ನು ಇಲ್ಲಿ ತೆರೆದಿಡಲಾಗಿದೆ. 'ಮಾದೇವ'(ವಿನೋದ್ ಪ್ರಭಾಕರ್) ಅಬ್ಬಲಗೆರೆ ಕೇಂದ್ರ ಕಾರಾಗೃಹದಲ್ಲಿ ಅಪರಾಧಿಗಳನ್ನು ನೇಣುಗಂಬಕ್ಕೇರಿಸುವಾತ. ಭಾವನೆಗಳಿಲ್ಲದ, ಯಾರೊಂದಿಗೂ ಮಾತನಾಡದ, ಮೃಗದ ಲಕ್ಷಣಗಳುಳ್ಳ ಜೀವಂತ ಶವದಂತೆ ಈತನ ಬದುಕು. ಈತ ಯಾವ ಕಾರಣಕ್ಕಾಗಿ ಹೀಗಾದ ಎನ್ನುವುದಕ್ಕೂ ಕಥೆಯೊಳಗೊಂದು ಕಥೆ ಇದೆ. 'ಮಾದೇವ' ಕೆಲಸ ಮಾಡುವ ಕಾರಾಗೃಹದಲ್ಲೇ 'ಪಾರ್ವತಿ'ಯ (ಸೋನಲ್) ತಾಯಿ ಕೈದಿ. ತಾಯಿಗಾಗಿ 'ಮಾದೇವ'ನನ್ನು ಸಮೀಪಿಸುವ 'ಪಾರ್ವತಿ' ಆತನನ್ನು ಮನುಷ್ಯನನ್ನಾಗಿ ಮಾಡುತ್ತಾಳೆ. ಕಥೆ ಮುಂದುವರಿಯುತ್ತಾ ಇದೇ 'ಮಾದೇವ' ರಾಕ್ಷಸನಾಗುತ್ತಾನೆ. ಇದು ಚಿತ್ರದ ಸಾರಾಂಶ.

1970–80ರ ದಶಕದ ಕಥೆಯುಳ್ಳ ಈ ಸಿನಿಮಾವನ್ನು ಆ ಮಾದರಿಯ ವಾತಾವರಣದಲ್ಲೇ ಸೆರೆಹಿಡಿಯುವಲ್ಲಿ ನಿರ್ದೇಶಕರು ಯಶಸ್ವಿ ಆಗಿದ್ದಾರೆ. ಇದಕ್ಕೆ ಚಿತ್ರದ ವಿಎಫ್‌ಎಕ್ಸ್ ದೃಶ್ಯಗಳು ಸಾಥ್ ನೀಡಿವೆ. ನಾಯಕನಿಗೆ 'ಹ್ಯಾಂಗ್‌ಮ್ಯಾನ್' ಪಾತ್ರ ಬರೆದ ನಿರ್ದೇಶಕರ ಆಲೋಚನೆ ಭಿನ್ನವಾಗಿದೆ. ಕೆಲವೆಡೆ, ಅದರಲ್ಲೂ ಪ್ರಮುಖವಾಗಿ ಸಾಹಸ ದೃಶ್ಯಗಳ ಚಿತ್ರೀಕರಣ ವೇಳೆ ಸಿದ್ಧಸೂತ್ರಕ್ಕೆ ಜೋತು ಬಿದ್ದಿದ್ದಾರೆ. ಎರಡು ಸನ್ನಿವೇಶಗಳಲ್ಲಿ ಫೈಟ್‌ಗಳನ್ನು ಅನಗತ್ಯವಾಗಿ ಎಳೆಯಲಾಗಿದ್ದು, ಇದು ಸಿನಿಮಾ ಅವಧಿಯನ್ನು ಹಿಗ್ಗಿಸಿದೆ, ತಾಳ್ಮೆಯನ್ನೂ ಪರೀಕ್ಷಿಸಿದೆ.

ನಟನೆಯಲ್ಲಿ 'ಮಾದೇವ'ನಾಗಿ ವಿನೋದ್ ಜೀವಿಸಿದ್ದಾರೆ. ಫೈಟ್‌ಗಳ ಸುತ್ತ ಕಟ್ಟಿದ ಕಥೆಯೊಳಗೆ ಕಳೆದು ಹೋಗುತ್ತಿದ್ದ ವಿನೋದ್ ಈ ಸಿನಿಮಾ ಮೂಲಕ ನಟನೆಯ ಗತ್ತು ಪ್ರದರ್ಶಿಸಿದ್ದಾರೆ. ಭಾವನೆಗಳ ಮಿಶ್ರಣದಲ್ಲಿ ಮಿಂದಿದ್ದಾರೆ. ಇಡೀ ಸಿನಿಮಾದಲ್ಲಿ ಅವರಿಗೆ ಒಟ್ಟು ನಾಲ್ಕೈದು ನಿಮಿಷದ ಸಂಭಾಷಣೆಯಿದೆ! ಹೀಗಿದ್ದರೂ ಕಣ್ಣಿನಲ್ಲಿ, ತಮ್ಮ ಹಾವಭಾವದಲ್ಲೇ ನಟಿಸುತ್ತಾ ಹೊಸ ಅವತಾರದಲ್ಲಿ ಬಂದಿದ್ದಾರೆ. ಭಾವನಾತ್ಮಕ ದೃಶ್ಯಗಳಲ್ಲಿ ಅಂಕ ಗಿಟ್ಟಿಸುತ್ತಾರೆ. ಕ್ಲೈಮ್ಯಾಕ್ಸ್ ತಲುಪುತ್ತಾ 'ಮಾದೇವ' ರಾಕ್ಷಸನಾಗುವ ದೃಶ್ಯಗಳನ್ನು ಕಟ್ಟಿಕೊಟ್ಟ ರೀತಿ ಚೆನ್ನಾಗಿದೆ.

'ಭಜರಂಗಿ–2' ಸಿನಿಮಾದಲ್ಲಿ ತಮ್ಮ ಶೈಲಿಯಲ್ಲದ ಪಾತ್ರವನ್ನು ಶ್ರುತಿ ಅವರು ನಿಭಾಯಿಸಿದ್ದರು. 'ಮಾದೇವ' ಸಿನಿಮಾದಲ್ಲೂ ಹೊಸ ಶೈಲಿಯ ಪಾತ್ರವೊಂದು ಅವರಿಗೆ ದಕ್ಕಿದೆ. ಇದನ್ನು ಅವರು ಸದ್ಬಳಕೆ ಮಾಡಿಕೊಂಡಿದ್ದಾರೆ. ಖಳನಾಯಕನಾಗಿ ಕಾಣಿಸಿಕೊಂಡ ಶ್ರೀನಗರ ಕಿಟ್ಟಿ ಅವರ ಪಾತ್ರದ ಬರವಣಿಗೆಯನ್ನು ಇನ್ನಷ್ಟು ಗಟ್ಟಿಗೊಳಿಸಬಹುದಿತ್ತು. ಸೋನಲ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. 'ರಾಬರ್ಟ್' ಜೋಡಿಯು ತೆರೆ ಮೇಲೆ ಮುದ್ದಾಗಿ ಕಾಣಿಸಿಕೊಂಡಿದೆ. 'ಎದೇಲಿ ತಂಗಾಳಿ' ಹಾಡು ಚೆನ್ನಾಗಿದೆ.

–ಅಭಿಲಾಷ್ ಪಿ.ಎಸ್.

ಇದು ನೋಡಬಹುದಾದ ಚಿತ್ರ

ಸರಳ ಕಥೆಯಲ್ಲಿ ಹಲವು ತಿರುವುಗಳು


ಖುಷಿ ರವಿ, ಸಂಪತ್ ಮೈತ್ರೇಯ

ನಾವು ನೋಡಿದ ಸಿನಿಮಾ

ನೀತಿ

- **ನಿರ್ಮಾಣ: ಗೌತಮ್ ಮಣಿವಣ್ಣನ್**
- **ನಿರ್ದೇಶನ:ರಾಜ ಗೋಪಾಲ್**
- **ತಾರಾಗಣ: ಸಂಪತ್ ಮೈತ್ರೇಯ, ಖುಷಿ ರವಿ, ಪ್ರವೀಣ್ ಅಥರ್ವ ಮತ್ತಿತರರು**

ಒಂದೇ ಮನೆಯಲ್ಲಿ ಒಂದು ರಾತ್ರಿ ನಡೆಯುವ ಕಥೆ 'ನೀತಿ'. ಚಿತ್ರದಲ್ಲಿ ನಾಯಕಿಯೇ ಕುತೂಹಲಭರಿತವಾದ ಒಂದು ಆಟ ಆಡಿರುವುದರಿಂದ, ಆಕೆಯ ಹೆಸರೇ ಚಿತ್ರದ ಶೀರ್ಷಿಕೆಯಾಗಿದೆ. ಮನರಂಜನೆಗಿಂತ ಹೆಚ್ಚಾಗಿ ಕಂಟೆಂಟ್, ಕುತೂಹಲದೊಂದಿಗೆ ಸಾಗುವ ಕಥೆಯಿದು. ಕನ್ನಡದಲ್ಲಿ ಈ ರೀತಿಯ ಕಥೆಗಳು ಬಂದಿರುವುದು ವಿರಳ.

ಈ ಚಿತ್ರದಲ್ಲಿ ನಾಯಕ ಅಥವಾ ನಾಯಕಿ ಎಂಬ ಪರಿಕಲ್ಪನೆ ಇಲ್ಲ. ನೀತಿ ಮತ್ತು ಪ್ರತಾಪ್ ಎಂಬ ಎರಡು ಪಾತ್ರಗಳ ನಡುವೆ ಕಥೆ ನಡೆಯುತ್ತದೆ. ಉಳಿದ ನಾಲ್ಕಾರು ಪಾತ್ರಗಳು ಆಗಾಗ ಬಂದು ಹೋಗುತ್ತವೆ. ನೀತಿಯಾಗಿ ಖುಷಿ ರವಿ, ಪ್ರತಾಪ್ ಆಗಿ ಸಂಪತ್ ಮೈತ್ರೇಯ ಅಭಿನಯವೂ ಚಿತ್ರದ ಜೀವಾಳ. ಪ್ರತಾಪ್ ಕಳ್ಳ. ದುಡ್ಡಿನ ಅವಶ್ಯಕತೆಯಿಂದ ನೀತಿ ಮನೆಗೆ ಕದಿಯಲು ಬರುತ್ತಾನೆ. ಬದುಕಿನಲ್ಲಿ ಕಂಗೆಟ್ಟ ನೀತಿ ಆತ್ಮಹತ್ಯೆಗೆ ಸಿದ್ಧತೆ ನಡೆಸಿರುತ್ತಾಳೆ. ಮನೆಯ ಭದ್ರತಾ ಸಿಬ್ಬಂದಿ ಕಣ್ಣು ತಪ್ಪಿಸಿ ಮನೆಯೊಳಗೆ ಬರುವ ಪ್ರತಾಪ್ ನೀತಿಯ ಕಣ್ಣಿಗೆ ಬೀಳುತ್ತಾನೆ. ಅಲ್ಲಿಂದ ಚಿತ್ರದ ಕಥೆ ಪ್ರಾರಂಭವಾಗುತ್ತದೆ.

ಕಥೆಯ ಎಳೆ ಬಹಳ ಸರಳ ಎನ್ನಿಸುತ್ತದೆ. ಆದರೆ ಈ ಕಥೆಗೆ ನಿರ್ದೇಶಕರು ಅಲ್ಲಲ್ಲಿ ನೀಡಿರುವ ತಿರುವುಗಳು ಸೊಗಸಾಗಿವೆ. ಪ್ರತಾಪ್, ನೀತಿ ನಡುವಿನ ಹೋರಾಟದ ಬಳಿಕ ಆಕೆಯ ಬದುಕಿನ ಕಥೆ ಪ್ರಾರಂಭವಾಗುತ್ತದೆ. ಆಕೆ ಏಕೆ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿದ್ದಾಳೆ ಎಂಬುದನ್ನು ನಿರ್ದೇಶಕರು ತೆರೆದಿಡುತ್ತಾರೆ. ಪರ್ಯಾಯವಾಗಿ ಪ್ರತಾಪ್ ಕಥೆಯೂ ಬಿಚ್ಚಿಕೊಳ್ಳುತ್ತದೆ. ನನ್ನನ್ನು ಕೊಲೆ ಮಾಡಿ ನಿನಗೆ ಬೇಕಾದ ಹಣ ತೆಗೆದುಕೊಂಡು ಹೋಗು ಎಂದು ಆಕೆ ಕಳ್ಳನಿಗೆ ಆಹ್ವಾನ ನೀಡುತ್ತಾಳೆ. ಆಕೆಯ ಕೊಲೆಯಾಗುವ ಹೊತ್ತಿಗೆ ಸಿನಿಮಾದ ಮೊದಲಾರ್ಧ ಮುಗಿದಿರುತ್ತದೆ.

ಆಕೆ ಕೊಲೆಯಾಗಿರುವುದಿಲ್ಲ ಎಂಬುದು ನಿರೀಕ್ಷಿತ. ಅದೇ ದೃಶ್ಯದೊಂದಿಗೆ ದ್ವಿತೀಯಾರ್ಧ ಪ್ರಾರಂಭವಾಗುತ್ತದೆ. ಕೊಲೆಯಾಗಿದ್ದು ಮನೆಯ ಭದ್ರತಾ ಸಿಬ್ಬಂದಿ. ಆತ ಏಕೆ ಕೊಲೆಯಾದ, ಹೇಗೆ ಕೊಲೆಯಾದ ಎಂಬ ಎಳೆಯನ್ನು ಇಟ್ಟುಕೊಂಡು ಚಿತ್ರದ ಕಥೆ ಸಾಗುತ್ತದೆ. ಇದು ಮಾಮೂಲು ಎಲ್ಲೆಲ್ಲೋ ಸುತ್ತಾಡುವ ಕಥೆ ಎಂದುಕೊಳ್ಳುವ ಹೊತ್ತಿಗೆ ಮತ್ತೊಂದು ಟ್ವಿಸ್ಟ್. ಒಂದು ಮನೆ, ಎರಡು ಪಾತ್ರಗಳನ್ನು ಇಟ್ಟುಕೊಂಡು ನಿರ್ದೇಶಕರು ಚಿತ್ರಕಥೆಯಲ್ಲಿ ಚೆನ್ನಾಗಿ ಆಟ ಆಡಿದ್ದಾರೆ. ನೀತಿಯ ಪತಿ ಸಾಗರ್ ಪಾತ್ರ ಪ್ರವೇಶವಾಗುತ್ತದೆ. ನೀವು ಈತನಕ ನೋಡಿದ್ದೆಲ್ಲವೂ ಸುಳ್ಳು ಎನ್ನಿಸುವಂತೆ ಮಾಡಿಬಿಡುತ್ತದೆ ಕ್ಲೈಮ್ಯಾಕ್ಸ್.

ಚಿತ್ರ ಒಂದೇ ಮನೆಯಲ್ಲಿ ನಡೆಯುತ್ತದೆಯಾದರೂ ಕಥೆ ಅಲ್ಲಲ್ಲೇ ನಡೆಯುತ್ತದೆ ಅನ್ನಿಸುವುದಿಲ್ಲ. ಅಷ್ಟರಮಟ್ಟಿಗೆ ಛಾಯಾಚಿತ್ರಗ್ರಹಣ ಸೊಗಸಾಗಿದೆ. ಸಂಗೀತಕ್ಕೆ ಹೆಚ್ಚೇನೂ ಪ್ರಾಶಸ್ತ್ಯ ಸಿಕಿಲ್ಲ. ಕಥೆಯನ್ನು ಇನ್ನಷ್ಟು ನೈಜವಾಗಿಸುವ ಅವಕಾಶ ನಿರ್ದೇಶಕರಿಗಿತ್ತು. ಕೊಲೆಯಂಥ ಕೆಲವಷ್ಟು ಸನ್ನಿವೇಶಗಳು ನಾಟಕೀಯ ಅನ್ನಿಸಿಬಿಡುತ್ತದೆ. ಇಡೀ ಚಿತ್ರವನ್ನು ಎಲ್ಲಿಯೂ ಹಾಸ್ಯವಿಲ್ಲದೆ, ಮನರಂಜನೆ ಇಲ್ಲದೆ, ಬಹಳ ವಿರಳ ಮಾತುಗಳೊಂದಿಗೆ ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾ ಎಂದು ನಿರ್ದೇಶಕರು ಟ್ರೀಟ್ ಮಾಡಿದ್ದಾರೆ. ಹೀಗಾಗಿ ಭಯ ಹುಟ್ಟಿಸುವ, ಕುರ್ಚಿ ತುದಿಯಲ್ಲಿ ಕೂರಿಸಿ ಕುತೂಹಲ ಮೂಡಿಸುವ ಸನ್ನಿವೇಶಗಳು ಬೇಕಿತ್ತು. ಹಿನ್ನೆಲೆ ಸಂಗೀತಕ್ಕೆ ಇನ್ನಷ್ಟು ಆದ್ಯತೆ ನೀಡಬೇಕಿತ್ತು.

ವಿನಾಯಕ ಕೆ.ಎಸ್

ಇದು ನೋಡಬಹುದಾದ ಚಿತ್ರ

ಜಮ್ಮು–ಕಾಶ್ಮೀರ: ರೈಲು ಸಂಪರ್ಕದಲ್ಲಿ ಹೊಸ ಮೈಲಿಗಲ್ಲು; 'ವಂದೇ ಭಾರತ್' ಸಂಚಾರಕ್ಕೂ ಚಾಲನೆ

ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ/ಕಟ್ರಾ: ಕಾಶ್ಮೀರದ ರಿಯಾಸಿ ಜಿಲ್ಲೆಯ ಕಟ್ರಾ ಬಳಿ ಚೆನಾಬ್ ನದಿಗೆ ನಿರ್ಮಿಸಿರುವ, ವಿಶ್ವದ ಅತ್ಯಂತ ಎತ್ತರದ ರೈಲ್ವೆ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಉದ್ಘಾಟಿಸಿದರು.

ಉದ್ಘಾಟನೆ ನಂತರ, ತ್ರಿವರ್ಣ ಧ್ವಜ ಹಿಡಿದು ಮೋದಿ ಅವರು, ಸೇತುವೆ ಮೇಲೆ ನಡೆಯುವ ಮೂಲಕ ಗಮನ ಸೆಳೆದರು. ಉದ್ಘಾಟನೆಗೂ ಮುನ್ನ, ರೈಲಿನ ಎಂಜಿನ್ ಕೋಚ್‌ನಲ್ಲಿ ಪ್ರಯಾಣಿಸಿ, ಕಾರ್ಯಕ್ರಮ ಸ್ಥಳವನ್ನು ಮೋದಿ ತಲುಪಿದರು.

ಚೆನಾಬ್ ಸೇತುವೆಯನ್ನು ಉದ್ಘಾಟಿಸಿದ ನಂತರ, ಮೋದಿ ಅವರು, ಅಂಜಿ ನದಿಗೆ ನಿರ್ಮಿಸಿರುವ ದೇಶದ ಮೊದಲ ರೈಲ್ವೆ ತೂಗು ಸೇತುವೆಯನ್ನು ಕೂಡ ಉದ್ಘಾಟಿಸಿದರು. ಇದೇ ವೇಳೆ, ಬಾರಾಮುಲ್ಲಾ–ಕಟ್ರಾ ಸಂಪರ್ಕಿಸುವ ವಂದೇ ಭಾರತ್ ರೈಲು ಸಂಚಾರಕ್ಕೂ ಅವರು ಹಸಿರು ನಿಶಾನೆ ತೋರಿದರು.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಜಮ್ಮು–ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಉಪಸ್ಥಿತರಿದ್ದರು.

ಯೋಜನೆ: ಚೆನಾಬ್ ನದಿಗೆ ನಿರ್ಮಿಸಿರುವ ರೈಲ್ವೆ ಸೇತುವೆಯು, 272 ಕಿ.ಮೀ. ಉದ್ದದ ಉಧಂಪುರ–ಶ್ರೀನಗರ–ಬಾರಾಮುಲ್ಲಾ ರೈಲ್ವೆ ಲಿಂಕ್ (ಯುಎಸ್‌ಬಿಆರ್‌ಎಲ್) ಯೋಜನೆಯ ಭಾಗವಾಗಿದೆ. ಈ ಯೋಜನೆಯ ಒಟ್ಟು ವೆಚ್ಚ ₹43,780 ಕೋಟಿ.

ಚೆನಾಬ್ ಸೇತುವೆಯನ್ನು ₹1,486 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದು, ಗಂಟೆಗೆ 260 ಕಿ.ಮೀ. ವೇಗದಲ್ಲಿ ಬೀಸುವ ಗಾಳಿಯು ಸೃಷ್ಟಿಸುವ ಒತ್ತಡವನ್ನು ತಡೆಯುವ ಸಾಮರ್ಥ್ಯ ಹೊಂದಿದೆ. ಈ ಸೇತುವೆ 120 ವರ್ಷಗಳಷ್ಟು ಬಾಳಿಕೆ ಬರಲಿದೆ. ಅಂಜಿ ಸೇತುವೆಯು 96 ಕೇಬಲ್ ಗಳನ್ನು ಒಳಗೊಂಡಿದೆ ಎಂದೂ ಹೇಳಿದ್ದಾರೆ.

ಶಂಕುಸ್ಥಾಪನೆ/ಉದ್ಘಾಟನೆ: ₹40 ಸಾವಿರ ಕೋಟಿಗೂ ಅಧಿಕ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದ ಮೋದಿ ಅವರು, ಕೆಲ ಯೋಜನೆಗಳನ್ನು ಸಹ ಉದ್ಘಾಟಿಸಿದರು.

ರಿಯಾಸಿ ಜಿಲ್ಲೆಯ ತ್ರಿಕೂಟ ಪರ್ವತ ಶ್ರೇಣಿಗಳಲ್ಲಿ ವೈಷ್ಣೋದೇವಿ ಯಾತ್ರಿಗಳಿಗಾಗಿ ಬೇಸ್ ಕ್ಯಾಂಪ್ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದರು.





ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಉದ್ಘಾಟಿಸಿದ ಚೆನಾಬ್ ಸೇತುವೆ ಮೇಲೆ ಕಟ್ರಾ–ಶ್ರೀನಗರ ನಡುವೆ ಸಂಪರ್ಕ ಕಲ್ಪಿಸುವ ವಂದೇ ಭಾರತ್ ರೈಲು ಸಂಚರಿಸಿತು (ಎಡಚಿತ್ರ). ಚೆನಾಬ್ ರೈಲ್ವೆ ಸೇತುವೆಯನ್ನು ಉದ್ಘಾಟಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ರಾಷ್ಟ್ರಧ್ವಜ ಹಿಡಿದು ಸೇತುವೆ ಮೇಲೆ ನಡೆದರು –ಪಿಟಿಐ ಚಿತ್ರಗಳು

ಕಾಂಗ್ರೆಸ್, ಬಿಜೆಪಿ ಜಟಾಪಟಿ

ನವದೆಹಲಿ: ಕಾಶ್ಮೀರ ರೈಲು ಸಂಪರ್ಕ ಯೋಜನೆ ಕುರಿತು ಕಾಂಗ್ರೆಸ್ ಪಕ್ಷ ಸುಳ್ಳು ಮಾಹಿತಿ ಹಬ್ಬಿಸುತ್ತಿದೆ ಎಂದು ಬಿಜೆಪಿ ಶುಕ್ರವಾರ ಟೀಕಿಸಿದೆ.

'ಪ್ರಧಾನಿ ನೇತೃತ್ವದ ಸರ್ಕಾರ ತಾನು ಘೋಷಿಸಿದ ಯೋಜನೆಗಳನ್ನು ಪೂರ್ಣಗೊಳಿಸಿದೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಕೇವಲ ಘೋಷಣೆಗಳನ್ನು ಮಾಡಿ, ಅವುಗಳನ್ನು ಅನುಷ್ಠಾನಕ್ಕೆ ತರುವುದನ್ನು ಮರೆಯುತ್ತಿತ್ತು' ಎಂದು ಟೀಕಿಸಿದೆ.

'ಉಧಂಪುರ–ಶ್ರೀನಗರ–ಬಾರಾಮುಲ್ಲಾ ರೈಲು ಮಾರ್ಗವು, ಈ ಹಿಂದಿನ ಸರ್ಕಾರ ಆರಂಭಿಸಿದ್ದ ಯೋಜನೆಯ ಮುಂದುವರಿಕೆಯಾಗಿದೆ. ತನ್ನನ್ನು ತಾನೇ ವೈಭವೀಕರಿಸುವ ಬಯಕೆ ಹೊಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಈ ಸಂಗತಿಯನ್ನು ಸದಾ ನಿರಾಕರಿಸುತ್ತಾ ಬಂದಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಟೀಕಿಸಿದ್ದರು.

'ಜೈರಾಮ್ ರಮೇಶ್ ಅವರೇ, ಸುಳ್ಳು ಸುದ್ದಿ ಪ್ರಸಾರ ನಿಲ್ಲಿಸಿ. ಚೆನಾಬ್ ಸೇತುವೆಯನ್ನು 2002ರಲ್ಲಿ ಎನ್‌ಡಿಎ ಸರ್ಕಾರ ರಾಷ್ಟ್ರೀಯ ಯೋಜನೆ ಎಂದು ಘೋಷಿಸಿತ್ತು. ಈ ಯೋಜನೆಯ ವೆಚ್ಚವನ್ನು ಶೇ 100ರಷ್ಟು ಕೇಂದ್ರವೇ ಭರಿಸಲಿದೆ' ಎಂದು ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಜ್ಯ ಸ್ಥಾನಮಾನ: ಒಮರ್ ಬೇಡಿಕೆ

ಕೇಂದ್ರಾಡಳಿತ ಪ್ರದೇಶದಲ್ಲಿ ಮೊದಲ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಜಮ್ಮು–ಕಾಶ್ಮೀರಕ್ಕೆ ಮತ್ತೆ ರಾಜ್ಯ ಸ್ಥಾನಮಾನ ನೀಡಬೇಕು ಎಂಬ ಬೇಡಿಕೆ ಮುಂದಿಡುವುದಕ್ಕೆ ವೇದಿಕೆಯನ್ನು ಬಳಸಿಕೊಂಡರು.

'ಇಂದು ವೇದಿಕೆಯಲ್ಲಿ ಉಪಸ್ಥಿತರಿರುವ ಪ್ರಧಾನಿ ಮೋದಿ ಸೇರಿ ನಾಲ್ಕು ಜನರು, 2014ರಲ್ಲಿ ಆಗಿನ ನನ್ನ ಸರ್ಕಾರ ಹಮ್ಮಿಕೊಂಡಿದ್ದ ಕೊನೆ ಕಾರ್ಯಕ್ರಮದಲ್ಲಿಯೂ ಉಪಸ್ಥಿತರಿದ್ದೆವು. ಆಗ, ನಾನು ಪೂರ್ಣ ಪ್ರಮಾಣದ ರಾಜ್ಯವಾಗಿದ್ದ ಜಮ್ಮು–ಕಾಶ್ಮೀರದ ಮುಖ್ಯಮಂತ್ರಿಯಾಗಿದ್ದೆ. ಈಗ, ಸ್ವಲ್ಪ ಹಿಂಬಡ್ತಿ ಪಡೆದಿರುವೆ. ಆಗ ರಾಜ್ಯದ ಮುಖ್ಯಮಂತ್ರಿಯಾಗಿದ್ದೆ, ಈಗ, ಕೇಂದ್ರಾಡಳಿತ ಪ್ರದೇಶವೊಂದರ ಮುಖ್ಯಮಂತ್ರಿಯಾಗಿದ್ದೇನೆ' ಎಂದು ಒಮರ್ ಹಾಸ್ಯಭರಿತ ಮಾತುಗಳಲ್ಲಿ ಹೇಳಿದರು.

'ಭಯೋತ್ಪಾದನೆ ದಿನಗಳು ಅಂತ್ಯ'

'ಆಪರೇಷನ್ ಸಿಂಧೂರ' ಉಲ್ಲೇಖಿಸಿ ಪ್ರಧಾನಿ ಘೋಷಣೆ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ/ಕಟ್ರಾ: 'ಆಪರೇಷನ್ ಸಿಂಧೂರ'ದ ಅಡಿ ನಡೆಸಿದ ನಿರ್ದಿಷ್ಟ ವಾಯುದಾಳಿಗಳು ಪಾಕಿಸ್ತಾನದ ಉಗ್ರರ ಪಾಲಿಗೆ ದುಃಸ್ವಪ್ನವಾಗಿದ್ದವು. ಈ ಕಾರ್ಯಾಚರಣೆಯಿಂದಾಗಿ ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದನೆಯ ದಿನಗಳು ಅಂತ್ಯಗೊಂಡಂತಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಘೋಷಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಉಲ್ಲೇಖಿಸಿದ ಮೋದಿ, 'ತಿಂಗಳ ಹಿಂದಷ್ಟೆ ಪಾಕಿಸ್ತಾನದಲ್ಲಿನ ಉಗ್ರರು ತಮ್ಮ ಕೊನೆಯ ದಿನಗಳನ್ನು ಕಂಡರು. ಭಾರತ ತಮ್ಮ ದೇಶದೊಳಗೆ ನುಗ್ಗಿ ಉಗ್ರರ ಮೂಲಸೌಕರ್ಯಗಳನ್ನು ನಾಶ ಮಾಡುತ್ತದೆ ಎಂದು ಪಾಕಿಸ್ತಾನ ಊಹೆ ಮಾಡಿರಲಿಲ್ಲ' ಎಂದು ಹೇಳಿದರು.

'ಆಪರೇಷನ್ ಸಿಂಧೂರ ಮೂಲಕ ಭಾರತದ ಪಡೆಗಳು ಪಾಕಿಸ್ತಾನಕ್ಕೆ ಬಹಳ ಪ್ರಬಲ ಪ್ರತ್ಯುತ್ತರ ನೀಡಿವೆ' ಎಂದೂ ಬಣ್ಣಿಸಿದರು.

ಚೆನಾಬ್ ನದಿಗೆ ನಿರ್ಮಿಸಿರುವ ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ ಉದ್ಘಾಟನೆ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ದೇವಸ್ಥಾನಗಳು, ಮಸೀದಿಗಳು, ಗುರುದ್ವಾರಗಳು ಹಾಗೂ ಚರ್ಚ್‌ಗಳ ಮೇಲೆ ದಾಳಿ ನಡೆಸುವ ಮೂಲಕ ನಮ್ಮಲ್ಲಿ ಒಡಕು ಮೂಡಿಸಲು ಪಾಕಿಸ್ತಾನ ಯತ್ನಿಸುತ್ತಿದೆ. ಆದರೆ, ದೇಶದ ಜನರಲ್ಲಿನ ಒಗ್ಗಟ್ಟು ಪಾಕಿಸ್ತಾನದ ಸಂಚುಗಳನ್ನು ವಿಫಲಗೊಳಿಸಿದೆ' ಎಂದರು.

'ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ದಾಳಿ ನಡೆಸುವ ಮೂಲಕ ಭಾರತದಲ್ಲಿ ಕೋಮು ಗಲಭೆಗಳಿಗೆ ಪ್ರಚೋದನೆ ನೀಡಬೇಕು, ಕಾಶ್ಮೀರ ಜನರ ದುಡಿಮೆಯನ್ನು ನಾಶ ಮಾಡಬೇಕು ಎಂಬುದೇ ಪಾಕಿಸ್ತಾನದ ಉದ್ದೇಶವಾಗಿತ್ತು' ಎಂದು ಪ್ರಧಾನಿ ಹೇಳಿದರು.

> **ಆಪರೇಷನ್ ಸಿಂಧೂರ ಎಂಬ ಪದ ಪಾಕಿಸ್ತಾನದ ಕಿವಿಗೆ ಬಿದ್ದಾಗಲೆಲ್ಲಾ ತಾನು ಅನುಭವಿಸಿದ ಅವಮಾನಕರ ಸೋಲು ಅದಕ್ಕೆ ನೆನಪಾಗಲಿದೆ**
> **ನರೇಂದ್ರ ಮೋದಿ,** ಪ್ರಧಾನಿ

'ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ದಾಳಿ ನಡೆಸುವ ಮೂಲಕ ಪಾಕಿಸ್ತಾನವು 'ಮಾನವೀಯತೆ' ಹಾಗೂ 'ಕಾಶ್ಮೀರದ ಅಸ್ಮಿತೆ' ಮೇಲೆಯೂ ದಾಳಿ ಮಾಡಿದೆ. ಕಾಶ್ಮೀರದ ಜನರು ತಮ್ಮ ಜೀವನೋಪಾಯಕ್ಕೆ ಪ್ರವಾಸೋದ್ಯಮವನ್ನೇ ಅಲವಂಬಿಸಿದ್ದಾರೆ. ಆದರೆ, ಪಾಕಿಸ್ತಾನ ಪ್ರವಾಸೋದ್ಯಮಕ್ಕೇ ಪೆಟ್ಟು ಕೊಡುವ ಮೂಲಕ ಇಲ್ಲಿನ ಜನರ ಬದುಕನ್ನು ಕಸಿಯಲು ಯತ್ನಿಸಿದೆ' ಎಂದೂ ವಾಗ್ದಾಳಿ ನಡೆಸಿದರು.

'ಪ್ರವಾಸೋದ್ಯಮ ಕಾಶ್ಮೀರ ಜನತೆಗೆ ಉದ್ಯೋಗ ನೀಡುವ ಜೊತೆಗೆ, ದೇಶದ ಇತರ ಜನರನ್ನು ಬೆಸೆಯುವ ಸೇತುವೆಯೂ ಆಗಿದೆ. ದುರದೃಷ್ಟವಶಾತ್, ನಮ್ಮ ನೆರೆಯ ರಾಷ್ಟ್ರವು ಮಾನವೀಯತೆ, ಸೌಹಾರ್ದ, ಪ್ರವಾಸೋದ್ಯಮದ ಶತ್ರುವಾಗಿದೆ' ಎಂದು ಅವರು ತಮ್ಮ ಟೀಕಾಪ್ರಹಾರವನ್ನು ಹರಿತಗೊಳಿಸಿದರು.

'ಪ್ರವಾಸಿಗರ ಮಾರ್ಗದರ್ಶಿಗಳು, ಕುದುರೆ ಸವಾರಿ ಸೇವೆ ಒದಗಿಸುವವರು, ಅತಿಥಿ ಗೃಹಗಳ ಮಾಲೀಕರು, ಅಂಗಡಿಕಾರರು, ರಸ್ತೆ ಬದಿಯ ಢಾಬಾ ನಡೆಸುವವರಿಗೆ ಪ್ರವಾಸೋದ್ಯಮವೇ ಬದುಕಿನ ಆಧಾರ. ಅಂತಹ ಪ್ರವಾಸೋದ್ಯಮವನ್ನೇ ನಾಶ ಮಾಡುವುದಕ್ಕೆ ಪಾಕಿಸ್ತಾನ ಬಯಸಿತು. ಉಗ್ರರಿಗೆ ತಡೆಯೊಡ್ಡಿದ್ದ ಆದಿಲ್ ಕೂಡ ತನ್ನ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದರು' ಎಂದು ಮೋದಿ ಹೇಳಿದರು.

'ಪಾಕಿಸ್ತಾನ ಬಡವರ ಬದುಕು ಮತ್ತು ದುಡಿಮೆಯ ಶತ್ರು. ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಇದಕ್ಕೆ ನಿದರ್ಶನ' ಎಂದೂ ಹರಿಹಾಯ್ದರು.

'ಜಮ್ಮು–ಕಾಶ್ಮೀರ ಸೇರಿ ದೇಶದ ಯುವ ಜನತೆ ಆಪರೇಷನ್ ಸಿಂಧೂರದಿಂದ ಸ್ಫೂರ್ತಿ ಪಡೆಯಬೇಕು' ಎಂದ ಮೋದಿ, 'ಈ ಕಾರ್ಯಾಚರಣೆ ನಮ್ಮ ಸಶಸ್ತ್ರ ಪಡೆಗಳ ಸಾಮರ್ಥ್ಯ ಹಾಗೂ 'ಮೇಕ್ ಇನ್ ಇಂಡಿಯಾ'ದ ಶಕ್ತಿ ಪ್ರದರ್ಶಿಸಿದೆ' ಎಂದರು.

'ಜಿ7' ಶೃಂಗ: ಮೋದಿ ಹಾಜರಿ ಖಚಿತ

ನವದೆಹಲಿ (ಪಿಟಿಐ): ಕೆನಡಾದಲ್ಲಿ ಇದೇ ತಿಂಗಳಿನಲ್ಲಿ ನಡೆಯುವ 'ಜಿ7' ರಾಷ್ಟ್ರಗಳ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಾಗಿ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

'ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಅವರು ಕರೆ ಮಾಡಿ, ಶೃಂಗಸಭೆಗೆ ಆಹ್ವಾನ ನೀಡಿದ್ದಾರೆ. ಹೊಸದಾಗಿ ಆಯ್ಕೆಯಾಗಿರುವ ಕಾರ್ನಿ ಅವರೊಂದಿಗೆ ಸಭೆ ನಡೆಸಲೂ ನಾನು ಉತ್ಸುಕನಾಗಿದ್ದೇನೆ' ಎಂದು ಪ್ರಧಾನಿ ತಿಳಿಸಿದ್ದಾರೆ.

'ಭಾರತ ಮತ್ತು ಕೆನಡಾ ಪ್ರಜಾಪ್ರಭುತ್ವ ದೇಶಗಳಾಗಿದ್ದು, ಎರಡೂ ದೇಶಗಳ ಜನರ ನಡುವೆ ಆತ್ಮೀಯವಾದ ಸಂಬಂಧವಿದೆ. ಉಭಯ ದೇಶಗಳು ಇನ್ನಷ್ಟು ಚೈತನ್ಯದಿಂದ ಜತೆಯಾಗಿ ಕೆಲಸ ಮಾಡಲಿವೆ' ಎಂದು ಅವರು ಹೇಳಿದ್ದಾರೆ.

ಕೆನಡಾದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಜಯ ಗಳಿಸಿದ ಕಾರ್ನಿ ಅವರಿಗೆ ಮೋದಿ ಅವರು ಇದೇ ವೇಳೆ ಅಭಿನಂದನೆ ಸಲ್ಲಿಸಿದ್ದಾರೆ.

ರಾಣಾ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ


ರಾಣಾ

ನವದೆಹಲಿ (ಪಿಟಿಐ): ಮುಂಬೈ ಭಯೋತ್ಪಾದಕ ದಾಳಿಯ ಸಂಚುಕೋರ ತಹವ್ವುರ್ ರಾಣಾನ ನ್ಯಾಯಾಂಗ ಬಂಧನದ ಅವಧಿಯನ್ನು ದೆಹಲಿಯ ನ್ಯಾಯಾಲಯವೊಂದು ಜುಲೈ 9ರವರೆಗೆ ವಿಸ್ತರಿಸಿದೆ.

ಪ್ರಸ್ತುತ ತಿಹಾರ್ ಜೈಲಿನಲ್ಲಿರುವ ರಾಣಾ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದ. ವಿಶೇಷ ನ್ಯಾಯಾಧೀಶರಾದ ಚಂದರ್‌ಜೀತ್ ಸಿಂಗ್ ಅವರು ಪ್ರಕರಣದ ವಿಚಾರಣೆ ನಡೆಸಿದರು.

ರಾಣಾ ಆರೋಗ್ಯ ಸ್ಥಿತಿಯ ಬಗ್ಗೆ ಆತನ ಪರ ವಕೀಲರು ಕಳವಳ ವ್ಯಕ್ತಪಡಿಸಿದ ಕಾರಣ, ಜೂನ್ 9ರ ಒಳಗಾಗಿ ರಾಣಾ ಆರೋಗ್ಯ ಸ್ಥಿತಿಯ ಬಗ್ಗೆ ವರದಿ ನೀಡುವಂತೆ ನ್ಯಾಯಾಧೀಶರು ತಿಹಾರ್ ಜೈಲಿನ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

2011ರಲ್ಲಿ ಮುಂಬೈನಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿಯ ಪ್ರಮುಖ ಸಂಚುಕೋರ ಡೇವಿಡ್ ಕೋಲ್ಮನ್ ಹೆಡ್ಲಿಯ ಆಪ್ತನಾಗಿದ್ದ ರಾಣಾನನ್ನು ಅಮೆರಿಕವು ಏಪ್ರಿಲ್‌ನಲ್ಲಿ ಭಾರತಕ್ಕೆ ಹಸ್ತಾಂತರಿಸಿತ್ತು. ಬಳಿಕ ಆತನಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿತ್ತು.

ಆ.3ಕ್ಕೆ ನೀಟ್–ಪಿಜಿ: 'ಸುಪ್ರೀಂ' ಸಮ್ಮತಿ



ನವದೆಹಲಿ (ಪಿಟಿಐ): ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಪ್ರಸಕ್ತ ಸಾಲಿನ ಆ.3 ರಂದು 'ನೀಟ್–ಪಿಜಿ' ಪರೀಕ್ಷೆ ನಡೆಸಲು ಅನುಮತಿ ಕೋರಿದ್ದ ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಪರೀಕ್ಷೆ ಮಂಡಳಿಯ (ಎನ್‌ಬಿಇ ಎಂಎಸ್) ಮನವಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿ ಸೂಚಿಸಿದೆ.

ಮೇ 30ರಂದು ಸುಪ್ರೀಂ ಕೋರ್ಟ್ ನೀಡಿದ್ದ ನಿರ್ದೇಶನದಂತೆ ಒಂದೇ ಪಾಳಿಯಲ್ಲಿ ಬೆಳಿಗ್ಗೆ 9ರಿಂದ ಮಧ್ಯಾಹ್ನ 12.30ರವರೆಗೆ ಪರೀಕ್ಷೆ ನಡೆಸುವುದಾಗಿ ಎನ್‌ಬಿಎ ಮನವಿಯಲ್ಲಿ ತಿಳಿಸಿದೆ.

ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಅಗಸ್ಟೀನ್ ಜಾರ್ಜ್ ಮಸೀಹ್ ಅವರ ಪೀಠ ಈ ಕುರಿತ ಅರ್ಜಿಯ ವಿಚಾರಣೆ ನಡೆಸಿತು. ವಿಚಾರಣೆ ಆರಂಭದಲ್ಲಿ ಪರೀಕ್ಷೆ ನಡೆಸಲು ಎರಡು ತಿಂಗಳ ಕಾಲಾವಕಾಶ ಏಕೆ ಬೇಕು ಎಂದು ಪೀಠ ಪ್ರಶ್ನಿಸಿತು. ಬಳಿಕ ಎನ್‌ಬಿಇಎಂಎಸ್ ಪರ ವಕೀಲರು ನೀಡಿದ ಕಾರಣಗಳನ್ನು ಗಮನಿಸಿದ ಪೀಠ, ಅನುಮತಿ ನೀಡಿತು. ಆದರೆ, ಇದಕ್ಕಿಂತ ಹೆಚ್ಚಿನ ಸಮಯಾವಕಾಶ ನೀಡಲಾಗುವುದಿಲ್ಲ ಎಂದು ಪೀಠ ಇದೇ ವೇಳೆ ಸ್ಪಷ್ಟಪಡಿಸಿತು.

ಮುಖ್ಯಾಂಶಗಳು

- **ಪರೀಕ್ಷೆ ತೆಗೆದುಕೊಳ್ಳಲಿದ್ದಾರೆ 2.50 ಲಕ್ಷ ಅಭ್ಯರ್ಥಿಗಳು**
- **ಒಂದೇ ಪಾಳಿಯಲ್ಲಿ ಪರೀಕ್ಷೆ ನಡೆಸುವಂತೆ ನಿರ್ದೇಶನ**

'ಸುಮಾರು 2.50 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲಿದ್ದಾರೆ. ಅವರಿಗೆ ಏಕಕಾಲದಲ್ಲಿ ಪರೀಕ್ಷೆ ನಡೆಸಲು ದೇಶದಾದ್ಯಂತ ಸಾವಿರಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳನ್ನು ಗುರುತಿಸಬೇಕಿದೆ. ಅಲ್ಲದೆ, ಪಾರದರ್ಶಕತೆ, ಸುರಕ್ಷತೆ ಮತ್ತು ಭದ್ರತಾ ವಿಷಯಗಳನ್ನು ಗಮನಿಸಬೇಕಿದೆ. ಪ್ರಶ್ನೆಪತ್ರಿಕೆ ಸೋರಿಕೆಯಾಗದಂತೆ ಎಚ್ಚರ ವಹಿಸಬೇಕಿದೆ. ತಾಂತ್ರಿಕ ಅಂಶಗಳನ್ನು ಪರಿಗಣಿಸಬೇಕಿದೆ. ಹೀಗಾಗಿ ಎರಡು ತಿಂಗಳು ಸಮಯ ಬೇಕಿದೆ' ಎಂದು ಮಂಡಳಿ ಅರ್ಜಿಯಲ್ಲಿ ಕೋರಿತ್ತು.

ಮೇ 30ರಂದು ವಿಚಾರಣೆ ನಡೆಸಿದ್ದ ಪೀಠ, ಜೂನ್ 15ರಂದು ಒಂದೇ ಪಾಳಿಯಲ್ಲಿ ಪರೀಕ್ಷೆ ನಡೆಸು ವಂತೆ ನಿರ್ದೇಶನ ನೀಡಿತ್ತು. ಅಲ್ಲದೆ ಪರೀಕ್ಷೆ ಪಾರದರ್ಶಕವಾಗಿರುವುದನ್ನು ಖಾತ್ರಿಪಡಿಸಬೇಕು ಎಂದೂ ಸೂಚಿಸಿತ್ತು.

ಅಕ್ರಮವಾಗಿ ನೆಲಸಿದ್ದ 71 ವಿದೇಶಿಗರ ಗಡೀಪಾರು

ನವದೆಹಲಿ (ಪಿಟಿಐ): ದೇಶದಲ್ಲಿ ಅಕ್ರಮವಾಗಿ ನೆಲಸಿದ್ದ ಬಾಂಗ್ಲಾ ಪ್ರಜೆಗಳು, ಮ್ಯಾನ್ಮಾರ್‌ನ ರೋಹಿಂಗ್ಯಾಗಳು, ನೈಜೀರಿಯನ್ನರು ಸೇರಿದಂತೆ 71 ವಿದೇಶಿ ಪ್ರಜೆಗಳನ್ನು ದೆಹಲಿ ಪೊಲೀಸರು ಗಡೀಪಾರು ಮಾಡಿದ್ದಾರೆ.

ದ್ವಾರಕಾದ ವಿವಿಧ ಠಾಣೆಗಳ ಪೊಲೀಸರು ಬಾಂಗ್ಲಾದೇಶದ 47 ಮಂದಿ, 17 ರೋಹಿಂಗ್ಯಾಗಳು ಹಾಗೂ ನೈಜೀರಿಯದ 7 ಮಂದಿಯನ್ನು ಬಂಧಿಸಿ ವಿದೇಶಿಗರ ಪ್ರಾದೇಶಿಕ ನೋಂದಣಿ ಕಚೇರಿಗೆ (ಎಫ್‌ಆರ್‌ಆರ್‌ಒ) ಹಾಜರುಪಡಿಸಿದರು.

ಉತ್ತಮ ನಗರ, ಚಾವ್ಲಾದ ವಿವಿಧ ಘಟಕಗಳು ಹಾಗೂ ಪೊಲೀಸ್ ಠಾಣೆಗಳ ಸಂಘಟಿತ ಕಾರ್ಯಾಚರಣೆ ಮೂಲಕ ಅಕ್ರಮವಾಗಿ ನೆಲಸಿದ್ದ ವಿದೇಶಿಗರನ್ನು ಪತ್ತೆ ಮಾಡಲಾಯಿತು. ದೇಶದೊಳಗೆ ಅಕ್ರಮವಾಗಿ ಪ್ರವೇಶಿಸಿರುವ, ವೀಸಾ ಇಲ್ಲದೆ ಅಕ್ರಮವಾಗಿ ನೆಲಸಿರುವವರನ್ನು ಪತ್ತೆ ಮಾಡಲು ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸ್ತ್ರೀಯರು ತುಂಡು ಉಡುಗೆ ಧರಿಸುವುದನ್ನು ಒಪ್ಪಲ್ಲ'


ಕೈಲಾಶ್ ವಿಜಯ

ಇಂದೋರ್ (ಪಿಟಿಐ): 'ಮಹಿಳೆಯರು ತುಂಡು ಉಡುಗೆ ಧರಿಸುವುದನ್ನು ನಾನು ಒಪ್ಪುವುದಿಲ್ಲ. ತುಂಡು ಬಟ್ಟೆ ಧರಿಸುವುದು ವಿದೇಶಿ ಪರಿಕಲ್ಪನೆಯಾಗಿದ್ದು, ಇದು ಬಾರತೀಯ ಸಂಪ್ರದಾಯಕ್ಕೆ ಹೊಂದಿಕೆ ಆಗುವುದಿಲ್ಲ' ಎಂದು ಮಧ್ಯಪ್ರದೇಶ ಸಚಿವ ಕೈಲಾಶ್ ವಿಜಯವರ್ಗೀಯ ಹೇಳಿದರು.

ಸ್ಥಳೀಯ ಬಿಜೆಪಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕಡಿಮೆ ಬಟ್ಟೆ ಧರಿಸಿದ ಮಹಿಳೆ ಸುಂದರ ಹಾಗೂ ಕಡಿಮೆ ಭಾಷಣ ಮಾಡುವ ನಾಯಕ ಉತ್ತಮ ಎಂಬ ಗಾದೆ ವಿದೇಶಗಳಲ್ಲಿದೆ. ಆದರೆ ನಾನು ಇದನ್ನು ಅನುಸರಿಸುವುದಿಲ್ಲ ಮತ್ತು ಇದು ತಪ್ಪು' ಎಂದು ತಿಳಿಸಿದರು.

'ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯನ್ನು ದೇವತೆ ಎಂದು ಪರಿಗಣಿಸಲಾಗುತ್ತದೆ. ಇಲ್ಲಿಯ ಮಹಿಳೆ ಒಂದೊಳ್ಳೆ ಬಟ್ಟೆ ಧರಿಸಿ, ಅಲಂಕಾರ ಮಾಡಿಕೊಂಡು ಆಭರಣಗಳನ್ನು ಧರಿಸಿದರೆ ಅವಳನ್ನು ಸುಂದರ ಮಹಿಳೆ ಎಂದು ಜನರು ಪರಿಗಣಿಸುತ್ತಾರೆ. ಆದರೆ ವಿದೇಶಗಳಲ್ಲಿ ಕಡಿಮೆ ಬಟ್ಟೆ ಧರಿಸಿದ ಮಹಿಳೆಯನ್ನು ಸುಂದರ ಎಂದು ಪರಿಗಣಿಸಲಾಗುತ್ತದೆ. ಅದು ಅವರ ಚಿಂತನೆಯಾಗಿದೆ' ಎಂದು ವಿಜಯವರ್ಗೀಯ ಹೇಳಿದರು.

'ಕಡಿಮೆ ಬಟ್ಟೆ ಧರಿಸುವ ಮಹಿಳೆಯರು ಶೂರ್ಪನಖಿಯರು' ಎಂದು ಈ ಹಿಂದೆ ಇವರು ಹೇಳಿಕೆ ನೀಡಿದ್ದರು.

ಆನ್‌ಲೈನ್ ವಹಿವಾಟು ಸಂಸ್ಥೆಗಳ ವಿರುದ್ಧ ಟಿಟಿಡಿ ಕಾನೂನು ಕ್ರಮ

'ತಿರುಪತಿ ಲಡ್ಡು' ಅನಧಿಕೃತ ಮಾರಾಟಕ್ಕೆ ಕಡಿವಾಣ

ಪ್ರಜಾವಾಣಿ ವಾರ್ತೆ



ಹೈದರಾಬಾದ್: ಭೌಗೋಳಿಕ ಸೂಚಕ ಸ್ಥಾನಮಾನ (ಜಿಐ ಟ್ಯಾಗ್) ಪಡೆದಿರುವ 'ತಿರುಪತಿ ಲಡ್ಡು'ವನ್ನು ಅನಧಿಕೃತವಾಗಿ ಮಾರಾಟ ಮಾಡುತ್ತಿದ್ದ ಆನ್‌ಲೈನ್ ವಹಿವಾಟು ಸಂಸ್ಥೆಗಳು ಹಾಗೂ ಮಾರಾಟಗಾರರ ವಿರುದ್ಧ ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್ (ಟಿಟಿಡಿ) ಕಾನೂನು ಕ್ರಮ ಜರುಗಿಸಿದೆ.

ಪುಷ್‌ಮೈಕಾರ್ಟ್ (ಮಹಿತಾ ಎಲ್‌ಎಲ್‌ಸಿ) ಮತ್ತು ಟ್ರಾನ್ಸಾಕ್ಟ್ ಫುಡ್ಸ್ ಲಿಮಿಟೆಡ್ ಸೇರಿದಂತೆ ಕೆಲ ಆನ್‌ಲೈನ್ ಪ್ಲಾಟ್‌ಫಾರ್ಮ್ಸ್ ಮತ್ತು ಮಾರಾಟಗಾರರಿಗೆ ನೋಟಿಸ್ ಜಾರಿಗೊಳಿಸಿದೆ. ಪುಷ್‌ಮೈಕಾರ್ಟ್ ಲೀಗಲ್ ನೋಟಿಸ್ ಸ್ವೀಕರಿಸಿದ್ದು, ತಮ್ಮ ಉತ್ಪನ್ನಗಳ ಪಟ್ಟಿಯಿಂದ 'ತಿರುಪತಿ ಲಡ್ಡು'ವನ್ನು ಕೈಬಿಟ್ಟಿದೆ. ಇತರೆ ಮಾರಾಟಗಾರರು ಸಹ ತಮ್ಮ ಪಟ್ಟಿಯಿಂದ ತೆಗೆದು ಹಾಕಿದ್ದಾರೆ.

'ತಿರುಪತಿ ಲಡ್ಡು ಕೇವಲ ಉತ್ಪನ್ನವಲ್ಲ; ಅದು ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯವನ್ನು ಹೊಂದಿರುವ ಪ್ರಸಾದವಾಗಿದೆ. ಜಗತ್ತಿನಾದ್ಯಂತ ಇರುವ ಕೋಟ್ಯಂತರ ಭಕ್ತರ ನಂಬಿಕೆಯನ್ನು ರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಿದ್ಧರಿದ್ದೇವೆ' ಎಂದು ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಜೆ.ಶ್ಯಾಮಲಾ ರಾವ್ ತಿಳಿಸಿದ್ದಾರೆ.

ಭೌಗೋಳಿಕ ಸೂಚಕ ಸ್ಥಾನಮಾನ ಪಡೆದ ಉತ್ಪನ್ನಗಳು (ನೋಂದಣಿ ಮತ್ತು ರಕ್ಷಣೆ) ಕಾಯ್ದೆ 1999 ಅನ್ವಯ 'ತಿರುಪತಿ ಲಡ್ಡು'ವಿಗೆ ಕಾನೂನಿನ ರಕ್ಷಣೆ ದೊರೆತಿದೆ. ಟಿಟಿಡಿಯ ಮೇಲುಸ್ತುವಾರಿಯಲ್ಲಿ ತಿರುಪತಿ ಲಡ್ಡುವನ್ನು ಜತನದಿಂದ ತಯಾರಿಸಲಾಗುತ್ತದೆ.

'ತಿರುಪತಿ ಲಡ್ಡು'ವಿನ ಅನಧಿಕೃತ ಬಳಕೆ ಹಾಗೂ ಮಾರಾಟವು ಕಾನೂನು ಉಲ್ಲಂಘನೆಯಾಗಿದ್ದು, ಧಾರ್ಮಿಕ ಭಾವನೆಗಳಿಗೂ ಧಕ್ಕೆ ತರುತ್ತದೆ. ತಿರುಮಲ ದೇವಸ್ಥಾನದ ಪಾಕಶಾಲೆ 'ಪೋಟು'ನಲ್ಲಿ ಪೂಜ್ಯನೀಯವಾಗಿ 'ಲಡ್ಡು'ವನ್ನು ತಯಾರಿಸಲಾಗುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ನಕಾರಾತ್ಮಕ ಕಾರಣಗಳಿಗಾಗಿ ಗಮನ ಸೆಳೆದಿದೆ.

ತಿರುಪತಿಯ ಪ್ರಧಾನ ದೇವರಾದ ವೆಂಕಟೇಶ್ವರ ಸ್ವಾಮಿಗೆ ಲಡ್ಡು ನೈವೇದ್ಯ ಇಡುವ ಪದ್ಧತಿ 1715ರಲ್ಲಿ ಆರಂಭವಾಯಿತು. ದೇವಾಲಯದ ಪಾಕಶಾಲೆಯು ಪ್ರತಿದಿನ 8 ಲಕ್ಷ ಲಡ್ಡು ತಯಾರಿಸುವ ಸಾಮರ್ಥ್ಯ ಹೊಂದಿದೆ. 620 ಮಂದಿ ಬಾಣಸಿಗರಿದ್ದು, ಪ್ರತಿದಿನ 3 ಲಕ್ಷದಿಂದ 3.5 ಲಕ್ಷ ಲಡ್ಡುಗಳನ್ನು ತಯಾರಿಸುತ್ತಾರೆ. ದೇವಸ್ಥಾನವು ಲಡ್ಡುಗಳ ಮಾರಾಟದಿಂದ ವಾರ್ಷಿಕ ₹500 ಕೋಟಿ ವರಮಾನ ಗಳಿಸುತ್ತಿದೆ.

ಫ್ರೆಂಚ್ ಓಪನ್ ಟೆನಿಸ್: ಗಾಯಾಳಾಗಿ ಅರ್ಧದಲ್ಲೇ ಹಿಂದೆ ಸರಿದ ಮುಸೆಟ್ಟಿ

ಮತ್ತೆ ಫೈನಲ್‌ಗೇರಿದ ಅಲ್ಕರಾಜ್

ಪ್ಯಾರಿಸ್ (ರಾಯಿಟರ್ಸ್/ ಎಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಸತತ ಎರಡನೇ ಬಾರಿ ಫ್ರೆಂಚ್ ಓಪನ್ ಪುರುಷರ ಸಿಂಗಲ್ಸ್ ಫೈನಲ್ ತಲುಪಿದರು. ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದ ವೇಳೆ ಅವರ ಎದುರಾಳಿ ಎಂಟನೇ ಶ್ರೇಯಾಂಕದ ಲೊರೆಂಜೊ ಮುಸೆಟ್ಟಿ ಗಾಯಾಳಾಗಿ ಅರ್ಧದಲ್ಲೇ ಹಿಂದೆಸರಿದರು.

ಎಡಗಾಲಿನ ತೊಡೆಯ ನೋವಿನಿಂದ ಇಟಲಿಯ ಆಟಗಾರ ಪಂದ್ಯದಿಂದ ನಿವೃತ್ತರಾದಾಗ, ಸ್ಪೇನ್‌ನ ಆಟಗಾರ 4-6, 7-6 (3), 6-0, 2-0 ಯಿಂದ ಮುನ್ನಡೆ ಸಾಧಿಸಿದ್ದರು.

25 ವರ್ಷಗಳಲ್ಲಿ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ರಫೆಲ್ ನಡಾಲ್ ಮತ್ತು ಗುಸ್ತಾವೊ ಕುಯೆರ್ಟನ್ ಮಾತ್ರ ಪ್ರಶಸ್ತಿ ಉಳಿಸಿಕೊಂಡಿದ್ದಾರೆ. ಅಲ್ಕರಾಜ್ ಈ ಬಾರಿ ಗೆದ್ದಲ್ಲಿ ಆ ಸಾಧನೆ ಮಾಡಿದ ಮೂರನೇ ಆಟಗಾರ ಎನಿಸಲಿದ್ದಾರೆ. ಎರಡನೇ ಶ್ರೇಯಾಂಕದ ಅಲ್ಕರಾಜ್ ಭಾನುವಾರ ನಡೆಯುವ ಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಮತ್ತು 24 ಬಾರಿಯ ಗ್ರ್ಯಾನ್‌ಸ್ಲಾಮ್ ವಿಜೇತ ನೊವಾಕ್ ಜೊಕೊವಿಚ್ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಮುಸೆಟ್ಟಿ ಮೊದಲ ಸೆಟ್‌ನ ಆರಂಭದ 9 ಗೇಮ್‌ಗಳಲ್ಲಿ ಎರಡು ಬಾರಿ ಬ್ರೇಕ್ ಮಾಡುವ ಅವಕಾಶಗಳನ್ನು ತಡೆದರು. ಸ್ಪೇನ್‌ನ ಆಟಗಾರ ಸರ್ವ್ ವೇಳೆ ತಪ್ಪುಗಳನ್ನು ಎಸಗಿದ್ದರಿಂದ 23 ವರ್ಷ ವಯಸ್ಸಿನ ಮುಸೆಟ್ಟಿ ಮೊದಲ ಸೆಟ್ ಗೆದ್ದರು.

ಒಂದು ಹಂತದಲ್ಲಿ ತಾಳ್ಮೆ ಕಳೆದುಕೊಂಡ ಅಲ್ಕರಾಜ್ ಎರಡನೇ ಸೆಟ್‌ನ ಆರಂಭದಲ್ಲಿ ಬೆಂಚ್ ಒದ್ದು ಹತಾಶೆ ವ್ಯಕ್ತಪಡಿಸಿದರು. ಆದರೆ ಕೊನೆಗೂ ಮುಸೆಟ್ಟಿ ಅವರ ರಕ್ಷಣಾ ಆಟ ಭೇದಿಸಿ ಸ್ಕೋರ್ ಸಮಮಾಡಿಕೊಂಡು ಟೈಬ್ರೇಕರ್‌ನಲ್ಲಿ ಸೆಟ್ ಗೆದ್ದರು. ಮೂರನೇ ಸೆಟ್‌ನಲ್ಲಂತೂ ಅವರು ಕರಾರುವಾಕ್ ಹೊಡೆತಗಳನ್ನು ಆಡಿ ಎದುರಾಳಿಯ ಲಯ ತಪ್ಪಿಸಿದರು.

ಮೂರನೇ ಸೆಟ್‌ನ ಮಧ್ಯಭಾಗದ ವೇಳೆ ಮುಸೆಟ್ಟಿ ಅವರಿಗೆ ಎಡತೊಡೆಯ ನೋವು ಕಾಣಿಸಿಕೊಂಡಿತು. ನಾಲ್ಕನೇ ಸೆಟ್‌ನ ಎರಡು ಗೇಮ್ ನಂತರ ಅವರು ಪಂದ್ಯ ತ್ಯಜಿಸಿದರು.



ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್



ಅಮೆರಿಕದ ಕೊಕೊ ಗಾಫ್ ಎಪಿ/ಪಿಟಿಐ ಚಿತ್ರ

ಪ್ರಶಸ್ತಿಗೆ ಇಂದು ಕೊಕೊ ಗಾಫ್– ಅರಿನಾ ಸಬಲೆಂಕಾ ಸೆಣಸಾಟ

ಅಮೆರಿಕದ ಕೊಕೊ ಗಾಫ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಬಾರಿ ಫೈನಲ್ ತಲುಪಿದ್ದಾರೆ. ಎರಡನೇ ಶ್ರೇಯಾಂಕದ ಗಾಫ್ ಶನಿವಾರ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಅವರನ್ನು ಎದುರಿಸಲಿದ್ದಾರೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಗುರುವಾರ ರಾತ್ರಿ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ 21 ವರ್ಷ ವಯಸ್ಸಿನ ಗಾಫ್ 6-1, 6-2ರಿಂದ ಆತಿಥೇಯ ಫ್ರಾನ್ಸ್‌ನ ಲೋಯಿಸ್ ವಸ್ಸೂನ್ ಅವರನ್ನು ಸೋಲಿಸಿದರು. ಇದಕ್ಕೂ ಮುನ್ನ ಮತ್ತೊಂದು ಸೆಮಿಫೈನಲ್‌ನಲ್ಲಿ ಬೆಲರೂಸ್‌ನ ಸಬಲೆಂಕಾ, ನಾಲ್ಕು ಬಾರಿಯ ಚಾಂಪಿಯನ್ ಇಗಾ ಶ್ವಾಂಟೆಕ್ (ಪೋಲೆಂಡ್) ಅವರನ್ನು ಮಣಿಸಿದ್ದರು.

ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ 361ನೇ ಶ್ರೇಯಾಂಕದ ವಸ್ಸೂನ್ ಟೂರ್ನಿಯಲ್ಲಿ ಮೂರನೇ ಶ್ರೇಯಾಂಕದ ಜೆಸಿಕಾ ಪೆಗುಲಾ ಮತ್ತು ಆರನೇ ಶ್ರೇಯಾಂಕದ ಮಿರಾ ಆ್ಯಂಡ್ರೀವಾ ಅವರಿಗೆ ಆಘಾತ ನೀಡಿ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ನಾಲ್ಕರ ಘಟ್ಟ ಪ್ರವೇಶಿಸಿ ಇತಿಹಾಸ ನಿರ್ಮಿಸಿದ್ದರು.

ಏಕೈಕ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ (2023ರ ಅಮೆರಿಕ ಓಪನ್) ಪ್ರಶಸ್ತಿ ಗೆದ್ದಿರುವ ಗಾಫ್ 2022ರಲ್ಲಿ ಇಲ್ಲಿ ಫೈನಲ್‌ನಲ್ಲಿ 6–1, 6–3ರಿಂದ ಶ್ವಾಂಟೆಕ್ ಎದುರು ಮುಗ್ಗರಿಸಿದ್ದರು. ಗಾಫ್ ಮತ್ತು ಸಬಲೆಂಕಾ ಈತನಕ ಒಟ್ಟು 10 ಬಾರಿ ಮುಖಾಮುಖಿಯಾಗಿದ್ದು, ಸಮಬಲ (ತಲಾ ಐದು ಗೆಲುವು) ಸಾಧಿಸಿದ್ದಾರೆ. ಕೊನೆಯ ಬಾರಿ ಮೇ ತಿಂಗಳಲ್ಲಿ ಮ್ಯಾಡ್ರಿಡ್ ಓಪನ್ ಫೈನಲ್‌ನಲ್ಲಿ ಎದುರಾಗಿದ್ದರು. ಅಲ್ಲಿ, 27 ವರ್ಷ ವಯಸ್ಸಿನ ಸಬಲೆಂಕಾ ನೇರ ಸೆಟ್‌ಗಳಿಂದ ಗೆಲುವು ಸಾಧಿಸಿದ್ದರು.

2013ರ ಬಳಿಕ ಮೊದಲ ಬಾರಿ ಫ್ರೆಂಚ್ ಓಪನ್‌ನ ಮಹಿಳೆಯರ ಸಿಂಗಲ್ಸ್‌ನ ಫೈನಲ್‌ನಲ್ಲಿ ಮೊದಲೆರಡು ಶ್ರೇಯಾಂಕದ ಆಟಗಾರ್ತಿಯರು ಮುಖಾಮುಖಿ ಯಾಗುತ್ತಿದ್ದಾರೆ. 12 ವರ್ಷಗಳ ಹಿಂದೆ ಅಗ್ರ ಶ್ರೇಯಾಂಕ ಹೊಂದಿದ್ದ ಸೆರೆನಾ ವಿಲಿಯಮ್ಸ್ (ಅಮೆರಿಕ) ಅವರು ಎರಡನೇ ಶ್ರೇಯಾಂಕ ಪಡೆದಿದ್ದ ಮರಿಯಾ ಶರಪೋವಾ (ರಷ್ಯಾ) ಅವರನ್ನು ಮಣಿಸಿ ಪ್ರಶಸ್ತಿ ಗೆದ್ದಿದ್ದರು.

ಪ್ರಶಸ್ತಿಗೆ ಗುಕೇಶ್, ಕಾರ್ಲ್‌ಸನ್ ಪೈಪೋಟಿ

ನಾರ್ವೆ ಚೆಸ್ ಟೂರ್ನಿ: ವೀ ಯಿ ವಿರುದ್ಧ ಗೆದ್ದ ಭಾರತದ ಗ್ರ್ಯಾಂಡ್‌ಮಾಸ್ಟರ್

ಸ್ಟಾವೆಂಜರ್ (ನಾರ್ವೆ): ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನಲ್ಲಿ ಚೀನಾದ ವೀ ಯಿ ಅವರನ್ನು 40 ನಡೆಗಳಲ್ಲಿ ಸೋಲಿಸಿ ಪೂರ್ಣ ಮೂರು ಪಾಯಿಂಟ್ ಗಳಿಸಿದ್ದಾರೆ. ಆ ಮೂಲಕ ಆತಿಥೇಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರೊಂದಿಗೆ ಪ್ರಶಸ್ತಿಯ ರೇಸ್‌ನಲ್ಲಿದ್ದಾರೆ.

ಗುಕೇಶ್, ಇನ್ನೊಂದು ಸುತ್ತು ಉಳಿದಿರುವಂತೆ 14.5 ಪಾಯಿಂಟ್ಸ್ ಕಲೆಹಾಕಿದ್ದಾರೆ. ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲ್‌ಸನ್ (15 ಪಾಯಿಂಟ್ಸ್) ಗುರುವಾರ ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಫ್ಯಾಬಿಯಾನೊ ಕರುವಾನ (12.5) ವಿರುದ್ಧ ಸೋಲುವ ಅಪಾಯದಿಂದ ಪಾರಾಗಿ ಪೂರ್ಣ ಮೂರು ಪಾಯಿಂಟ್ಸ್ ಪಡೆಯುವಲ್ಲಿ ಯಶಸ್ವಿ ಆಗಿದ್ದಾರೆ.

ಅಂತಿಮ (10ನೇ) ಸುತ್ತಿನಲ್ಲಿ 19 ವರ್ಷ ವಯಸ್ಸಿನ ಗುಕೇಶ್, ಕರುವಾನ ವಿರುದ್ಧ, ಕಾರ್ಲ್‌ಸನ್ ಅವರು ಭಾರತದ ಅರ್ಜುನ್ ಇರಿಗೇಶಿ ವಿರುದ್ಧ ಆಡಲಿದ್ದಾರೆ. ಪ್ರಶಸ್ತಿ ಗೆದ್ದ ಆಟಗಾರ ಟ್ರೋಫಿಯ ಜೊತೆ ₹59 ಲಕ್ಷ ಬಹುಮಾನ ಪಡೆಯಲಿದ್ದಾರೆ.

ಕಾರ್ಲ್‌ಸನ್ ಗೆದ್ದರೆ ಏಳನೇ ಬಾರಿ ಇಲ್ಲಿ ಚಾಂಪಿಯನ್ ಆಗುತ್ತಾರೆ. ಗುಕೇಶ್ ಎರಡನೇ ಬಾರಿ ಇಲ್ಲಿ ಆಡುತ್ತಿದ್ದು ಮೊದಲ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ.



ಗುಕೇಶ್ ಪಿಟಿಐ ಸಂಗ್ರಹ ಚಿತ್ರ

ಅಮೆರಿಕದ ಇನ್ನೊಬ್ಬ ಗ್ರ್ಯಾಂಡ್‌ಮಾಸ್ಟರ್ ಹಿಕಾರು ನಕಾಮುರ ಅವರು 13 ಪಾಯಿಂಟ್ಸ್ ಹೊಂದಿದ್ದು, ಪ್ರಶಸ್ತಿಯ ಕ್ಷೀಣ ಅವಕಾಶ ಅವರಿಗೂ ಇದೆ. ಅದು ಇತರ ಫಲಿತಾಂಶಗಳನ್ನು ಅವಲಂಬಿಸಿದೆ. ನಕಾಮುರ ಒಂಬತ್ತನೇ ಸುತ್ತಿನಲ್ಲಿ ಇರಿಗೇಶಿ (11.5) ಅವರನ್ನು ಆರ್ಮ್‌ಗೆಡನ್‌ನಲ್ಲಿ ಸೋಲಿಸಿದರು. ಕ್ಲಾಸಿಕಲ್ ಪಂದ್ಯ ಡ್ರಾ ಆಗಿದ್ದರಿಂದ, ಟೂರ್ನಿಯ ನಿಯಮದ ಪ್ರಕಾರ ಟೈಬ್ರೇಕರ್ ಪಂದ್ಯ ಆಡಲಾಗುತ್ತದೆ.

ವೀ ಯಿ (8) ಕೊನೆಯ ಸ್ಥಾನದಲ್ಲಿದ್ದಾರೆ.

ಅವಕಾಶ ಕೈಚೆಲ್ಲಿದ ಹಂಪಿ



ಕೋನೇರು ಹಂಪಿ

ಮಹಿಳೆಯರ ವಿಭಾಗದಲ್ಲಿ, ಎರಡು ಬಾರಿಯ ವಿಶ್ವ ರ್‍ಯಾಪಿಡ್ ಚಾಂಪಿಯನ್ ಕೋನೇರು ಹಂಪಿ (13.5) ಅವರು ಚೀನಾದ ಲೀ ಟಿಂಗ್ಜಿ (13) ವಿರುದ್ಧ ಸೋತರು. ಗೆದ್ದಲ್ಲಿ ಅವರಿಗೆ ಪ್ರಶಸ್ತಿ ಖಾತರಿಯಾಗುತಿತ್ತು.

ಎಂಟನ ಸುತ್ತಿನವರೆಗೆ ಮುನ್ನಡೆಯಲ್ಲಿದ್ದ ಹಂಪಿ ಎರಡನೇ ಸ್ಥಾನಕ್ಕೆ ಸರಿದರು. ವಿಶ್ವ ಚಾಂಪಿಯನ್, ಚೀನಾದ ಜು ವೆನ್‌ಜುನ್ (12.5) ಅವರನ್ನು ಸೋಲಿಸಿದ ಉಕ್ರೇನಿನ ಜಿಎಂ ಅನ್ನಾ ಮುಝಿಚುಕ್ (15.5) ಅಗ್ರಸ್ಥಾನ ಕ್ಕೇರಿದರು. ಆರ್.ವೈಶಾಲಿ (9.5), ಇನ್ನೊಂದು ಪಂದ್ಯದಲ್ಲಿ ಸ್ಪೇನ್‌ನ್ ಸಾರಾ ಖಾದೆಮ್ (9) ಅವರಿಗೆ ಮಣಿದರು.

ಹಂಪಿ ಅಂತಿಮ ಸುತ್ತಿನಲ್ಲಿ ಜು ಅವರನ್ನು ಎದುರಿಸಲಿದ್ದಾರೆ. ಮುಝಿಚುಕ್ ಇನ್ನೊಂದು ಪಂದ್ಯದಲ್ಲಿ ವೈಶಾಲಿ ವಿರುದ್ಧ ಆಡಲಿದ್ದಾರೆ.

ಭಾರತ– ಇಂಗ್ಲೆಂಡ್ ಟೆಸ್ಟ್ ಸರಣಿಗೆ ತೆಂಡೂಲ್ಕರ್– ಆ್ಯಂಡರ್ಸನ್ ಟ್ರೋಫಿ

ಲಂಡನ್ (ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ನಡುವಣ ಈ ತಿಂಗಳ ಮಧ್ಯದಲ್ಲಿ ಆರಂಭವಾಗುವ ಕ್ರಿಕೆಟ್ ಟೆಸ್ಟ್ ಸರಣಿಗೆ ಹೊಸ ಟ್ರೋಫಿ ನೀಡಲಾಗುತ್ತಿದ್ದು, ಇದಕ್ಕೆ ಸಚಿನ್ ತೆಂಡೂಲ್ಕರ್–ಜೇಮ್ಸ್ ಆ್ಯಂಡರ್ಸನ್ ಟ್ರೋಫಿ ಎಂದು ಹೆಸರಿಡಲಾಗಿದೆ.



ತೆಂಡೂಲ್ಕರ್



ಆ್ಯಂಡರ್ಸನ್

ಜೂನ್ 20ರಂದು ಹೆಡಿಂಗ್ಲೆಯಲ್ಲಿ ಮೊದಲ ಟೆಸ್ಟ್ ಆರಂಭವಾಗುತ್ತಿದ್ದು, ಅದಕ್ಕೆ ಮೊದಲು ಟ್ರೋಫಿಯ ಅನಾವರಣ ನಡೆಯಲಿದೆ ಎಂದು ಬಿಬಿಸಿ ವರದಿ ಮಾಡಿದೆ. ಆದರೆ ಈ ಬಗ್ಗೆ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಬೋರ್ಡ್ (ಇಸಿಬಿ) ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ ಎಂದೂ ವರದಿ ಮಾಡಿದೆ.

ಈ ಮೊದಲು ಭಾರತ ಮತ್ತು ಇಂಗ್ಲೆಂಡ್ ನಡುವಣ ಇಂಗ್ಲೆಂಡ್‌ನಲ್ಲಿ ನಡೆಯುತ್ತಿದ್ದ ಟೆಸ್ಟ್ ಸರಣಿಗೆ ಪಟೌಡಿ ಟ್ರೋಫಿ ಎಂಬ ಹೆಸರಿತ್ತು. ಭಾರತ ತಂಡಕ್ಕೆ ಆಡಿದ್ದ ಇಫ್ತಿಕಾರ್ ಅಲಿ ಖಾನ್ ಪಟೌಡಿ ಮತ್ತು ಅವರ ಪುತ್ರ ಮನ್ಸೂರ್ ಅಲಿ ಖಾನ್ ಪಟೌಡಿ ನೆನಪಿನಲ್ಲಿ ಈ ಹೆಸರು ಇಡಲಾಗಿತ್ತು. ಈ ಟ್ರೋಫಿಗೆ 'ನಿವೃತ್ತಿ' ನೀಡಲು ಬಯಸುವುದಾಗಿ ಇಸಿಬಿ ಕಳೆದ ಮಾರ್ಚ್‌ನಲ್ಲಿ ಪಟೌಡಿ ಕುಟುಂಬಕ್ಕೆ ಪತ್ರ ಬರೆದಿತ್ತು.

ಕ್ರಿಕೆಟ್ ದಿಗ್ಗಜರಾದ 52 ವರ್ಷ ವಯಸ್ಸಿನ ಸಚಿನ್ ತೆಂಡೂಲ್ಕರ್ 1989 ರಿಂದ 2013ರ ನಡುವೆ 200 ಟೆಸ್ಟ್‌ಗಳನ್ನು ಆಡಿದ್ದು, 15921 ರನ್ ಕಲೆಹಾಕಿದ್ದಾರೆ. ಜಿಮ್ಮಿ ಆ್ಯಂಡರ್ಸನ್ ಟೆಸ್ಟ್‌ನಲ್ಲಿ ಅತಿ ಹೆಚ್ಚು (704) ವಿಕೆಟ್‌ಗಳನ್ನು ಪಡೆದ ವೇಗದ ಬೌಲರ್ ಎನಿಸಿದ್ದಾರೆ. 42 ವರ್ಷ ವಯಸ್ಸಿನ ಅವರು ರಾಷ್ಟ್ರೀಯ ತಂಡಕ್ಕೆ ವೇಗದ ಬೌಲಿಂಗ್ ಕನ್ಸಲ್ಟೆಂಟ್ ಆಗಿದ್ದಾರೆ.

ಫುಟ್‌ಬಾಲ್: ಯಂಗ್ ಬಾಯ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ಯಂಗ್ ಬಾಯ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಶುಕ್ರವಾರ 2–1 ಗೋಲುಗಳಿಂದ ಆರ್‌ಬಿಐ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಲಾ ಮಾಸಿಯಾ ಎಫ್‌ಸಿ 2–1ರಿಂದ ಇಸಿಡಿ ಎಫ್‌ಸಿ ತಂಡದ ವಿರುದ್ಧ; ಎಂಪೈರ್ ಎಫ್‌ಸಿ 7–0ರಿಂದ ಓರಿಯಂಟಲ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.

ಅಫ್ಗನ್ ಎಫ್‌ಸಿ 2–2ರಿಂದ ವೇಲು ಸೋಷಿಯಲ್ಸ್ ಎಫ್‌ಸಿ ವಿರುದ್ಧ ಡ್ರಾ ಸಾಧಿಸಿತು.

ಬ್ಯಾಸ್ಕೆಟ್‌ಬಾಲ್: ಮೈಸೂರು ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮನ್ ಮತ್ತು ರೋನಕ್ ಅವರ ಆಟದ ಬಲದಿಂದ ಮೈಸೂರು ಜಿಲ್ಲಾ ಎ ತಂಡವು ಶುಕ್ರವಾರ ಡಿ.ಎನ್. ರಾಜಣ್ಣ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದಲ್ಲಿ 64–62ರಿಂದ ಬೆಂಗಳೂರು ವ್ಯಾನ್ಗಾರ್ಡ್ಸ್ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಸೂಪರ್ ಲೀಗ್ ಹಂತದ ಪಂದ್ಯದಲ್ಲಿ ವಿರಾಮದ ವೇಳೆಗೆ ಎಂಟು ಅಂಕಗಳ (34–26) ಮುನ್ನಡೆ ಪಡೆದಿದ್ದ ಮೈಸೂರು ತಂಡವು ಕೊನೆಯಲ್ಲಿ ಎರಡು ಅಂಕಗಳಿಂದ ರೋಚಕ ಗೆಲುವು ಸಾಧಿಸಿತು. ಸುಮನ್ ಮತ್ತು ರೋನಕ್ ಕ್ರಮವಾಗಿ 21 ಮತ್ತು 18 ಅಂಕ ಗಳಿಸಿದರು. ವ್ಯಾನ್ಗಾರ್ಡ್ಸ್ ತಂಡದ ಕೀರ್ತಿಕೃಷ್ಣ 21 ಮತ್ತು ಅನಿರುದ್ಧ್ 16 ಪಾಯಿಂಟ್ಸ್ ಕಲೆ ಹಾಕಿದರು.

ಫಲಿತಾಂಶ: ಸೂಪರ್ ಲೀಗ್ ಹಂತ: ಬಾಲಕರು: ಬೆಂಗಳೂರು ವ್ಯಾನ್ಗಾರ್ಡ್ಸ್ 63–28ರಿಂದ ಎಂಸಿಎಚ್‌ಎಸ್ ವಿರುದ್ಧ; ಡಿವೈಇಎಸ್ ಬೆಂಗಳೂರು 62–37ರಿಂದ ದಕ್ಷಿಣ ಕನ್ನಡ ಜಿಲ್ಲೆ ವಿರುದ್ಧ; ಎಚ್‌ಬಿಆರ್ ಬಿ.ಸಿ 58–44ರಿಂದ ರಾಜ್‌ಮಹಲ್ ಬಿ.ಸಿ ವಿರುದ್ಧ; ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ 73–64ರಿಂದ ಯಂಗ್ ಓರಿಯನ್ಸ್ ಎಸ್.ಸಿ ವಿರುದ್ಧ; ಮೈಸೂರು ಜಿಲ್ಲೆ ಎ 64–62ರಿಂದ ಬೆಂಗಳೂರು ವ್ಯಾನ್ಗಾರ್ಡ್ಸ್ ವಿರುದ್ಧ ಜಯ ಸಾಧಿಸಿತು. **ಬಾಲಕಿಯರು:** ಮೌಂಟ್ಸ್ ಕ್ಲಬ್ 67–63ರಿಂದ ಬೀಗಲ್ಸ್ ಬಿ.ಸಿ ಎದುರು; ಸದರ್ನ್ ಬ್ಲೂಸ್ 63–57ರಿಂದ ವಿಜಯಪುರ ಜಿಲ್ಲೆ ಎದುರು; ಮಂಡ್ಯ ಜಿಲ್ಲೆ 54–46ರಿಂದ ವಿವೇಕ್ಸ್ ಎಸ್.ಸಿ ಎದುರು; ರಾಜ್‌ಮಹಲ್ ಬಿ.ಸಿ 31–29ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ಎದುರು ಗೆಲುವು ಸಾಧಿಸಿತು.



ಬೀಗಲ್ಸ್ ತಂಡದ ಪೂರ್ವಿ (ಎಡ) ಮತ್ತು ಮೌಂಟ್ಸ್ ಕ್ಲಬ್ ತಂಡದ ನಿಲಾಯ ಚೆಂಡಿಗಾಗಿ ಸೆಣಸಾಟ ನಡೆಸಿದರು ಚಿತ್ರ:ಎಸ್‌.ಕೆ. ದಿನೇಶ್

ಕ್ರಿಕೆಟ್‌ಗೆ ಪೀಯೂಷ್ ವಿದಾಯ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಲೆಗ್‌ಸ್ಪಿನ್ನರ್ ಪೀಯೂಷ್ ಚಾವ್ಲಾ ಅವರು ಶುಕ್ರವಾರ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. ಎರಡು ವಿಶ್ವಕಪ್‌ಗಳನ್ನು ಜಯಿಸಿದ ಭಾರತ ತಂಡವನ್ನು ಅವರು ಪ್ರತಿನಿಧಿಸಿದ್ದರು.

'ಎರಡು ದಶಕಗಳ ನಂತರ ಈ ಸೊಗಸಾದ ಆಟಕ್ಕೆ ವಿದಾಯ ಹೇಳುವ ಕಾಲ ಬಂದಿದೆ. ಕ್ರೀಸ್‌ನಿಂದ ಹೊರಗೆ ಹೆಜ್ಜೆ ಇಡುತ್ತಿರುವೆ. ಆದರೆ ಕ್ರಿಕೆಟ್ ನನ್ನೊಳಗೆ ಸದಾ ಇರಲಿದೆ. ಹೊಸ ಪಯಣದತ್ತ ಸಾಗಲಿದ್ದೇನೆ' ಎಂದು 36 ವರ್ಷದ ಚಾವ್ಲಾ ಇನ್ಸ್ಟಾಗ್ರಾಮ್‌ನಲ್ಲಿ ವಿದಾಯದ ಸಂದೇಶ ಹಾಕಿದ್ದಾರೆ.

2007ರಲ್ಲಿ ಟಿ20 ಮತ್ತು 2011ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸಿದ್ದ ತಂಡಗಳಲ್ಲಿ ಅವರು ಆಡಿದ್ದರು. ಉತ್ತರ ಪ್ರದೇಶದ ಅಲೀಗಢದ ಚಾವ್ಲಾ ಅವರು ಒಟ್ಟು 3 ಟೆಸ್ಟ್, 25 ಏಕದಿನ ಮತ್ತು ಏಳು ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. ಒಟ್ಟು 43 ವಿಕೆಟ್‌ಗಳನ್ನು ಗಳಿಸಿದ್ದಾರೆ.



ಪೀಯೂಷ್ ಚಾವ್ಲಾ

'ಭಾರತವನ್ನು ಪ್ರತಿನಿಧಿಸುವ ಗೌರವ ಮತ್ತು 2007 ಹಾಗೂ 2011ರ ವಿಶ್ವಕಪ್ ವಿಜೇತ ತಂಡಗಳಲ್ಲಿ ಆಡುವ ಅವಕಾಶ ನನಗೆ ಲಭಿಸಿದ್ದು ಸೌಭಾಗ್ಯವಾಗಿದೆ. ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್, ಕೋಲ್ಕತ್ತ ನೈಟ್ ರೈಡರ್ಸ್, ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸುವೆ' ಎಂದಿದ್ದಾರೆ.

ದೇಶಿ ಕ್ರಿಕೆಟ್‌ನಲ್ಲಿ ಮೂರು ಮಾದರಿಗಳೂ ಸೇರಿ ಒಂದು ಸಾವಿರಕ್ಕೂ ಹೆಚ್ಚು ವಿಕೆಟ್‌ಗಳನ್ನು ಗಳಿಸಿದ್ದಾರೆ.

ರಾಹುಲ್ ಶತಕ; ಜುರೇಲ್ ಅರ್ಧಶತಕ

ನಾರ್ತಾಂಪ್ಟನ್ (ಪಿಟಿಐ): ಆರಂಭಿಕ ಆಟಗಾರ ಕೆ.ಎಲ್. ರಾಹುಲ್ (116;168ಎ, 4x15, 6x1) ಅವರ ಆಕರ್ಷಕ ಶತಕದ ನೆರವಿನಿಂದ ಭಾರತ ಎ ತಂಡವು, ಇಂಗ್ಲೆಂಡ್ ಲಯನ್ಸ್ ವಿರುದ್ಧದ ಎರಡನೇ 'ಟೆಸ್ಟ್' ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸವಾಲಿನ ಮೊತ್ತ ಗಳಿಸಿದೆ.

ಟಾಸ್ ಗೆದ್ದ ಲಯನ್ಸ್ ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ಭಾರತ ತಂಡಕ್ಕೆ ರಾಹುಲ್ ಅವರೊಂದಿಗೆ ಕರುಣ್ ನಾಯರ್ (40) ಮತ್ತು ಧ್ರುವ ಜುರೇಲ್ (52) ಆಸರೆಯಾದರು. ಮೊದಲ ದಿನದಾಟದ ಅಂತ್ಯಕ್ಕೆ ಭಾರತ ಎ ತಂಡ 83 ಓವರ್‌ಗಳಲ್ಲಿ 7 ವಿಕೆಟ್‌ಗೆ 319 ರನ್ ಗಳಿಸಿತು. ಲಯನ್ಸ್‌ನ ಕ್ರಿಸ್ ವೋಕ್ಸ್ (50ಕ್ಕೆ 3) ಮತ್ತು ಜಾರ್ಜ್ ಹಿಲ್ (56ಕ್ಕೆ 2) ಬೌಲಿಂಗ್‌ನಲ್ಲಿ ಮಿಂಚಿದರು.

ಮೊದಲ 'ಟೆಸ್ಟ್' ಪಂದ್ಯವು ಡ್ರಾನಲ್ಲಿ ಮುಕ್ತಾಯವಾಗಿತ್ತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಭಾರತ ಎ: 83 ಓವರ್‌ಗಳಲ್ಲಿ 7 ವಿಕೆಟ್‌ಗೆ 319 (ಕೆ.ಎಲ್.ರಾಹುಲ್ 116, ಕರುಣ್ ನಾಯರ್ 40, ಧ್ರುವ ಜುರೇಲ್ 52, ನಿತೀಶ್ ಕುಮಾರ್ ರೆಡ್ಡಿ 34; ಕ್ರಿಸ್ ವೋಕ್ಸ್ 50ಕ್ಕೆ 3, ಜಾರ್ಜ್ ಹಿಲ್ 56ಕ್ಕೆ 2).

ಎನ್‌ಸಿ ಕ್ಲಾಸಿಕ್: ಮಾರ್ಟಿನ್ ಕಣಕ್ಕೆ

ಬೆಂಗಳೂರು: ಜುಲೈ 5ರಂದು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ನೀರಜ್ ಚೋಪ್ರಾ ಕ್ಲಾಸಿಕ್ ಅಂತರರಾಷ್ಟ್ರೀಯ ಜಾವೆಲಿನ್ ಸ್ಪರ್ಧೆಗೆ 12 ಸ್ಪರ್ಧಾಳುಗಳ ಪಟ್ಟಿಯನ್ನು ಶುಕ್ರವಾರ ಅಂತಿಮಗೊಳಿಸಲಾಗಿದೆ.

ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಜಪಾನ್‌ನ ಜೆಂಕಿ ಡೀನ್ ಬದಲು ಪೋಲೆಂಡ್‌ನ ಮಾರ್ಟಿನ್ ಕೊನೆಕ್ನಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಸಹಯೋಗದೊಂದಿಗೆ ಡಬಲ್ ಒಲಿಂಪಿಕ್ ಪದಕ ವಿಜೇತ ನೀರಜ್ ಚೋಪ್ರಾ ಆಯೋಜಿಸಿರುವ ಈ ಕ್ರೀಡಾಕೂಟದಲ್ಲಿ ವಿದೇಶದ ಏಳು ಜಾವೆಲಿನ್ ತಾರೆಯರು ಮತ್ತು ಭಾರತದ ಐವರು ಸ್ಪರ್ಧಿಸಲಿದ್ದಾರೆ.

ಚೋಪ್ರಾ ಸೇರಿದಂತೆ ಸಚಿನ್ ಯಾದವ್, ಕಿಶೋರ್ ಜೇನಾ, ರೋಹಿತ್ ಯಾದವ್ ಮತ್ತು ಸಾಹಿಲ್ ಸಿಲ್ವಾಲ್ ಸ್ಪರ್ಧೆಯಲ್ಲಿರುವ ಭಾರತೀಯರು.

ಬೆಂಗಳೂರು ರೇಸ್

ಚಾಂಪಿಯನ್ಸ್ ವೇ ಗೆಲ್ಲುವ ನಿರೀಕ್ಷೆ

ನವಾಬ್ ಎಂ.ಅರ್ಶದ್ ಆಲಿ ಖಾನ್ ಮೆಮೋರಿಯಲ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಚಾಂಪಿಯನ್ಸ್ ವೇ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಸಾಂತೊರಿಣಿ ಸ್ಟಾರ್ ಪ್ಲೇಟ್; 1400 ಮೀ. ಸನ್‌ಲಿಟ್ ಪಾತ್ 6, ಮಾಸ್ಟರ್ ವೇ 1, ಸದರ್ನ್ ಅರಿಸ್ಟೊಕ್ರಾಟ್ 5
2. ಅಸ್ಕಾಟ್ ಪ್ಲೇಟ್; 1400 ಮೀ. ಎಲಿಸಿಯಮ್ 6, ಕಿಸ್ ಆಫ್ ಗ್ರೇ 7, ಮೆಷಿಯಾವೆಲ್ಲಿಯನ್ 2
3. ರೇರ್ ಜೆಮ್ ಪ್ಲೇಟ್–ಡಿ.2; 1200 ಮೀ. ಕ್ಯೂಬೆಕ್ 1, ಫೆಮ್ಮೆ ಫೆಟಲ್ 2, ಡೇರಿಯನ್ 3
4. ಬ್ರಿಗೇಡಿಯರ್ ಆರ್.ಸಿ.ಆರ್.ಹಿಲ್ ಮೆಮೋರಿಯಲ್ ಟ್ರೋಫಿ; 1800 ಮೀ. ಈಗಲ್ ಡೇ 7, ಸ್ಕಾರ್ಲೆಟ್ ಲೇಡಿ 2, ಮೈಂಡ್‌ಫುಲ್ 9
5. ನವಾಬ್ ಎಂ.ಅರ್ಶದ್ ಆಲಿ ಖಾನ್ ಮೆಮೋರಿಯಲ್ ಕಪ್; 1400 ಮೀ. ಚಾಂಪಿಯನ್ಸ್ ವೇ 3, ಭರತ್ 7, ಕಲಮಿಟ್ಸ 2
6. ರೇರ್ ಜೆಮ್ ಪ್ಲೇಟ್–ಡಿ.1 1200 ಮೀ. ಡಾನ್ ಕಾರ್ಲೋಸ್ 2, ಈಸ್ಟರ್ನ್ ಗೋಲ್ಡ್ 1, ಆದಿತ್ಯ 4
7. ಮಂಪ್ರೆ ಸ್ಟಡ್ ಪ್ಲೇಟ್; 1200 ಮೀ. ಮಜಲ್ ಟೋವ್ 1, ಡುಫಿ 6, ಲಾಟರ್‌ಬ್ರುನೆನ್ 4

ಉತ್ತಮ ಬೆಟ್: ಈಗಲ್ ಡೇ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಡಾ.ಸುನೀತಾಗೆ ನಾಲ್ಕು ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟು ಡಾ.ಸುನೀತಾ ರಾಣಾ ಅಗರವಾಲ್ ಅವರು ತೈವಾನ್‌ನಲ್ಲಿ ನಡೆದ ವಿಶ್ವ ಮಾಸ್ಟರ್ಸ್ ಕ್ರೀಡಾಕೂಟದಲ್ಲಿ ಒಂದು ಚಿನ್ನ ಸೇರಿದಂತೆ ನಾಲ್ಕು ಪದಕಗಳನ್ನು ಗೆದ್ದಿದ್ದಾರೆ.

ವೃತ್ತಿಯಲ್ಲಿ ವೈದ್ಯೆಯಾಗಿರುವ ಡಾ.ಸುನೀತಾ ಅವರು ಭಾರತವನ್ನು ಪ್ರತಿನಿಧಿಸಿದ್ದರು. ಅವರು ಮಹಿಳೆಯರ 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಿನ್ನ, 50 ಮೀ. ಬ್ಯಾಕ್‌ಸ್ಟ್ರೋಕ್, 50 ಮೀ. ಫ್ರೀಸ್ಟೈಲ್ ಮತ್ತು 100 ಮೀ. ಫ್ರೀಸ್ಟೈಲ್ ಈಜು ವಿಭಾಗಗಳಲ್ಲಿ ತಲಾ ಬೆಳ್ಳಿ ಪದಕ ಜಯಿಸಿದ್ದಾರೆ.

ನಾಲ್ಕು ವರ್ಷಕ್ಕೊಮ್ಮೆ ನಡೆಯುವ ವಿಶ್ವ ಮಾಸ್ಟರ್ಸ್ ಕ್ರೀಡಾಕೂಟದಲ್ಲಿ ವಿವಿಧ ರಾಷ್ಟ್ರಗಳಿಂದ 60,000ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದರು.



ಡಾ.ಸುನೀತಾ ರಾಣಾ ಅಗರವಾಲ್

ಇಂಡೊನೇಷ್ಯಾ ಓಪನ್: ಭಾರತದ ಸವಾಲು ಅಂತ್ಯ

ಜಕಾರ್ತಾ (ಪಿಟಿಐ): ವಿಶ್ವದ ಮಾಜಿ ಅಗ್ರಮಾನ್ಯ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಇಂಡೊನೇಷ್ಯಾ ಓಪನ್ ಸೂಪರ್ 1000 ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋಲನುಭವಿಸಿದರು. ಇದರೊಡನೆ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಮಲೇಷ್ಯಾದ ಮಾನ್ ವೀ ಚೊಂಗ್– ಟೀ ಕೈ ವುನ್ ಜೋಡಿ ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ 21–19, 21–16 ರಿಂದ ಮಾಜಿ ಚಾಂಪಿಯನ್ ಆದ ಸಾತ್ವಿಕ್– ಚಿರಾಗ್ ಜೋಡಿಯನ್ನು ಕೇವಲ 43 ನಿಮಿಷಗಳಲ್ಲಿ ಸೋಲಿಸಿತು. ಇವರೆಗಿನ ಐದು ಮುಖಾಮುಖಿಯಲ್ಲಿ ಇದು ಮಲೇಷ್ಯಾದ ಜೋಡಿಗೆ, ಸಾತ್ವಿಕ್–ಚಿರಾಗ್ ವಿರುದ್ಧ ಮೊದಲ ಜಯ.

ಇಂಡೊನೇಷ್ಯಾ ಮಾಸ್ಟರ್ಸ್ ಮತ್ತು ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಮಾನ್– ವುನ್ ಜೋಡಿ ಎದುರಾಳಿಗೆ ಚೇತರಿಸಿಕೊಳ್ಳಲು ಅವಕಾಶ ನೀಡಲಿಲ್ಲ.

ಸಾಮಾಜಿಕ ಮಾಧ್ಯಮಗಳಲ್ಲಿ ಪರಸ್ಪರ ಟೀಕಾ ಪ್ರಹಾರ

ಡೊನಾಲ್ಡ್ ಟ್ರಂಪ್– ಮಸ್ಕ್ ಜಟಾಪಟಿ

ವಾಷಿಂಗ್ಟನ್ (ಎಎಫ್‌ಪಿ/ ರಾಯಿಟರ್ಸ್): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉದ್ಯಮಿ ಇಲಾನ್ ಮಸ್ಕ್ ನಡುವಿನ 'ಸ್ನೇಹ' ಮುರಿದುಬಿದ್ದಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಇಬ್ಬರೂ ಪರಸ್ಪರ ಮಾತಿನ ಪ್ರಹಾರ ನಡೆಸಿದ್ದಾರೆ.

ಇದರ ಬೆನ್ನಲ್ಲೇ 'ಇಬ್ಬರೂ ಮಾತುಕತೆ ಮೂಲಕ ಭಿನ್ನಮತ ಶಮನಗೊಳಿಸಲಿದ್ದಾರೆ' ಎಂದು ವರದಿಯಾಗಿದೆ. ಆದರೆ ಶ್ವೇತಭವನದ ಅಧಿಕಾರಿಯೊಬ್ಬರು ಈ ವರದಿಯನ್ನು ಅಲ್ಲಗಳೆದಿದ್ದಾರೆ.

'ಟ್ರಂಪ್ ಮತ್ತು ಮಸ್ಕ್ ಮಾತುಕತೆ ನಡೆಸಲಿದ್ದು, ಇದು ಇಬ್ಬರ ನಡುವಿನ ವಿವಾದವನ್ನು ಬಗೆಹರಿಸಲಿದೆ' ಎಂದು ಶ್ವೇತಭವನ ಹೇಳಿರುವುದಾಗಿ 'ಪೊಲಿಟಿಕೊ' ವರದಿ ಮಾಡಿದೆ. ಇದನ್ನು ಶುಕ್ರವಾರ ಅಲ್ಲಗಳೆದ ಶ್ವೇತಭವನದ ಅಧಿಕಾರಿ, 'ಟ್ರಂಪ್ ಅವರು ಮಸ್ಕ್ ಜತೆ ಮಾತನಾಡುವ ಆಸಕ್ತಿ ಹೊಂದಿಲ್ಲ' ಎಂದಿದ್ದಾರೆ.

ಟ್ರಂಪ್ ಅವರ ತೆರಿಗೆ ಮತ್ತು ಖರ್ಚು ಮಸೂದೆಯನ್ನು ವಿರೋಧಿಸಿ ಮಸ್ಕ್ ಕಳೆದ ಕೆಲ ದಿನಗಳಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಟೀಕೆ ಮಾಡುತ್ತಲೇ ಇದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಟ್ರಂಪ್, 'ಮಸ್ಕ್ ಅವರ ವರ್ತನೆಯಿಂದಾಗಿ ನಿರಾಶೆಗೊಂಡಿದ್ದೇನೆ' ಎಂದಿದ್ದರು. ಆ ಬಳಿಕ ಇಬ್ಬರೂ ಪರಸ್ಪರ ಆರೋಪ–ಪ್ರತ್ಯಾರೋಪ ನಡೆಸಿದ್ದಾರೆ.

ಚುನಾವಣೆ ವೇಳೆ ರಿಪಬ್ಲಿಕನ್ ಪಕ್ಷಕ್ಕೆ 30 ಕೋಟಿ ಡಾಲರ್ (ಅಂದಾಜು ₹ 2,570 ಕೋಟಿ) ದೇಣಿಗೆ ನೀಡಿದ್ದ ಮಸ್ಕ್, 'ನನ್ನ ಬೆಂಬಲವಿಲ್ಲದೆ ಟ್ರಂಪ್ ಅವರು 2024ರ ಚುನಾವಣೆಯಲ್ಲಿ ಗೆಲ್ಲುತ್ತಿರಲಿಲ್ಲ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಟ್ರಂಪ್ ಅವರ ತೆರಿಗೆ ನೀತಿಯಿಂದ ಅಮೆರಿಕವು ಆರ್ಥಿಕ ಹಿಂಜರಿತದ ಅಪಾಯಕ್ಕೆ ಸಿಲುಕಿದೆ ಎಂದಿದ್ದರಲ್ಲದೆ, ಅಮೆರಿಕದ ಅಧ್ಯಕ್ಷರನ್ನು ವಾಗ್ದಂಡನೆಗೆ ಗುರಿಪಡಿಸುವ ಸಲಹೆಯನ್ನೂ ನೀಡಿದ್ದರು.


ಇದಕ್ಕೆ ತಿರುಗೇಟು ನೀಡಿದ್ದ ಟ್ರಂಪ್, ಸ್ಟಾರ್‌ಲಿಂಕ್ ಉಪಗ್ರಹ ಸೇವೆಯ ಬಳಕೆ ಸೇರಿದಂತೆ ಮಸ್ಕ್ ಅವರ ಕಂಪನಿಗಳು ಸರ್ಕಾರದ ಜತೆ ಮಾಡಿಕೊಂಡಿರುವ ಒಪ್ಪಂದಗಳನ್ನು ರದ್ದುಗೊಳಿಸುವ ಬೆದರಿಕೆ ಹಾಕಿದ್ದರು.

'ನಮ್ಮ ಬಜೆಟ್‌ನಲ್ಲಿ ಶತಕೋಟಿ ಡಾಲರ್‌ಗಳಷ್ಟು ಹಣವನ್ನು ಉಳಿಸಲು ಸುಲಭವಾದ ಮಾರ್ಗವೆಂದರೆ, ಮಸ್ಕ್ ಅವರಿಗೆ ನೀಡುತ್ತಿರುವ ಸಬ್ಸಿಡಿಗಳು ಮತ್ತು ಒಪ್ಪಂದಗಳನ್ನು ರದ್ದುಗೊಳಿಸುವುದಾಗಿದೆ' ಎಂದು ಟ್ರುತ್ ಸೋಷಿಯಲ್‌ನಲ್ಲಿ ಬರೆದುಕೊಂಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಮಸ್ಕ್, ನಾಸಾ ಗಗನಯಾತ್ರಿಗಳನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕರೆದೊಯ್ಯಲು ಬಳಸುವ ಸ್ಪೇಸ್‌ಎಕ್ಸ್ ಕಂಪನಿಯ 'ಡ್ರ್ಯಾಗನ್' ಬಾಹ್ಯಾಕಾಶ ಕೋಶದ ಸೇವೆಯನ್ನು ಸ್ಥಗಿತಗೊಳಿಸುವುದಾಗಿ ಹೇಳಿದ್ದರು. ಆದರೆ, ಶುಕ್ರವಾರ ಅವರು ತಮ್ಮ ಹೇಳಿಕೆ ವಾಪಸ್ ಪಡೆದಿದ್ದಾರೆ.

ಇಬ್ಬರ ನಡುವಿನ ಜಟಾಪಟಿಯ ಬೆನ್ನಲ್ಲೇ ಮಸ್ಕ್ ಅವರ ಟೆಸ್ಲಾ ಕಂಪನಿಯ ಷೇರುಗಳ ಮೌಲ್ಯ ಗುರುವಾರ ಶೇಕಡ 14ರಷ್ಟು ಕುಸಿತ ಕಂಡಿತ್ತು.

ಮಸ್ಕ್ ಅವರು ಅಮೆರಿಕದ ಅಧ್ಯಕ್ಷರ ಉನ್ನತ ಸಲಹೆಗಾರ ಸ್ಥಾನವನ್ನು ಈಚೆಗೆ ತೊರೆದಿದ್ದರು. ಅಮೆರಿಕ ಸರ್ಕಾರದ ದಕ್ಷತಾ ಇಲಾಖೆಯ (ಡಿಒಜಿಇ) ನೇತೃತ್ವ ವಹಿಸಿದ್ದ ಅವರು ಫೆಡರಲ್ ಅಧಿಕಾರಶಾಹಿಯ ಖರ್ಚು, ವೆಚ್ಚಗಳನ್ನು ಕಡಿಮೆಗೊಳಿಸಲು ಪ್ರಯತ್ನಿಸಿದ್ದರು.



ಇಲಾನ್ ಮಸ್ಕ್ ಡೊನಾಲ್ಡ್ ಟ್ರಂಪ್

ಟ್ರಂಪ್ ನಿಭಾಯಿಸಬಲ್ಲರು: ರಷ್ಯಾ

ಮಾಸ್ಕೊ (ರಾಯಿಟರ್ಸ್): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಲಾನ್ ಮಸ್ಕ್ ನಡುವಿನ ವಿವಾದದಲ್ಲಿ ತಾನು ಮಧ್ಯಪ್ರವೇಶಿಸುವುದಿಲ್ಲ ಎಂದು ರಷ್ಯಾ ಶುಕ್ರವಾರ ಹೇಳಿದೆ. ಟ್ರಂಪ್ ಅವರು ಪರಿಸ್ಥಿತಿಯನ್ನು ನಿಭಾಯಿಸಬಲ್ಲರು ಎಂಬ ವಿಶ್ವಾಸವಿದೆ ಎಂದಿದೆ.

'ಇಬ್ಬರ ನಡುವಿನ ಜಗಳವು ಅಮೆರಿಕದ ಆಂತರಿಕ ವಿಷಯ' ಎಂದು ರಷ್ಯಾ ಅಧ್ಯಕ್ಷರ ಕಚೇರಿ ಕ್ರೆಮ್ಲಿನ್‌ನ ವಕ್ತಾರ ಡಿಮಿಟ್ರಿ ಪೆಸ್ಕೋವ್ ಹೇಳಿದ್ದಾರೆ.

ವಿಶ್ವಕಪ್ ಫುಟ್‌ಬಾಲ್: ಉಜ್ಬೇಕಿಸ್ತಾನ, ಜೋರ್ಡಾನ್ ಅರ್ಹತೆ

ದೋಹಾ (ಎಪಿ): ಚೀನಾ ತಂಡವು, ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆಯಲು ವಿಫಲವಾಯಿತು. ಉಜ್ಬೇಕಿಸ್ತಾನ ಮತ್ತು ಜೋರ್ಡಾನ್ ತಂಡಗಳು ಇದೇ ಮೊದಲ ಬಾರಿ ಅರ್ಹತೆ ಪಡೆದಿವೆ.

ಉತ್ತರ ಅಮೆರಿಕದಲ್ಲಿ (ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ ಆತಿಥ್ಯದಲ್ಲಿ) ಮುಂದಿನ ವರ್ಷ ಟೂರ್ನಿ ನಿಗದಿಯಾಗಿದ್ದು, ಇದೇ ಮೊದಲ ಬಾರಿ 48 ತಂಡಗಳು ಪಾಲ್ಗೊಳ್ಳುತ್ತಿವೆ. ಏಷ್ಯಾ ಖಂಡದಿಂದ ಪಾಲ್ಗೊಳ್ಳುವ ತಂಡಗಳ ಕೋಟಾ ಸಂಖ್ಯೆ ಹೆಚ್ಚಿಸಿದ ಲಾಭ ಈ ತಂಡಗಳಿಗೆ ಸಿಗುತ್ತಿವೆ.

ಏಷ್ಯಾದ ಫುಟ್‌ಬಾಲ್ ಶಕ್ತಿಯಾದ ದಕ್ಷಿಣ ಕೊರಿಯಾ ಗುರುವಾರ ರಾತ್ರಿ ನಡೆದ 'ಬಿ' ಗುಂಪಿನ ಅಂತಿಮ ಅರ್ಹತಾ ಪಂದ್ಯದಲ್ಲಿ 2–0 ಗೋಲುಗಳಿಂದ ಇರಾನ್ ತಂಡವನ್ನು ಸೋಲಿಸುವ ಮೂಲಕ ಸತತ 11ನೇ ಬಾರಿ ವಿಶ್ವಕಪ್ ಫೈನಲ್ ಸುತ್ತಿಗೆ ಅರ್ಹತೆ ಪಡೆಯಿತು.


ಆಸ್ಟ್ರೇಲಿಯಾ ತಂಡವು, ಈಗಾಗಲೇ ಅರ್ಹತೆ ಪಡೆದಿರುವ ಜಪಾನ್ ತಂಡವನ್ನು 1–0ರಿಂದ ಸೋಲಿಸಿತು. ಚೀನಾ 0–1ರಿಂದ ಇಂಡೊನೇಷ್ಯಾಕ್ಕೆ ಸೋತಿದ್ದು ದುಬಾರಿಯಾಯಿತು.

ಯುಎಇ ವಿರುದ್ಧ 0–0 ಡ್ರಾ ಫಲಿತಾಂಶವು ಉಜ್ಬೇಕಿಸ್ತಾನ ಕ್ಕೆ 'ಎ' ಗುಂಪಿನಿಂದ ಇರಾನ್ ನಂತರ ಎರಡನೇ ತಂಡವಾಗಿ ಅರ್ಹತೆ ಪಡೆಯಲು ನೆರವಾಯಿತು. 'ಬಿ' ಗುಂಪಿನಿಂದ ದಕ್ಷಿಣ ಕೊರಿಯಾ ಮತ್ತು ಜೋರ್ಡಾನ್ ವಿಶ್ವಕಪ್‌ಗೆ ಅರ್ಹತೆ ಪಡೆದವು.

ಡಿಎನ್‌ಎ, ಆರ್‌ಸಿಬಿಯ ನಾಲ್ವರ ಬಂಧನ

ಒಂದನೇ ಪುಟದಿಂದ...

ಬಂಧಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ 41ನೇ ಎಸಿಜೆಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಲಯವು ಆರೋಪಿಗಳಿಗೆ ಜೂನ್ 19ರ ವರೆಗೆ ನ್ಯಾಯಾಂಗ ಬಂಧನ ವಿಧಿಸಿದ್ದು, ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ನಿಖಿಲ್ ಸೋಸಲೆ

ಘಟನೆಗೆ ಕಾರಣರಾದವರ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ ಬೆನ್ನಲ್ಲೇ ವಿಮಾನದ ಮೂಲಕ ಮುಂಬೈಗೆ ಪ್ರಯಾಣಿಸಲು ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಲ್ವರು ಆರೋಪಿಗಳು ತೆರಳಿದ್ದರು. ಸಿಸಿಬಿ ಹಾಗೂ ಕಬ್ಬನ್ ಪಾರ್ಕ್ ಠಾಣೆಯ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಅವರನ್ನು ಬಂಧಿಸಿದ್ದಾರೆ ಎಂದು ಗೊತ್ತಾಗಿದೆ.

ಠಾಣೆಯಲ್ಲಿ ವಿಚಾರಣೆ: ಬಂಧಿತ ನಾಲ್ವರೂ ಆರೋಪಿಗಳನ್ನು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಶೇಷಾದ್ರಿಪುರ ಉಪ ವಿಭಾಗದ ಎಸಿಪಿ ಪ್ರಕಾಶ್ ಅವರು ಪ್ರಾಥಮಿಕ ವಿಚಾರಣೆ ನಡೆಸಿದರು. ಆರೋಪಿಗಳ ಹೇಳಿಕೆ ದಾಖಲಿಸಿಕೊಂಡರು.

'ಪೊಲೀಸರು ಅನುಮತಿ ನಿರಾಕರಿಸಿದ್ದ ನಂತರವೂ ವಿಧಾನಸೌಧದಿಂದ ಚಿನ್ನಸ್ವಾಮಿ ಕ್ರೀಡಾಂಗಣದವರೆಗೂ ವಿಜಯೋತ್ಸವ ಮೆರವಣಿಗೆ ನಡೆಸಲಾಗುವುದು ಎಂದು ನಿಖಿಲ್ ಸೋಸಲೆ ಅವರು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿ ಬಳಿಕ ಅಳಿಸಿ ಹಾಕಿದ್ದರು. ಅಲ್ಲದೇ ಕ್ರೀಡಾಂಗಣದಲ್ಲಿ ನಡೆಯುವ ವಿಜಯೋತ್ಸವಕ್ಕೂ ಉಚಿತ ಟಿಕೆಟ್ ಎಂದು ಘೋಷಿಸಿದ್ದರು. ಇದರಿಂದ ದೊಡ್ಡ ಸಂಖ್ಯೆಯಲ್ಲಿ ಆರ್‌ಸಿಬಿ ಅಭಿಮಾನಿಗಳು ಜಮಾವಣೆಗೊಂಡು ಕಾಲ್ತುಳಿತ ಸಂಭವಿಸಿದೆ. ಅದೇ ಕಾರಣಕ್ಕೆ ಬಂಧಿಸಿ ವಿಚಾರಣೆ ನಡೆಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಿಖಿಲ್ ಪರ ವಾದ ಮಂಡಿಸಿದ ವಕೀಲ, 'ಸರ್ಕಾರ ಮತ್ತು ಪೊಲೀಸ್ ಇಲಾಖೆ ಸಂಪೂರ್ಣವಾಗಿ ಈ ಘಟನೆಗೆ ಹೊಣೆ. ನಮ್ಮ ಪೊಲೀಸರು ಜೂನ್ 3ರ ರಾತ್ರಿ ಪೂರ್ತಿ ಕೆಲಸ ಮಾಡಿದ್ದಾರೆ. ಹೀಗಾಗಿ, ಭದ್ರತೆ ನೀಡುವುದಿಲ್ಲ ಎಂದು ಪೊಲೀಸ್ ಇಲಾಖೆ ಹೇಳಿತ್ತು. ಸರ್ಕಾರದ ಪ್ರತಿನಿಧಿಯೊಬ್ಬರು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ತೆರಳಿ ಆಟಗಾರರನ್ನು ಸ್ವಾಗತ ಮಾಡಿ, ಕರೆದುಕೊಂಡು ಬಂದು ವಿಧಾನಸೌಧದ ಬಳಿ ಕಾರ್ಯಕ್ರಮ ನಡೆಸಿದ್ದಾರೆ. ಆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ರಾಜ್ಯಪಾಲರು ಭಾಗವಹಿಸಿದ್ದರು. ಅವರ ಮೇಲೆ ಕ್ರಮ ಏನು' ಎಂದು ಪ್ರಶ್ನಿಸಿದರು.

ಸಿಎಂ, ಡಿಸಿಎಂ, ಗೃಹ ಸಚಿವರ ವಿರುದ್ಧ ದೂರು

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ ಅವರು ಮೇಲೆ ಕಾನೂನು ಕ್ರಮ ಜರುಗಿಸುವಂತೆ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ದೂರು ನೀಡಿದ್ದಾರೆ.

ಪೊಲೀಸರು ದೂರು ಸ್ವೀಕರಿಸಿ ಮುಂದಿನ ಕಾನೂನು ಪ್ರಕ್ರಿಯೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಸರ್ಕಾರದ ನಿರ್ಲಕ್ಷ್ಯ, ಯಾವುದೇ ಪೂರ್ವ ತಯಾರಿ ಕೈಗೊಳ್ಳದೇ ಇರುವುದು, ಸಾವು–ನೋವು ಉಂಟಾಗಬಹುದು ಎಂಬ ಮಾಹಿತಿ ತಿಳಿದಿದ್ದರೂ ಅಧಿಕಾರದ ದುರ್ಬಳಕೆ ಹಾಗೂ ಸಾರ್ವಜನಿಕ ಹಣದ ದುರುಪಯೋಗ ಮಾಡಿರುವ ಮೂವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರ್‌ಸಿಬಿ, ಡಿಎನ್‌ಎ, ಕೆಎಸ್‌ಸಿಎ ವಿರುದ್ಧ ಮತ್ತೆ ಎರಡು ಎಫ್‌ಐಆರ್

ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಮತ್ತೆ ಎರಡು ಎಫ್‌ಐಆರ್‌ಗಳು ದಾಖಲಾಗಿವೆ.

ಈ ಪ್ರಕರಣಗಳಲ್ಲೂ ಆರ್‌ಸಿಬಿ, ಡಿಎನ್‌ಎ ಹಾಗೂ ಕೆಎಸ್‌ಸಿಎ ಆಡಳಿತ ಮಂಡಳಿಯನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ಕಾಲ್ತುಳಿತದಲ್ಲಿ ಗಾಯಗೊಂಡಿರುವ ರೋಲನ್ ಗೊಮೆಸ್ ಮತ್ತು ವೇಣು ನೀಡಿದ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕಾಲ್ತುಳಿತದಿಂದ ರೋಲನ್ ಗೊಮೆಸ್ ಅವರು ಖಾಸಗಿ ಆಸ್ಪತ್ರೆಯಲ್ಲಿ ಹಾಗೂ ವೇಣು ಅವರು ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದರು.


it's on
Sangeetha 51st Anniversary Sale
SANGEETHA 1 RUPEE MARGIN SALE
ನಿಮ್ಮ ಭೇಟಿಗೆ ನಮ್ಮ ಕೊಡುಗೆ
₹5001
UP TO ₹10000 CASHBACK IF PRICE DROPS
+
24 MONTHS DAMAGE PROTECTION
PHONE BROKE? GET UP TO 70% OFF ON SECOND PHONE
GET TWS @ ₹99 WITH EVERY SMARTPHONE
iPhone 16
SAMSUNG Galaxy S25 Ultra
oppo Reno 13
vivo V50
Xiaomi 15
13s
NOTHING (R) (3a) Pro
Pixel 9a
realme GT 7T
5G Phone
(4GB + 128GB)
@ ₹7999
Robot Vacuum Cleaners
Televisions
Tabs
Smart Sunglasses
Dashcams
Air Conditioners
24 MONTHS NO COST EMI
BAJAJ FINANCE
HDB FINANCIAL SERVICES
TVS CREDIT
IDFC FIRST Bank
UPTO 5000 CASHBACK
5% INSTANT DISCOUNT#
SBI card
#Min. Trxn.: ₹15,000; Max. Discount: ₹3,750 per card; Also valid on EMI Trxns.; Validity: 31 May - 06 Jul 2025. T&C Apply.
*T&C apply. Select offers applicable on Samsung products.
Shop @ sangeetha.com & get
30 Minutes DELIVERY
ಸಂಗೀತಾ
51 YEARS ▪ 7 STATES ▪ 800+ STORES ▪ 60 MILLION DELIGHTED CUSTOMERS
Feedback/suggestions: support@sangeethamobiles.com | SangeethaMobilesIndia | Sangeetha.since1974 | T & C: www.sangeetha.com | Customer Care No.: 080-69246924